ಸಂಪುಟ: 22, ಸಂಚಿಕೆ: 146, ಪುಟಗಳು: 8, ಗುರುವಾರ, 6 ಮಾರ್ಚ್ 2025 RNI NO. KARKAN/2002/08054
epaper: www.sanjemugilu.com



ಸುದ್ದಿಗಳ ಹೊನಲು

# ಸಂಜೆ ಮುಗಿಲು

ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ

ನೇಣು ಸಾರಥ್ಯದಲ್ಲಿ...

ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ
₹3


ದಶಪ್ರಮತಿ ಮುದ್ರಣಾಲಯ
dashapramathi mudranalaya
PRE-PRESS PRINTERS
Contact: +91 9483589085 | e-mail: dashapramathimudranalaya@gmail.com
We Undertake Printing of
Newspapers | Tabloids | Magazines


**ಸುಭಾಷಿತ**

ಬದುಕಿ ಇತರರನ್ನೂ ಬದುಕಲು ಬಿಡಿ ಎಂಬುದೇ ನಮ್ಮ ಜೀವನದ ಏಕೈಕ ಮಂತ್ರವಾಗಬೇಕು.
-ಮಹಾತ್ಮ ಗಾಂಧೀಜಿ

**ಪಂಚಾಂಗ**

(ಗುರುವಾರ 6, ಮಾರ್ಚ್-2025)

- ಶ್ರೀ ಕ್ರೋಧಿನಾಮ ಸಂವತ್ಸರ,
- ಉತ್ತರಾಯಣ, ಶಿಶಿರ ಋತು,
- ಫಾಲ್ಗುಣ ಮಾಸ, ಶುಕ್ಲ ಪಕ್ಷ,
- ಸಪ್ತಮಿ / ಅಷ್ಟಮಿ,
- ಗುರುವಾರ, ರೋಹಿಣಿ ನಕ್ಷತ್ರ.
- ರಾಹುಕಾಲ: 02:05 ರಿಂದ 03:35
- ಗುಳಿಕಕಾಲ: 09:35 ರಿಂದ 11:05
- ಯಮಗಂಡಕಾಲ: 06:36 ರಿಂದ 08:05

## ಸಂಕ್ಷಿಪ್ತ ಸುದ್ದಿ

### ತನಿಖೆ ಹೆಸರಿನಲ್ಲಿ ಪೊಲೀಸ್ ಕಿರುಕುಳ ಆರೋಪ ವ್ಯಕ್ತಿ ಆತ್ಮಹತ್ಯೆ



**ಬೆಂಗಳೂರು:** ಸೈಟ್ ವಿಚಾರದ ತನಿಖೆ ಹೆಸರಿನಲ್ಲಿ ಪೊಲೀಸ್ ಅಧಿಕಾರಿಯು ಕಿರುಕುಳ ನೀಡುತ್ತಿದ್ದರು ಎಂದು ವ್ಯಕ್ತಿಯೊಬ್ಬ ಆತ್ಮಹತ್ಯೆಗೆ ಶರಣಾಗಿರುವ ಘಟನೆ ಕಾಮಾಕ್ಷಿಪಾಳ್ಯದ ಶ್ರೀನಿವಾಸನಗರದಲ್ಲಿ ನಡೆದಿದೆ.

ಶ್ರೀನಿವಾಸನಗರದ ಮಹದೇವಯ್ಯ ಮೃತ ದುರ್ದೈವಿ. ಸೈಟ್ ವಿಚಾರಕ್ಕೆ ಸಂಬಂಧಿಸಿದಂತೆ ನಕಲಿ ದಾಖಲೆ ಸೃಷ್ಟಿಸಿದ ಆರೋಪದಡಿ ಮಹದೇವಯ್ಯ ವಿರುದ್ಧ ಕಳೆದ ಫೆಬ್ರವರಿಯಲ್ಲಿ ರಾಜಗೋಪಾಲನಗರ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಪುಟ 2

### ಪಾಕ್‌ನ ಬಲೂಚಿಸ್ತಾನದಲ್ಲಿ ಸ್ಫೋಟ ಪ್ರಕರಣ ಐವರ ಸಾವು

**ಇಸ್ಲಾಮಾಬಾದ್:** ಬಲೂಚಿಸ್ತಾನದ ಖುಜ್ದಾರ್ ಜಿಲ್ಲೆಯ ಮಾರುಕಟ್ಟೆಯಲ್ಲಿ ಮೋಟಾರ್‌ಬೈಕಿಗೆ ಹಾಕಲಾಗಿದ್ದ ಐಇಡಿ ಸ್ಫೋಟಗೊಂಡು ನಾಲ್ವರು ಸಾವನ್ನಪ್ಪಿರುವ ಘಟನೆ ನಡೆದಿದೆ. ಘಟನೆಯಲ್ಲಿ ಐದು ಮಂದಿ ಗಾಯಗೊಂಡಿದ್ದಾರೆ. ನಾಲ್ ಪೊಲೀಸ್ ಠಾಣೆ ಅಧಿಕಾರಿ ಬಹಾವಲ್ ಖಾನ್ ಪಿಂದ್ರಾನಿ ಅವರು ಸಾವು-ನೋವುಗಳ ಬಗ್ಗೆ ದೃಢಪಡಿಸಿದ್ದಾರೆ. ಗಾಯಾಳುಗಳಲ್ಲಿ ಒಬ್ಬರ ಸ್ಥಿತಿ ಗಂಭೀರವಾಗಿದೆ ಎಂದು ತಿಳಿಸಿದ್ದಾರೆ. ಸ್ಫೋಟಕವನ್ನು ಮೋಟಾರ್‌ಸೈಕಲ್‌ಗೆ ಅಳವಡಿಸಲಾಗಿತ್ತು. ಕಾರಿನ ಪಕ್ಕದಲ್ಲಿ ಬೈಕ್ ನಿಲ್ಲಿಸಿದ ನಂತರ ರಿಮೋಟ್ ಮೂಲಕ ಸ್ಫೋಟಿಸಲಾಗಿದೆ ಎಂದು ವರದಿಯಾಗಿದೆ. ಬಾಂಬ್ ನಿಷ್ಕ್ರಿಯ ದಳ ಸ್ಥಳದಲ್ಲಿದ್ದು, ಪರಿಶೀಲನೆ ನಡೆಸುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಖುಜ್ದಾರ್ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಜಾವೇದ್ ಜೆಹ್ರಿ, ಮಾರುಕಟ್ಟೆಯ ಸುತ್ತಮುತ್ತಲಿನ ಕಾಲೇಜು ಬಳಿ ಸ್ಫೋಟ ಸಂಭವಿಸಿದೆ. ವಾಹನಗಳು ಕೂಡ ಸುಟ್ಟುಹೋಗಿವೆ. ಗಾಯಾಳುಗಳನ್ನು ಚಿಕಿತ್ಸೆಗಾಗಿ ಖುಜ್ದಾರ್ ಬೋಧನಾ ಆಸ್ಪತ್ರೆಗೆ ಕರೆದೊಯ್ಯಲಾಗಿದೆ ಎಂದು ಹೇಳಿದ್ದಾರೆ.



## ಬಾಂಗ್ಲಾದೇಶ, ಪಾಕಿಸ್ತಾನದ 137 ವಲಸಿಗರು ಶೀಘ್ರದಲ್ಲೇ ಗಡಿಪಾರು





**ಬೆಂಗಳೂರು:** ರಾಜ್ಯದಲ್ಲಿ 25 ಪಾಕಿಸ್ತಾನಿಗಳು ಸೇರಿದಂತೆ 137 ಅಕ್ರಮ ವಲಸಿಗರನ್ನು ಬಂಧಿಸಲಾಗಿದೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ ಹೇಳಿದ್ದಾರೆ. ವಿದೇಶಾಂಗ ಸಚಿವಾಲಯದ ಮೂಲಕ ಅವರ ರಾಯಭಾರ ಕಚೇರಿಗಳಿಗೆ ಮಾಹಿತಿ ನೀಡುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ ನಂತರ ಅವರನ್ನು ಶೀಘ್ರದಲ್ಲೇ ಆಯಾ ದೇಶಗಳಿಗೆ ಗಡಿಪಾರು ಮಾಡಲಾಗುವುದು ಎಂದು ವಿಧಾನಸಭೆಯಲ್ಲಿ ಹಿರಿಯ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರಿಗೆ ನೀಡಿದ ಉತ್ತರದಲ್ಲಿ ತಿಳಿಸಿದ್ದಾರೆ. ಬೆಂಗಳೂರು ನಗರದಲ್ಲಿ 84, ಬೆಂಗಳೂರು ಗ್ರಾಮಾಂತರದಲ್ಲಿ 27, ಶಿವಮೊಗ್ಗದಲ್ಲಿ 12, ಹಾಸನದಲ್ಲಿ ಮೂವರು, ಮಂಗಳೂರಿನಲ್ಲಿ ಒಬ್ಬರು ಮತ್ತು ಉಡುಪಿಯಲ್ಲಿ 10 ಅಕ್ರಮ ವಲಸಿಗರು ಪತ್ತೆಯಾಗಿದ್ದಾರೆ ಎಂದು ಅವರು ಮಾಹಿತಿ ನೀಡಿದರು. ವಿಜಯಪುರ ಜಿಲ್ಲೆಯಲ್ಲಿ, 2016 ರಲ್ಲಿ 33 ಬಾಂಗ್ಲಾದೇಶಿಗಳನ್ನು ಪತ್ತೆಹಚ್ಚಲಾಗಿದ್ದು, ಅವರೆಲ್ಲರನ್ನೂ ಆಗ ಗಡೀಪಾರು ಮಾಡಲಾಗಿದೆ . ವಿಜಯಪುರದಲ್ಲಿ ಈಗ ಯಾವುದೇ ಅಕ್ರಮ ವಲಸಿಗರು ಇಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಪುಟ 2

## ಲೋಕಾಯುಕ್ತ ಕಾರ್ಯಾಚರಣೆ | ರಾಜ್ಯದ 8 ಕಡೆ ದಾಳಿ

# ಬೆಳ್ಳಂಬೆಳಗ್ಗೆ ಭ್ರಷ್ಟರ ಬೇಟೆ

**ಕೋಲಾರದಲ್ಲಿರುವ ಬೆಸ್ಕಾಂ ಎಇಇ ಜಿ.ನಾಗರಾಜ್, ಕಲಬುರಗಿ ಲೋಕೋಪಯೋಗಿ ಚೀಫ್ ಇಂಜಿನಿಯರ್ ಜಗನ್ನಾಥ್, ದಾವಣಗೆರೆಯಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ವಿಭಾಗದ ಜಿಲ್ಲಾ ಸಂಖ್ಯಾಶಾಸ್ತ್ರೀಯ ಅಧಿಕಾರಿ ಜಿ.ಎಸ್. ನಾಗರಾಜು, ತುಮಕೂರಿನಲ್ಲಿ ತಾವರೆಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಖ್ಯ ವೈದ್ಯಾಧಿಕಾರಿ ಡಾ. ಜಗದೀಶ್ ಅವರ ಮನೆಗಳ ಮೇಲೆ ಲೋಕಾಯುಕ್ತ ದಾಳಿ..!**

**ಬೆಂಗಳೂರು:** ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ 7 ಜಿಲ್ಲೆಗಳಲ್ಲಿ ಗುರುವಾರ ಬೆಳಗ್ಗೆ ಲೋಕಾಯುಕ್ತ ಪೊಲೀಸರು ಭ್ರಷ್ಟ ಅಧಿಕಾರಿಗಳ ನಿವಾಸ, ಕಚೇರಿಗಳ ಮೇಲೆ ದಾಳಿ ನಡೆಸಿ ಶೋಧ ನಡೆಸಿದ್ದಾರೆ. ಬೆಂಗಳೂರು, ಕೋಲಾರ, ಕಲಬುರಗಿ, ದಾವಣಗೆರೆ, ತುಮಕೂರು, ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ಲೋಕಾಯುಕ್ತ ದಾಳಿ ನಡೆದಿದೆ. 8 ಮಂದಿ ಭ್ರಷ್ಟ ಅಧಿಕಾರಿಗಳ ನಿವಾಸ, ಕಚೇರಿಗಳಲ್ಲಿ ದಾಳಿ ನಡೆಸಿ ಪರಿಶೀಲನೆ ನಡೆಸಲಾಗುತ್ತಿದೆ. ಬೆಂಗಳೂರಿನ ಡಿಪಿಎಆರ್ ಚೀಫ್ ಇಂಜಿನಿಯರ್ ಟಿ.ಡಿ.ನಂಜುಡಪ್ಪ, ಬಿಬಿಎಂಪಿಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಹೆಚ್.ಬಿ.ಕಲ್ಲೇಶಪ್ಪ ಮನೆಗಳ ಮೇಲೆ ದಾಳಿ ನಡೆಸಲಾಗಿದೆ. ಕೋಲಾರದಲ್ಲಿರುವ ಬೆಸ್ಕಾಂ ಎಇಇ ಜಿ.ನಾಗರಾಜ್, ಕಲಬುರಗಿ ಲೋಕೋಪಯೋಗಿ ಚೀಫ್ ಇಂಜಿನಿಯರ್ ಜಗನ್ನಾಥ್, ದಾವಣಗೆರೆಯಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ವಿಭಾಗದ ಜಿಲ್ಲಾ ಸಂಖ್ಯಾಶಾಸ್ತ್ರೀಯ ಅಧಿಕಾರಿ ಜಿ.ಎಸ್. ನಾಗರಾಜು, ತುಮಕೂರಿನಲ್ಲಿ ತಾವರೆಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಖ್ಯ ವೈದ್ಯಾಧಿಕಾರಿ ಡಾ. ಜಗದೀಶ್ ಅವರ ಮನೆಗಳ ಮೇಲೆ ಲೋಕಾಯುಕ್ತ ದಾಳಿ ನಡೆದಿದೆ.

ಪುಟ 2






ದಾವಣಗೆರೆಯಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ವಿಭಾಗದ ಜಿಲ್ಲಾ ಸಂಖ್ಯಾಶಾಸ್ತ್ರೀಯ ಅಧಿಕಾರಿ ಜಿ.ಎಸ್. ನಾಗರಾಜು ಹಾಗೂ ಅವರ ಮನೆಯಲ್ಲಿ ಸಿಕ್ಕ ಚಿನ್ನಾಭರ

## 1 ಕೆಜಿ ಚಿನ್ನ ಸಾಗಣೆಗೆ ನಟಿ ರನ್ಯಾಗೆ 4ರಿಂದ 5 ಲಕ್ಷ ರೂ.ಕಮಿಷನ್

### ನಟಿ ಕೇವಲ ಪಾತ್ರಧಾರಿ, ಅಸಲಿ ಕಿಂಗ್‌ಪಿನ್ ಬೇರೆ!

**ಬೆಂಗಳೂರು:** ಚಿನ್ನ ಕಳ್ಳಸಾಗಣೆಯಲ್ಲಿ ನಟಿ ರನ್ಯಾ ರಾವ್ ಬಂಧನ ಪ್ರಕರಣಕ್ಕೆ ಮತ್ತೊಂದು ಸ್ಫೋಟಕ ತಿರುವು ಸಿಕ್ಕಿದೆ. ನಟಿ ರನ್ಯಾರನ್ನು ಬಂಧಿಸಿರುವ ಡಿಆರ್‌ಐ ಅಧಿಕಾರಿಗಳ ತನಿಖೆಯಲ್ಲಿ ಮತ್ತಷ್ಟು ಸ್ಫೋಟಕ ವಿಚಾರಗಳು ಬಯಲಾಗಿವೆ. ರನ್ಯಾ ಕೇವಲ ಪಾತ್ರಧಾರಿ, ಅಸಲಿ ಕಿಂಗ್ ಬೇರೆಯೇ ಇದ್ದಾರೆ ಎನ್ನಲಾಗಿದೆ. 17 ಕೋಟಿ ಬೆಲೆಯ ಚಿನ್ನ ಖರೀದಿ ಮಾಡುವಷ್ಟು ರನ್ಯಾ ಶ್ರೀಮಂತಳಲ್ಲ. ರನ್ಯಾ ಹಿರಿಯ ಪೊಲೀಸ್ ಅಧಿಕಾರಿಯ ಮಲಮಗಳು. ಆಕೆಯನ್ನು ಬಳಸಿಕೊಂಡರೆ ಸುಲಭವಾಗಿ ಚಿನ್ನ ಸಾಗಾಟ ಮಾಡಬಹುದಾಗಿದೆ. ಇದೇ ಲೆಕ್ಕಾಚಾರದಲ್ಲಿ ರನ್ಯಾಳನ್ನು ಚಿನ್ನ ಸಾಗಾಟದಲ್ಲಿ ಬಳಸಿಕೊಳ್ಳಲಾಗಿದೆ ಎಂದು ತಿಳಿದುಬಂದಿದೆ. ಈ ಅಕ್ರಮ ಚಿನ್ನ ಸಾಗಾಟದಲ್ಲಿ ಏರ್ಪೋರ್ಟ್‌ನ ಕೆಲ ಅಧಿಕಾರಿಗಳು ಭಾಗಿಯಾಗಿರುವ ಶಂಕೆ ವ್ಯಕ್ತವಾಗಿದ್ದು, ಈ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ.

ಪುಟ 2





## ವಿಸಿ ನಾಲೆಗೆ ಕೊನೆಗೂ ತಡೆಗೋಡೆ ನಿರ್ಮಾಣ

**ಮಂಡ್ಯ:** ವಿಸಿ ನಾಲೆಗೆ ತಡೆಗೋಡೆ ಇಲ್ಲದಿದ್ದರಿಂದ ಕಳೆದ 6 ವರ್ಷಗಳಲ್ಲಿ ನಾಲೆಗೆ ಬಿದ್ದು 46 ಮಂದಿ ಪ್ರಾಣ ಕಳೆದುಕೊಂಡಿದ್ದರು. ಇದೀಗ ಎಚ್ಚೆತ್ತ ಜಿಲ್ಲಾಡಳಿತ ತಡೆಗೋಡೆ ನಿರ್ಮಾಣಕ್ಕೆ ಮುಂದಾಗಿದೆ. ವಿಸಿ ನಾಲೆ ಎಂದರೆ ರೈತರ ಭೂಮಿಗೆ ನೀರುಣಿಸುವ ಅಕ್ಷಯಪಾತ್ರೆ ಎನ್ನಲಾಗುತ್ತಿತ್ತು. ಆದರೆ ಕಳೆದ 6 ವರ್ಷಗಳಿಂದ ಈ ನಾಲೆಯ ವ್ಯಾಪ್ತಿಯಲ್ಲಿ ನಡೆದ ಸಾಲು ಸಾಲು ದುರಂತಗಳಿಂದ ಜನರು ಇದನ್ನು ಸಾವಿನ ನಾಲೆ ಎಂದು ಕರೆಯುವಂತಾಗಿತ್ತು.

ವಿಸಿ ನಾಲೆಯ ದಡದ ರಸ್ತೆ ಅತ್ಯಂತ ಕಿರಿದಾಗಿರುವುದರಿಂದ ಇಲ್ಲಿ ವಾಹನ ಸವಾರರು ಸ್ವಲ್ಪ ಯಾಮಾರಿದರೂ ವಾಹನ ಸಮೇತ ನಾಲೆಗೆ ಬೀಳುತ್ತಿದ್ದರು. ನಾಲೆ ವ್ಯಾಪ್ತಿಯ ಡೇಂಜರ್ ಝೋನ್‌ಗಳಲ್ಲಿ ತಡೆಗೋಡೆ ಇಲ್ಲದಿರುವುದು ಈ ಅವಘಡಕ್ಕೆ ಪ್ರಮುಖ ಕಾರಣವಾಗಿತ್ತು.





## ರಾಜ್ಯದಲ್ಲಿ ಹೆಚ್ಚಿದೆ ಹಕ್ಕಿಜ್ವರ ಆತಂಕ

**ಬೆಂಗಳೂರು:** ರಾಜ್ಯದಲ್ಲಿ ಹಕ್ಕಿಜ್ವರ ಹೆಚ್ಚಾಗುತ್ತಿದ್ದು, ಜನರಲ್ಲಿ ಆತಂಕ ಹೆಚ್ಚಾಗಿದೆ. ಚಿಕ್ಕಬಳ್ಳಾಪುರದ ವರದನಹಳ್ಳಿಯಲ್ಲಿ ಹಕ್ಕಿಜ್ವರದ ಮೊದಲ ಪ್ರಕರಣ ಕಾಣಿಸಿಕೊಂಡಿತು. ಸೋಂಕಿಗೆ ನೂರಾರು ಜೀವಿಗಳು ಬಲಿಯಾದವು. ತಕ್ಷಣ ಎಚ್ಚೆತ್ತ ಆರೋಗ್ಯ ಇಲಾಖೆ ರಾಜ್ಯದೆಲ್ಲೆಡೆ ಹೈಅಲರ್ಟ್ ಘೋಷಿಸಿದೆ. ರಾಜ್ಯಾದ್ಯಂತ ಅಧಿಕಾರಿಗಳು ಕಾರ್ಯಾಚರಣೆ ಕೈಗೊಂಡಿದ್ದು, ಸಾವಿರಾರು ಕೋಳಿಗಳ ಮಾರಣಹೋಮ ಮಾಡಲಾಗಿದೆ. ಗಡಿ ಭಾಗಗಳಲ್ಲಿ ನಿಗಾವಹಿಸಲಾಗಿದೆ. ಕಾಯಿಲೆ ಬಗ್ಗೆ ಎಲ್ಲೆಡೆ ಜಾಗೃತಿ ಮೂಡಿಸಲಾಗುತ್ತಿದೆ. ಕೋಳಿ ಫಾರಂ, ಇತರೆ ಪಕ್ಷಗಳ ಸಾಕಾಣಿಕ ಕೇಂದ್ರಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ.

ಪುಟ 2

### 7 ನಿಗಮಗಳಾಗಿ ಬಿಬಿಎಂಪಿ ವಿಭಜನೆ

## ಗ್ರೇಟರ್ ಬೆಂಗಳೂರು ಪ್ರಾಧಿಕಾರ

**ಬೆಂಗಳೂರು:** ಬೆಂಗಳೂರಿನ ಆಡಳಿತ ಸುಧಾರಣೆಗಾಗಿ ಗರಿಷ್ಠ 7 ಪಾಲಿಕೆಗಳನ್ನಾಗಿ ಬಿಬಿಎಂಪಿಯನ್ನು ವಿಂಗಡಿಸುವುದು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆ ಸೇರಿದಂತೆ ಹಲವು ಮಹತ್ವದ ಶಿಫಾರಸುಗಳನ್ನು ಒಳಗೊಂಡ ವರದಿಯನ್ನು ವಿಧಾನಸಭೆಯಲ್ಲಿ ಮಂಡಿಸಲಾಯಿತು.

ಶಿವಾಜಿನಗರದ ಕ್ಷೇತ್ರದ ಶಾಸಕ ರಿಜ್ವಾನ್ ಅರ್ಷದ್ ಅವರ ಅಧ್ಯಕ್ಷತೆಯ 2024ನೇ ಸಾಲಿನ ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕವನ್ನು ಪರಿಶೀಲಿಸಿ ವರದಿ ನೀಡಲು ರಚಿಸಲಾಗಿದ್ದ ಕರ್ನಾಟಕ ವಿಧಾನಮಂಡಲದ ಜಂಟಿ ಪರಿಶೀಲನಾ ಸಮಿತಿ ವರದಿಯನ್ನು ಮಂಡನೆ ಮಾಡಲಾಯಿತು.

ವರದಿಯಲ್ಲಿನ ಶಿಫಾರಸುಗಳ ಪ್ರಕಾರ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಕಾಯಿದೆ ಅಧಿಸೂಚನೆ ಜಾರಿಯಾದ ತಕ್ಷಣ ಅನುಷ್ಠಾನಕ್ಕೆ ಬರಲಿದೆ. ಗ್ರೇಟರ್ ಬೆಂಗಳೂರಿನಲ್ಲಿ 7 ಕ್ಕೂ ಮೀರದಂತೆ ಮಹಾನಗರ ಪಾಲಿಕೆಗಳಿರಬೇಕು ಎಂದು ಸಲಹೆ ನೀಡಲಾಗಿದೆ. ಮೇಯರ್ ಮತ್ತು ಉಪಮೇಯರ್ ಅವರ ಅವಧಿಯನ್ನು 30 ತಿಂಗಳುಗಳಾಗಿರಲು ಸಮಿತಿ ಶಿಫಾರಸು ಮಾಡಿತು. ಮಸೂದೆಯನ್ನು ಎರಡೂ ಸದನಗಳಲ್ಲಿ ಮಂಡಿಸಲು ಸಹ ಸೂಚಿಸಿತು.

ಪ್ರತಿ ಪಾಲಿಕೆಯು ಕನಿಷ್ಠ 10 ಲಕ್ಷ ಲಕ್ಷ ಜನಸಂಖ್ಯೆ ಹೊಂದಿರಬೇಕು. ಜನಸಾಂದ್ರತೆ ಪ್ರತಿ ಕಿ.ಮೀ.ಗೆ 5 15 ಸಾವಿರಕ್ಕಿಂತ ಕಡಿಮೆ ಇರಬಾರದು. ಸ್ಥಳೀಯ ಆಡಳಿತದಿಂದ ವರ್ಷಕ್ಕೆ ಗರಿಷ್ಠ 300 ಕೋಟಿಗೂ ಹೆಚ್ಚಿನ ಆದಾಯ ಇರಬೇಕು. ಕೃಷಿಯೇತರ ಚಟುವಟಿಕೆಗಳ ಉದ್ಯೋಗ ಪ್ರಮಾಣ ಶೇ.50 ಕ್ಕಿಂತಲೂ ಕಡಿಮೆ ಇರಬಾರದು ಎಂದು ಉಲ್ಲೇಖಿಸಲಾಗಿದೆ.



ಗ್ರೇಟರ್ ಬೆಂಗಳೂರು ವ್ಯಾಪ್ತಿಗೆ ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಪ್ರದೇಶಗಳನ್ನು ಸೇರ್ಪಡೆ ಮಾಡಬಹುದು.

ಪುಟ 2

### ಕೆಇಎ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೊಸ ರೂಲ್ಸ್?

## ಇನ್ಮುಂದೆ ಒಂದು ಪ್ರಶ್ನೆಗೆ 5 ಆಯ್ಕೆ

**ಬೆಂಗಳೂರು:** ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಇನ್ನುಮುಂದೆ ಹೊಸ ರೂಲ್ಸ್ ಜಾರಿ ಮಾಡುವುದಾಗಿ ಕೆಇಎ ತಿಳಿಸಿದೆ. ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಯಲ್ಲಿ ಒಂದು ಪ್ರಶ್ನೆಯ ಉತ್ತರಕ್ಕೆ 5 ಆಯ್ಕೆಯನ್ನು ಕೆಇಎ ಕೊಡಲಿದೆ. ಇನ್ನುಮುಂದೆ ನಡೆಯುವ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಈ ಹೊಸ ನಿಯಮ ಅನ್ವಯವಾಗಲಿದೆ. ಯುಜಿಸಿಇಟಿ-2025 ಪರೀಕ್ಷೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಿಇಟಿ ಪರೀಕ್ಷೆಯಲ್ಲಿ ಎಂದಿನಂತೆ ಒಂದು ಪ್ರಶ್ನೆಯ ಉತ್ತರಕ್ಕೆ 4 ಆಯ್ಕೆ ಮುಂದುವರಿಯಲಿದೆ. ಸಿಇಟಿ ಎಕ್ಸಾಂನಲ್ಲಿ ಯಾವುದೇ ಬದಲಾವಣೆ ಇಲ್ಲ. ಕೆಇಎ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮಾತ್ರ 5 ಉತ್ತರ ಆಯ್ಕೆಗಳು ಇರಲಿವೆ ಎಂದು ಕೆಇಎ ತಿಳಿಸಿದೆ.

## ದುರ್ಗಾಗಣಪತಿಗೆ ನೂತನ ತಾಮ್ರದ ಮುಖವಾಡ ಸಮರ್ಪಣೆ

**ಮಡಿವಾಳ :** ಮಡಿವಾಳ ಗ್ರಾ.ಪಂ.ನ ಚೊಕ್ಕಂಡಹಳ್ಳಿ ಗ್ರಾಮದಲ್ಲಿ ಶ್ರೀ ದುರ್ಗಾಗಣಪತಿಗೆ ನೂತನವಾಗಿ ತಾಮ್ರದ ಮುಖವಾಡವನ್ನು ಸಮರ್ಪಿಸಿ ಪೂಜಾ ಕಾರ್ಯಕ್ರಮಗಳು ಅರ್ಚಕ ಮಠಮುದ್ರೇ ವೆಂಕಟೇಶಾಸ್ತ್ರಿ ನೇತೃತ್ವದಲ್ಲಿ ನಡೆಯಿತು. ದುರ್ಗಾಗಣಪತಿ ದೇವಾಲಯದಲ್ಲಿ ಮುಂಜಾನೆಯಿಂದಲೇ ಹೋಮ ಹವನ, ಅಭಿಷೇಕ, ವಿಶೇಷ ಅಲಂಕಾರ ಮಹಾಮಂಗಳಾರತಿ ತೀರ್ಥಪ್ರಸಾದ ವಿನಿಯೋಗ ನಡೆಯಿತು ಸುತ್ತ ಮುತ್ತಲಿನ ಗ್ರಾಮಸ್ಥರುಗಳು ದೇವಾಲಯಕ್ಕೆ ಆಗಮಿಸಿ ಪೂಜೆಯನ್ನು ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಗ್ರಾ.ಪಂ. ಸದಸ್ಯರಾದ ಸಿ.ಎಲ್.ಧನಸಿಂಗ್, ಕುಮಾರಿ ಜಯರಾಮೇಗೌಡ, ಸಿ.ಎಂ.ವೆಂಕಟೇಶ್, ಮಾಜಿ ಗ್ರಾ.ಪಂ. ಸದಸ್ಯ ಸಿ.ಎಂ.ರಾಮಣ್ಣ, ಹಾಗೂ ಗ್ರಾಮಸ್ಥರು ಹಾಜರಿದ್ದರು.



## ಗಿರಿಜಾ ಕಲ್ಯಾಣೋತ್ಸವ ಕಾರ್ಯಕ್ರಮ

**ಮಡಿವಾಳ :** ಅಬ್ಬೇನಹಳ್ಳಿ ಗ್ರಾ.ಪಂ.ನ ಜೋಡಿಪುರ ಗ್ರಾಮದ ಕಾಡುಮಲ್ಲೇಶ್ವರಸ್ವಾಮಿ ದೇವಾಲಯದ ಆವರಣದಲ್ಲಿ ಗಿರಿಜಾ ಕಲ್ಯಾಣೋತ್ಸವ ಕಾರ್ಯಕ್ರಮ ಅರ್ಚಕರಾದ ಯೊಗೇಶ್, ಮಹೇಶ್, ನಂದೀಶ ಶಾಸ್ತ್ರಿಗಳ ನೇತೃತ್ವದಲ್ಲಿ ನಡೆಯಿತು. ಜೋಡಿಪುರ ಗ್ರಾಮದ ಕಾಡುಮಲ್ಲೇಶ್ವರಸ್ವಾಮಿ ದೇವಾಲಯದ ಆವರಣದಲ್ಲಿ ಲೋಕಾ ಕಲ್ಯಾಣಕ್ಕಾಗಿ 7ನೇ ವರ್ಷದ ಗಿರಿಜಾ ಕಲ್ಯಾಣೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮುಂಜಾನೆಯಿಂದಲೇ ಹೋಮ, ಹವನ, ಅಭಿಷೇಕ, ವೇದ ಮಂತ್ರ ಪಾರಾಯಣ, ವಿಶೇಷ ಹೂವಿನ ಅಲಂಕಾರ, ಮಹಾಮಂಗಳಾರತಿ ತಿರ್ಥಪ್ರಸಾದ ವಿನಿಯೋಗ ನಡೆಯಿತು. ಶಾಸಕ ಕೆ.ವೈ.ನಂಜೇಗೌಡ ಭಾಗವಹಿಸಿ ಪೂಜೆಯನ್ನು ಸಲ್ಲಿಸಿದರು. ಸುತ್ತ ಮುತ್ತಲಿನ ಗ್ರಾಮಸ್ಥರು ಆಗಮಿಸಿ ದೇವರ ದರ್ಶನ ಪಡೆದು ಪೂಜೆಯನ್ನು ಸಲ್ಲಿಸಿದರು.



## ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ

**ಚಿಕ್ಕಬಳ್ಳಾಪುರ:** ಇದೆ ಮಾ 8 ರಂದು ನಗರದ ಕೆಟಿ ರಸ್ತೆಯ ಪ್ರಜಾಪಿತಾ ಬ್ರಹ್ಮಾಕುಮಾರೀಸ್ ಈಶ್ವರಿಯ ವಿಶ್ವವಿದ್ಯಾಲಯದ '' ಶಿವ ಪ್ರೇರಣಾ ಭವನ'' ದಲ್ಲಿ ನಗರದ ಭಗತ್ ಸಿಂಗ್ ಚಾರಿಟೇಬಲ್ ಟ್ರಸ್ಟ್ ಮತ್ತು ಪ್ರಜಾಪಿತಾ ಬ್ರಹ್ಮಾಕುಮಾರೀಸ್ ಈಶ್ವರಿಯ ವಿಶ್ವ ವಿದ್ಯಾಲಯ ಇವರ ಸಂಯುಕ್ತ ಆಶಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಹಮ್ಮಿಕೊಳ್ಳಲಾಗಿದೆ ಎಂದು ಪ್ರಜಾಪಿತಾ ಬ್ರಹ್ಮಾಕುಮಾರೀಸ್ ಈಶ್ವರಿಯ ವಿಶ್ವ ವಿದ್ಯಾಲಯ ಸಂಚಾಲಕರಾದ ರಾಜಯೋಗಿನಿ ಬಿ.ಕೆ. ಲಲಿತ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ವಿವರಿಸಿರುವ ಅವರು ಜಿಲ್ಲೆಯ ಹೆಸರಾಂತ ಭಗತ್ ಸಿಂಗ್ ಚಾರಿಟೇಬಲ್ ಟ್ರಸ್ಟ್ ಇವರ ಸಹಕಾರದೊಂದಿಗೆ ಅಂದು (ಮಾ 8) ಶನಿವಾರ ಬೆಳಗ್ಗೆ 11 ಗಂಟೆಗೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲಾಗಿದ್ದು ಕಾರ್ಯಕ್ರಮದ ಉದ್ಘಾಟನೆಯನ್ನು ಭಗತ್ ಸಿಂಗ್ ಚಾರಿಟೇಬಲ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಸಂದೀಪ ಬಿ ರೆಡ್ಡಿ ಹಾಗೂ ತಾಲೂಕು ಆರೋಗ್ಯಾಧಿಕಾರಿ ಡಾ. ಮಂಜುಳಾ ನೆರವೇರಿಸಲಿದ್ದಾರೆ ಕಾರ್ಯಕ್ರಮದಲ್ಲಿ ಚಿಕ್ಕಬಳ್ಳಾಪುರ ನಗರ ಪೊಲೀಸ್ ಠಾಣೆ ನಿವೃತ್ತ ಸಬ್ ಇನ್ಸ್ಪೆಕ್ಟರ್ ಎಚ್ ನಂಜುಂಡಯ್ಯ, ಸಾಹಿತಿ ಹಾಗೂ ಹಿರಿಯ ಪತ್ರಕರ್ತರಾದ ಟಿ ಎಸ್ ನಾಗೇಂದ್ರ ಬಾಬು ಅವರು ಉಪಸ್ಥಿತರಿರುವರು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಂದಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ನಾಯನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಸುಮಾರು 70 ಕ್ಕೂ ಅಧಿಕ ಈ ವ್ಯಾಪ್ತಿಗಳಲ್ಲಿ ಅವಿರತವಾಗಿ ಶ್ರಮಿಸುತ್ತಿರುವ ಆಶಾ ಕಾರ್ಯಕರ್ತೆಯರು ಪಾಲ್ಗೊಳ್ಳುತ್ತಿದ್ದು ಪ್ರತ್ಯೇಕ ಎರಡು ಪ್ರಾಥಮಿಕ ಆರೋಗ್ಯ ಕೇಂದ್ರಗಳ ತಲಾ ಒಬ್ಬರಂತೆ ಇಬ್ಬರು ಲಕ್ಕಿ–ಮಹಿಳೆಯರನ್ನು ಪ್ರಜಾಪಿತಾ ಬ್ರಹ್ಮಾಕುಮಾರೀಸ್ ಈಶ್ವರಿಯ ವಿಶ್ವವಿದ್ಯಾಲಯ ಹಾಗೂ ಭಗತ್ ಸಿಂಗ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಗೌರವಿಸಿ ಸನ್ಮಾನಿಸಲಾಗುವುದು ಎಂದು ರಾಜ ಯೋಗಿನಿ ಬಿ.ಕೆ.ಲಲಿತಾ ಅವರು ಪ್ರಕಟಣೆಯಲ್ಲಿ ವಿವರಿಸಿದ್ದಾರೆ

# ಅಂತರ ರಾಜ್ಯ ಯುವ ವಿನಿಮಯ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಕಲರವ

**ಚಿಕ್ಕಬಳ್ಳಾಪುರ:** ಚಿಕ್ಕಬಳ್ಳಾಪುರ ನಗರದ ಹೊರವಲಯದಲ್ಲಿರುವ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಗಾರ್ಜುನ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂದು ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ,ನೆಹರು ಯುವ ಕೇಂದ್ರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ನಾಗಾರ್ಜುನ ಕಾಲೇಜಿನ ಆಫ್ ಇಂಜಿನಿಯರಿಂಗ್ ಇವರ ಸಹಯೋಗದಲ್ಲಿ ಅಂತರ ರಾಜ್ಯ ಯುವ ವಿನಿಮಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದಡಿ ಕೇಂದ್ರಾಡಳಿತ ಪ್ರದೇಶಗಳ ದಮನ್ ಹಾಗು ದಿಯು ಪ್ರದೇಶದಿಂದ 25 ವಿದ್ಯಾರ್ಥಿಗಳು ಐದು ದಿನ ಕಾಲೇಜಿನಲ್ಲಿ ಇದ್ದು ರಾಜ್ಯದ ಪ್ರಮುಖ ಪ್ರವಾಸಿ ತಾಣಗಳ ಬಗ್ಗೆ ಇಲ್ಲಿನ ಸಂಸ್ಕೃತಿ ಹಾಗು ಇಲ್ಲಿನ ಆಹಾರ ಪದ್ಧತಿ ಹಾಗು ಇನ್ನು ಹತ್ತು ಹಲವು ವಿಷಯಗಳ ಬಗ್ಗೆ ತಿಳಿದುಕೊಂಡಿದ್ದಾರೆ. ದಕ್ಷಿಣಕ್ಕೆ ಅವರ ಪ್ರವಾಸದ ಇಂದು ಐದನೇ ದಿನ ಕೊನೆ ದಿನವಾಗಿದ್ದು ಅವರಿಗೆ ಕಾಲೇಜಿನಲ್ಲಿ ಸ್ಟುಡೆಂಟ್ ವೆಲ್ಫೇರ್ ಎಂ ಬಿ ಎ ವಿಭಾಗದ ವತಿಯಿಂದ ಬೀಳ್ಕೊಡುಗೆ ಸಮಾರಂಭ ನಡೆಯಿತು. ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ನೆಹರು ಯುವ ಕೇಂದ್ರ, ರಾಜ್ಯ ನಿರ್ದೇಶಕ ಅಶೋಕ್ ಕುಮಾರ್ ದಶ್ ಮಾತನಾಡಿ ತಮ್ಮ ಸ್ಥಳಗಳಿಂದ ಬೇರೆ ಬೇರೆ ಪ್ರದೇಶಗಳ ಪ್ರವಾಸದ ಮುಖಾಂತರ ವಿದ್ಯಾರ್ಥಿಗಳಲ್ಲಿ ವ್ಯಕ್ತಿತ್ವ ವಿಕಸನ,ನಾಯಕತ್ವ,ವೈಚಾರಿಕ ಮನೋಭಾವ ಹೆಚ್ಚುವುದಲ್ಲದೆ ಮಕ್ಕಳಲ್ಲಿ ಸಾಧಿಸುವ ಛಲ ಹೆಚ್ಚುತ್ತೆ,ಇನ್ನು ಅವರಲ್ಲಿ ಹೊಸ ಹೊಸ ಆಲೋಚನೆಗಳು ಬರುತ್ತೆ ಇದೆಲ್ಲವೂ ದೇಶದ ಅಭಿವೃದ್ಧಿಗೆ ಪೂರ್ವಕವಾದದ್ದು ಎಂದರು. ವಿದ್ಯಾರ್ಥಿಗಳು ಪಾಠ ಪ್ರವಚನಗಳ ಮಧ್ಯೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿದರೆ ಅವರಲ್ಲಿ ಕೌಶಲ್ಯಾಭಿರದ್ದಿ ಬೆಳೆಯುತ್ತೆ,ಮುಖ್ಯವಾಗಿ ಸಾಕ್ಷರತೆ ಪ್ರಮಾಣ ಕೂಡ ಹೆಚ್ಚಳವಾಗಲಿದೆ,ಕೇಂದ್ರ ಸರ್ಕಾರದ ಇಂಟರ್ ಸ್ಟೇಟ್ ಯುತ್ ವಿನಿಮಯ ಕಾರ್ಯಕ್ರಮ ವಿದ್ಯಾರ್ಥಿಗಳಿಗೆ ಬಹಳಷ್ಟು ಉಪಯೋಗವಾಗಲಿದೆ ಎಂದರು. ಕಾಲೇಜಿನ ಪ್ರಾಂಶುಪಾಲರಾದ ರವಿಶಂಕರ್ ಮಾತನಾಡಿ ಬೇರೆ ಬೇರೆ ರಾಜ್ಯಗಳ ಸಂಸ್ಕೃತಿ ಆಚಾರ ವಿಚಾರಗಳು ಇನ್ನು ಹಲವಾರು ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡುವ ಉದ್ದೇಶದಿಂದ ಭಾರತ ಸರ್ಕಾರ ವಿಧ್ಯಾರ್ಥಿಗಳಿಗೆ ಇಂಟರ್ ಸ್ಟೇಟ್ ಯುತ್ ಎಕ್ಸ್ಚೇಂಜ್ ಕಾರ್ಯಕ್ರಮ ಹಮ್ಮಿಕೊಂಡಿದ್ದು ನಮ್ಮ ಕಾಲೇಜಿನಲ್ಲಿ 25 ಯುವಕರು ತಂಗಿದ್ದು ಐದು ದಿನಗಳ ಕಾಲ ಇಲ್ಲಿನ ಯಾಂತ್ರಿಕತೆ ತಾಂತ್ರಿಕತೆ ಶಿಕ್ಷಣ ಸಂಸ್ಕೃತಿ ಸಂಪ್ರದಾಯ ಆಹಾರ ಹಾಗು ಕರ್ನಾಟಕ ರಾಜ್ಯದ ಬಗ್ಗೆ ಹಲವಾರು ವಿಷಯಗಳು ತಿಳಿದುಕೊಂಡಿದ್ದು ಅವರ ರಾಜ್ಯಗಳಿಗೆ ತೆರಳಿ ಅಲ್ಲಿ ತಿಳಿಸಿದ್ದು ವಿಧ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಈ ಕಾರ್ಯಕ್ರಮ ನಮ್ಮ ಕಾಲೇಜಿನಲ್ಲಿ ನಡೆಸಿಕೊಡಲು ಅವಕಾಶ ಮಾಡಿಕೊಟ್ಟ ನೆಹರು ಯುವ ಕೇಂದ್ರ, ಹಾಗೂ ಕೇಂದ್ರ ಸರ್ಕಾರದ ಧನ್ಯವಾದಗಳು ತಿಳಿಸುತ್ತೇನೆ ಎಂದರು.



ನೆಹರು ಯುವ ಕೇಂದ್ರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾ ಯುತ್ ಆಫೀಸರ್ ಶ್ರೀ ವಾಣಿ ಮಾತನಾಡಿ ಕಾರ್ಯಕ್ರಮದ ಐದು ದಿನಗಳಲ್ಲಿ ಮಕ್ಕಳು ವಿವಿಧ ಪ್ರವಾಸ ತಾಣಗಳ ವೀಕ್ಷಣೆ ಮಾಡಿದ್ದಾರೆ ಇಲ್ಲಿನ ಸಂಸ್ಕೃತಿ ಬಗ್ಗೆ ತಿಳಿದುಕೊಂಡಿದ್ದಾರೆ,ನಂದಿ ಜಾತ್ರೆ,ಕೋಮಲ್ ಇಂಡಸ್ಟ್ರಿಯಲ್ ವಿಸಿಟ್,ಬೆಂಗಳೂರಿನ ಕಬ್ಬನ್ ಪಾರ್ಕ್,ವಿಶ್ವೇಶ್ವರಯ್ಯ ಮ್ಯೂಜಿಯಮ್ ಹಲವಾರು ಸ್ಥಾನಗಳಿಗೆ ಪ್ರವಾಸ ಮಾಡಿಸಿ ಎಲ್ಲದರ ಬಗ್ಗೆ ತಿಳಿಸಲಾಗಿದೆ ಎಂದರು. ಎನ್ ಎಸ್ ಎಸ್ ರಾಜ್ಯ ಕಾರ್ಯದರ್ಶಿ ಕಾರ್ತಿಕೆಯನ್ ಮಾತನಾಡಿದರು.ಈ ಸಂದರ್ಭದಲ್ಲಿ 25 ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಲಾಯಿತು.ಕಾಲೇಜಿನ ಉಪ ಪ್ರಾಂಶುಪಾಲ ನಾಗೇಶ್,ಎಂ ಬಿ ಎ ಡಿಪಾರ್ಟ್ಮೆಂಟ್ ಹೆಚ್ ಒ ಡಿ ಗೀತಾಂಜಲಿ,ಪ್ರಾಧ್ಯಾಪಕರಾದ ಶ್ರೀರಾಮ್, ಶ್ರೀನಿವಾಸನ್ ಇತರರು ಹಾಜರಿದ್ದರು.

# ಕಾಡ್ಗಿಚ್ಚು ತಡೆಯಲು ಜಾಗೃತಿ ಮೂಡಿಸಿ

**ಚಾಮರಾಜನಗರ:** ಬೇಸಿಗೆ ಹತ್ತಿರವಾಗುತ್ತಿದ್ದು, ಅರಣ್ಯಪ್ರದೇಶಗಳಲ್ಲಿ ಸಂಭವಿಸುವ ಕಾಡ್ಗಿಚ್ಚು ಪ್ರಕರಣಗಳನ್ನು ತಡೆಯಲು ಸಾರ್ವಜನಿಕರಿಗೆ ಅರಣ್ಯ ರಕ್ಷಣೆ ಕುರಿತು ವ್ಯಾಪಕ ಜಾಗೃತಿ ಮೂಡಿಸುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅಧಿಕಾರಿಗಳಿಗೆ ತಿಳಿಸಿದರು.



ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಜಿಲ್ಲಾವ್ಯಾಪ್ತಿಯ ಮೂರು ಅರಣ್ಯ ವಿಭಾಗಗಳ ಅಧಿಕಾರಿಗಳು ಹಾಗೂ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ 'ಅರಣ್ಯದಲ್ಲಿ ಬೆಂಕಿ ನಿರ್ವಹಣಾ' ಸಂಬಂಧ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಜಿಲ್ಲೆಯ ಅರಣ್ಯ ಪ್ರದೇಶಗಳಲ್ಲಿ ಆಗಾಗ್ಗೆ ಸಂಭವಿಸುವ ಕಾಡ್ಗಿಚ್ಚು ಸಮಯದಲ್ಲಿ ಕಾಡಿನಲ್ಲಿ ವಾಸಿಸುವ ಪ್ರಾಣಿ, ಪಕ್ಷಿಗಳಿಗೆ ಅಪಾಯ ಎದುರಾಗಲಿದೆ. ಪ್ರಾಣಿ ಸಂಪತ್ತು ದೇಶದ ಸಂಪತ್ತು ಆಗಿದೆ. ಪ್ರಾಣಿ ಪಕ್ಷಿಗಳ ರಕ್ಷಣೆಗೆ ಮುಖ್ಯವಾಗಿ ಅರಣ್ಯಗಳನ್ನು ಸಂರಕ್ಷಣೆ ಮಾಡಬೇಕಾದ ಅವಶ್ಯವಿದೆ. ಕಾಡ್ಗಿಚ್ಚು ಸಂದರ್ಭದಲ್ಲಿ ಬೆಂಕಿ ನಂದಿಸುವ ಅರಣ್ಯ ಇಲಾಖೆ ಸವಾಲಾಗಿ ಪರಿಣಮಿಸಿದೆ. ಈ ನಿಟ್ಟಿನಲ್ಲಿ ಅರಣ್ಯ ಇಲಾಖೆ, ಅಗ್ನಿಶಾಮಕ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ, ತಹಶೀಲ್ದಾರ್, ತಾಲೂಕು ಪಂಚಾಯಿತಿ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಅರಣ್ಯ ರಕ್ಷಣೆಗೆ ಮುಂದಾಗುವಂತೆ ಜಿಲ್ಲಾಧಿಕಾರಿಯವರು ಸೂಚಿಸಿದರು. ಕಳೆದ ಬಾರಿ ಬಿ.ಆರ್.ಟಿ ವಲಯದಲ್ಲಿ ಅರಣ್ಯ ರಕ್ಷಣೆ ಕುರಿತು ಪರಿಣಾಮಕಾರಿ ಜಾಗೃತಿ ಕಾರ್ಯಕ್ರಮಗಳನ್ನು ಸಾರ್ವಜನಿಕರಿಗೆ ಏರ್ಪಡಿಸಿ ಅರಿವು ಮೂಡಿಸಿದ ಹಿನ್ನಲೆಯಲ್ಲಿ ಕಾಡ್ಗಿಚ್ಚು ಪ್ರಕರಣಗಳು ಕಡಿಮೆಯಾಗಿವೆ. ಹನೂರು ಹಾಗೂ ಕೊಳ್ಳೇಗಾಲ ಭಾಗದ ಕಾವೇರಿ ಮತ್ತು ಮಲೆ ಮಹದೇಶ್ವರ ವನ್ಯಜೀವಿ ವಿಭಾಗ ವ್ಯಾಪ್ತಿಯಲ್ಲಿ ಕಾಡಂಚಿನ ಜನರಿಗೆ ಇನ್ನೂ ಹೆಚ್ಚಿನ ಅರಿವು ಕಾರ್ಯಕ್ರಮಗಳನ್ನು ಆಯೋಜಿಸಿ ಯಾವುದೇ ಅವಘಡಗಳಾಗದಂತೆ ತಡೆಯಲು ಸಕಲ ಸಿದ್ದತೆಗಳನ್ನು ಸಂಬಂಧಪಟ್ಟ ಇಲಾಖೆಗಳು ಕೈಗೊಳ್ಳಬೇಕು ಎಂದರು.

ಜಿಲ್ಲೆಯ ಹನೂರು ಹಾಗೂ ಕೊಳ್ಳೇಗಾಲ ವ್ಯಾಪ್ತಿಯಲ್ಲಿ ಬೆಂಕಿ ಪ್ರಕರಣ ಸಂಭವಿಸುವ 38 ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಲಾಗಿದೆ. ಕಾಡಂಚಿನ ಜನರು ಬೀಡಿ, ಸಿಗರೇಟ್ ಸೇದಿ, ಬೆಂಕಿ ನಂದಿಸದೇ ನಿರ್ಲಕ್ಷ್ಯದಿಂದ ಹಾಗೇಯೇ ಎಸೆಯುವುದರಿಂದ ಅರಣ್ಯ ಬೆಂಕಿ ಬೀಳುವ ಹೆಚ್ಚಿನ ಸಾಧ್ಯತೆ ಇದೆ. ಈ ಬಗ್ಗೆ ಕಾಡಂಚಿನ ಗ್ರಾಮಗಳ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅರಣ್ಯ ಹಾಗೂ ಅರಣ್ಯದಲ್ಲಿ ಪ್ರಾಣಿ ಸಂಪತ್ತಿನ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಬೇಕು. ಬೆಂಕಿ ನಿರ್ವಹಣೆ ಕಾರ್ಯದಲ್ಲಿ ಅರಣ್ಯವಾಸಿಗಳನ್ನು ತೊಡಗಿಸಿಕೊಳ್ಳಬೇಕು ಎಂದು ತಿಳಿಸಿದರು. ಅರಣ್ಯಕ್ಕೆ ಬೆಂಕಿ ಬೀಳುವುದನ್ನು ತಡೆಗಟ್ಟಲು ಅಧಿಕಾರಿಗಳು ಕಾಡ್ಗಿಚ್ಚು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಸ್ಥಳೀಯ ಸಮುದಾಯದವರಿಗೆ ಎಚ್ಚರಿಕೆಯನ್ನು ನೀಡಬೇಕು. ಅವರ ಮನವೊಲಿಸಬೇಕು. ಅವರಲ್ಲಿ ಸಕಾರಾತ್ಮಕ ಮನೋಭಾವ ಮೂಡಿಸಿ ಅರಣ್ಯ ರಕ್ಷಣೆಯ ಮಹತ್ವವನ್ನು ತಿಳಿ ಹೇಳಬೇಕು. ಕಾಡಂಚಿನ ಗ್ರಾಮಗಳಲ್ಲಿರುವ ಯುವಕರನ್ನು ಒಂದೆಡೆ ಸೇರಿಸಿ ಸಭೆ ಮಾಡಿ ಅರಣ್ಯಕ್ಕೆ ಬೀಳುವ ಬೆಂಕಿ ಆರಿಸಲು ಮಾರ್ಗದರ್ಶನ ಮಾಡಬೇಕು. ಅರಣ್ಯಕ್ಕೆ ಬೆಂಕಿ ಬಿದ್ದ ಕೆಲ ಸಂದರ್ಭದಲ್ಲಿ ನೆಟ್‌ವರ್ಕ್ ಸಮಸ್ಯೆ ಎದುರಾಗಲಿದೆ. ಅಂತಹ ವೇಳೆ ವಲಯ ಅರಣ್ಯಾಧಿಕಾರಿಗಳು ಸ್ಥಳೀಯ ಸಾರ್ವಜನಿಕರ ಸಹಕಾರ ಪಡೆದು ಬೆಂಕಿ ನಂದಿಸಲು ಮುಂದಾಗಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ತಿಳಿಸಿದರು.ಇದೇ ವೇಳೆ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತ ಅವರು ಅರಣ್ಯ ಬೆಂಕಿ ಬಿದ್ದ ಸಮಯದಲ್ಲಿ ಆಯಾ ಭಾಗದ ಠಾಣೆಗಳ ಪೊಲೀಸರು ಅರಣ್ಯಾಧಿಕಾರಿಗಳ ಸೂಚನೆಗೆ ಕಾಯದೇ ಮುಂಜಾಗ್ರತಾ ಕ್ರಮಗಳಿಗೆ ಮುಂದಾಗಬೇಕಾದ ಅನಿವಾರ್ಯತೆ ಇದೆ. ಅರಣ್ಯ ರಕ್ಷಣೆಯನ್ನು ಆದ್ಯತಾ ವಿಷಯವಾಗಿ ಪರಿಗಣಿಸಲಾಗುವುದು ಎಂದರು. ಚಾಮರಾಜನಗರ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಟಿ. ಹೀರಾಲಾಲ್ ಮಾತನಾಡಿ ಅರಣ್ಯ ಸಂರಕ್ಷಣೆಗೆ ಇತರೆ ಇಲಾಖೆಗಳು ನಮ್ಮೊಡನೆ ಕೈಜೋಡಿಸಬೇಕು. ಆಯಾ ತಾಲೂಕು ತಹಶೀಲ್ದಾರ್ ಹಾಗೂ ಪಂಚಾಯಿತಿ ಮಟ್ಟದಲ್ಲಿ ಗ್ರಾಮ ಪಂಚಾಯತ್ ಅಧಿಕಾರಿಗಳು ಮುಂದಿನ 3–4 ದಿನಗಳಲ್ಲಿ ವ್ಯಾಪಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನರಿಗೆ ಅರಿವು ಮೂಡಿಸಬೇಕು ಎಂದರು.

# 10, 11ರಂದು ಕ್ರಿಡಾಕೂಟ

**ಮಂಡ್ಯ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕರ್ನಾಟಕರಾಜ್ಯ ಸರ್ಕಾರಿ ನೌಕರರ ಸಂಘ(ರಿ), ಜಿಲ್ಲಾ ಶಾಖೆ ಹಾಗೂ ಯುವ ಸಬಲೀಕರಣ ಮತ್ತುಕ್ರೀಡಾಇಲಾಖೆಯ ಸಹಯೋಗದೊಂದಿಗೆಜಿಲ್ಲಾ ಮಟ್ಟದರಾಜ್ಯ ಸರ್ಕಾರಿ ನೌಕರರಕ್ರೀಡಾಕೂಟವನ್ನು ಮಾರ್ಚ್ 10 ಮತ್ತು 11 ರಂದು ಸರ್.ಎಂ ವಿಶ್ವೇಶ್ವರಯ್ಯಜಿಲ್ಲಾಕ್ರೀಡಾಂಗಣದಲ್ಲಿ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಶ್ರೀ ನಾಲ್ವಡಿಕೃಷ್ಣರಾಜಒಡೆಯರ್‌ಕಲಾಮಂದಿರದಲ್ಲಿ ನಡೆಸಲಾಗುತ್ತಿದೆ.

ಮಾರ್ಚ್ 10 ರಂದುಬೆಳಿಗ್ಗೆ 8.30 ಗಂಟೆಗೆ ಸರ್. ಎಂ.ವಿಶ್ವೇಶ್ವರಯ್ಯಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುವಉದ್ಘಾಟನಾ ಸಮಾರಂಭದಲ್ಲಿ ಹಾಗೂ ಮಾರ್ಚ್ 10 ಮತ್ತು 11 ರಂದು ನಡೆಯುವಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಜಿಲ್ಲೆಯಲ್ಲಿರುವಎಲ್ಲಾರಾಜ್ಯ ಸರ್ಕಾರಿ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕೋರಲಾಗಿದೆ.

ಪುರುಷರಿಗೆ 100 ಮೀ, 200 ಮೀ, 400 ಮೀ, 800 ಮೀ, 1500 ಮೀ, 5000 ಮೀ, 10,000 ಮೀ ಓಟದಸ್ಪರ್ಧೆ, 110 ಮೀ, 400 ಮೀ, ಹರ್ಡಲ್, 100 ಮೀ, 400 ಮೀ ರಿಲ್ಲೆ , ಲಾಂಗ್‌ಜಂಪ್, ಹೈ ಜಂಪ್, ಶಾಟ್ ಪುಟ್, ಡಿಸ್ಕಸ್‌ಥ್ರೋ, ಜಾವಲಿನ್ ಥ್ರೋ ಹ್ಯಾಮರ್‌ಥ್ರೋ, ಬ್ಯಾಡ್ಮಿಂಟನ್ ಸಿಂಗಲ್,ಬ್ಯಾಡ್ಮಿಂಟನ್‌ಡಬಲ್ಸ್, ಮತ್ತುಟೇಬಲ್ ಟೆನ್ನಿಸ್ ಸಿಂಗಲ್, ಟೇಬಲ್ ಟೆನ್ನಿಸ್‌ಡಬಲ್, ಭಾರಎತ್ತುವ ಸ್ಪರ್ಧೆ, ಪವರ್ ಲಿಫ್ಟಿಂಗ್, ದೇಹದಾರ್ಢ್ಯ, ಚೆಸ್, ಯೋಗ ಹಾಗೂ ಈಜು ಸ್ಪರ್ಧೆಗಳನ್ನು ಏರ್ಪಡಿಸಿದ್ದು ಮಹಿಳೆಯರಿಗೆ 100 ಮೀ, 200ಮೀ, 400ಮೀ, 800ಮೀ, ಓಟದ ಸ್ಪರ್ಧೆ, 110 ಮೀ ಹರ್ಡಲ್, 400 ಮೀ ರಿಲ್ಲೆ, ಲಾಂಗ್‌ಜಂಪ್, ಹೈ ಜಂಪ್, ಶಾಟ್ ಪುಟ್, ಡಿಸ್ಕಸ್‌ಥ್ರೋ, ಜಾವಲಿನ್ ಥ್ರೋ, ಬ್ಯಾಡ್ಮಿಂಟನ್ ಸಿಂಗಲ್, ಬ್ಯಾಡ್ಮಿಂಟನ್ ಡಬಲ್ಸ್,ಟೇಬಲ್ ಟೆನ್ನಿಸ್ ಸಿಂಗಲ್, ಟೇಬಲ್ ಟೆನ್ನಿಸ್‌ಡಬಲ್,ಟೆನಿಕಾಯ್ಟ್ (ಸಿಂಗಲ್, ಡಬಲ್ಸ್)ಚೆಸ್, ಯೋಗಹಾಗುಈಜುಸ್ಪರ್ಧೆಗಳನ್ನುಏರ್ಪಡಿಸಲಾಗಿದೆ.

**ಸಾಂಸ್ಕೃತಿಕಕಾರ್ಯಕ್ರಮ:** ಹಿಂದುಸ್ತಾನಿ ಸಂಗೀತ, ಲಘು ಶಾಸ್ತ್ರಿಯ ಸಂಗೀತ,ಕರ್ನಾಟಕ ಶಾಸ್ತ್ರೀಯ ಸಂಗೀತ,ಕರ್ನಾಟಕ ಲಘು ಶಾಸ್ತ್ರಿಯ ಸಂಗೀತ,ಜಾನಪದಗೀತೆ(ಸಿಂಗಲ್),ಜಾನಪದಗೀತೆ(ತಂಡ), ಕಥಕ್, ಮಣಿಪುರ, ಕೂಚುಪುಡಿ, ಕಥಕಳ್ಳಿ, ಒಡಿಸಿ, ಭರತನಾಟ್ಯ, ಮತ್ತುಜಾನಪದ ನೃತ್ಯ(ತಂಡ), ಇವುಗಳು ಸಂಗೀತ ಹಾಗೂ ನೃತ್ಯಸ್ಪರ್ಧೆಗಳಾಗಿದ್ದು, ಸ್ಟಿಂಗ್ ವಾದ್ಯಗಳು, ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತ, ಹಿಂದುಸ್ಥಾನಿ ಲಘು ಶಾಸ್ತ್ರಿಯ ಸಂಗೀತ, ವಿಂಡ್ ವಾದ್ಯಗಳು,ಕರ್ನಾಟಕ ಶಾಸ್ತ್ರೀಯ,ಕರ್ನಾಟಕ ಲಘು ಶಾಸ್ತ್ರೀಯ, ಪರಕೇಷನ್ ವಾದ್ಯಗಳುಜನರಲ್,ಕರಕುಶಲ ವಸ್ತುಗಳ ಪ್ರದರ್ಶನ ಮತ್ತುಕಿರುನಾಟಕ ವಾದ್ಯ ಸಂಗೀತ ಸ್ಪರ್ಧೆಗಳಾಗಿರುತ್ತದೆ. ಎಂದುಯುವ ಸಬಲೀಕರಣ ಮತ್ತುಕ್ರೀಡಾಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಾಲಾ ವಾರ್ಷಿಕೋತ್ಸವ

**ಮಡಿವಾಳ:** ತೊರ್ನಹಳ್ಳಿ ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ವಾರ್ಷಿಕೋತ್ಸವ ಹಾಗೂ ಶಾರದಾ ಪೂಜೆಯನ್ನು ಹಮ್ಮಿಕೊಳ್ಳಲಾಗಿತ್ತು.

ಬಿಇಒ ಚಂದ್ರಕಲಾ ಮಾತನಾಡಿ ಶಾಲೆಯಲ್ಲಿ ಶಾರಾದ ಪೂಜೆಯನ್ನು ಮಾಡುವುದರಿಂದ ಮಕ್ಕಳಲ್ಲಿ ಶ್ರದ್ದ ಭಕ್ತಿ ಮೂಡುತ್ತದೆ. ಪರೀಕ್ಷೆಗಳು ಹತ್ತಿರ ವಾಗುತ್ತಿದ್ದು, ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಕಡೆ ಹೆಚ್ಚಿನ ಗಮನ ಹರಿಸಿ ಉತ್ತಮ ಅಂಕಗಳನ್ನು ಪಡೆದು ಉತ್ತಮ ವಿದ್ಯಾರ್ಥಿಗಳಾಗಬೇಕೆಂದರು. ದಾನಿಗಳಾದ ಬೆಂಗಳೂರಿನ ನಿವೃತ್ತ ಮುಖ್ಯಶಿಕ್ಷಕಿ ಸುಶೀಲಮ್ಮ ನವರು ಶಾಲಾ ಅಭಿವೃದ್ಧಿಗಾಗಿ 1 ಲಕ್ಷರೂಗಳನ್ನು ನೀಡಿದರು.

ವಿದ್ಯಾರ್ಥಿಗಳಿಂದ ವಿವಿಧ ರೀತಿಯ ಸಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಇಸಿಒ ಶಶಿಧರ್, ಜಗದಾಂಬ, ಸಿ.ಆರ್.ಪಿ. ಹೆಚ್.ಎಂ.ಶ್ರೀನಿವಾಸ್, ಎಸ್‌ಡಿಎಂಸಿ ಅಧ್ಯಕ್ಷ ರಾಮಾಂಜನೇಯ, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ತಿರುಮಲೇಶ್, ಉಪಾಧ್ಯಕ್ಷ ವೆಂಕಟರಮಣಪ್ಪ, ಖಜಾಂಚಿ ಆಂಜಿನಪ್ಪ, ಮುಖ್ಯಶಿಕ್ಷಕಿ ರಾಜೇಶ್ವರಿ, ಶಾಲಾ ಸಿಬ್ಬಂದಿ, ಎಸ್.ಡಿಎಂಸಿ ಸದಸ್ಯರು ಹಾಜರಿದ್ದರು.



# ಹಾಲಿನ ಡೇರಿಯ ರೀತಿ ನೀರಾ ಡೇರಿ ಆರಂಭಿಸಿ

**ಹುಳಿಯಾರು:** ತೆಂಗು ಬೆಳೆಗಾರರ ಬದುಕು ಹಸನಾಗಬೇಕಾದರೆ ಹಾಲಿನ ಡೇರಿಯ ರೀತಿ ನೀರಾ ಡೇರಿ ಆರಂಭಿಸಬೇಕಿದೆ. ಈ ನಿಟ್ಟಿನಲ್ಲಿ ಪ್ರಸಕ್ತ ಸಾಲಿನಲ್ಲಿ ಬಜೆಟ್‌ನಲ್ಲಿ ನೀರಾ ಉತ್ಪನ್ನಗಳ ಮೌಲ್ಯವರ್ದನೆಗೆ ಹಣ ಮೀಸಲಿಡುವಂತೆ ಹೊಸಹಳ್ಳಿ ಚಂದ್ರಣ್ಣ ಬಣದ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಹೊಸಹಳ್ಳಿ ಚಂದ್ರಣ್ಣ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ.




ಹುಳಿಯಾರಿನಲ್ಲಿ ಈ ಸಂಬಂಧ ಉಪತಹಸೀಲ್ದಾರ್ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿ ಅವರು ಮಾತನಾಡಿ ಒಂದೆಡೆ ಬರದ ಹೊಡೆತ ಮತ್ತೊಂದೆರೆ ಧರದ ಕುಸಿತದಿಂದ ತೆಂಗನ್ನೇ ನಂಬಿ ಬದುಕುತ್ತಿರುವ ಲಕ್ಷಾಂತರ ಮಂದಿ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ತತ್ತರಿಸಿದ್ದಾರೆ. ಇಂತಹ ಸಂಕಷ್ಟದ ದಿನಗಳಲ್ಲಿ ನೀರಾ ಮಾತ್ರ ತೆಂಗು ಬೆಳೆಗಾರರಿಗೆ ಆರ್ಥಿಕವಾಗಿ ಚೈತನ್ಯ ನೀಡಲು ಸಾಧ್ಯವಾಗಿದೆ. ಹಾಗಾಗಿ ಹಾಲಿನ ಡೇರಿಯ ರೀತಿ ನೀರಾ ಡೇರಿ ಆರಂಭಿಸುವ ಅಗತ್ಯವಿದೆ ಎಂದಿದ್ದಾರೆ.

ನೀರಾ ಒಂದು ಆರೋಗ್ಯಕರ ಹಾಗೂ ನೈಸರ್ಗಿಕ ಪಾನೀಯ. ಅದರಲ್ಲಿ ಅನೇಕ ಬಗೆಯ ಪೌಷ್ಠಿಕಾಂಶಗಳಿವೆ. ಹಾಗಾಗಿ ನೀರಾ ಇಳಿಸಲು ಎಲ್ಲಾ ರೈತರಿಗೂ ಅನುಮತಿ ನೀಡಬೇಕು. ಸರ್ಕಾರದಿಂದಲೇ ನೀರಾ ಇಳಿಸುವ ತರಬೇತಿಯನ್ನು ಉಚಿತವಾಗಿ ಕೊಡಬೇಕು. ನಿತ್ಯ ಮುಂಜಾನೆ ಹಾಲು ಸಂಗ್ರಹಿಸುವಂತೆ ರೈತರಿಂದ ನೀರಾ ಸಂಗ್ರಹಿಸಿ ಕೋಲ್ಡ್ ಸ್ಟೋರೇಜ್‌ನಲ್ಲಿಟ್ಟು ಪಟ್ಟಣದಲ್ಲಿ ಮಾರಬಹುದು. ಮಾರಾಟವಾಗದೆ ಉಳಿದ ನೀರಾದಿಂದ ಬೆಲ್ಲ, ಮಿಠಾಯಿ ಸೇರಿದಂತೆ ಅನೇಕ ಮೌಲ್ಯವರ್ದಿತ ಆಹರೋತ್ಪನ್ನಗಳನ್ನು ಮಾಡಿ ಮಾರಬಹುದು. ಇದರಿಂದ ತೆಂಗು ಬೆಳೆಗಾರದ ಆರ್ಥಿಕ ಸಮಸ್ಯೆಗೆ ಶಾಶ್ವತ ಪರಿಹಾರ ಕೊಟ್ಟಂತ್ತಾಗುತ್ತದೆ ಎಂದು ವಿವರಿಸಿದ್ದಾರೆ.

ರೈತ ಸಂಘದ ತಾಲೂಕು ಕಾರ್ಯಾಧ್ಯಕ್ಷ ಕರಿಯಪ್ಪ, ಹುಳಿಯಾರು ಹೋಬಳಿ ಅಧ್ಯಕ್ಷ ಪುಟ್ಟಯ್ಯ, ಸದಸ್ಯರುಗಳಾದ ನಿಂಗಪ್ಪ, ಕೃಷ್ಣಮೂರ್ತಿ, ಬಸವರಾಜು, ಜಯಣ್ಣ, ಸಂತೋಷ್, ರೇವಣ್ಣ, ಸಿದ್ಧಾಬೋವಿ, ಶ್ರೀನಿವಾಸ್, ಮಂಜುನಾಥ್, ಲಕ್ಕಮ್ಮ, ಚಂದ್ರಶೇಖರ್, ಪುಷ್ಪಬಾಯಿ, ಮೆಕಾನಿಕ್ ಜಗದೀಶ್, ಕುಮಾರಸ್ವಾಮಿ, ಶಿವಣ್ಣ, ದೇವುಬಾಯಿ, ಮಂಜಪ್ಪ, ಆಶಾ, ವಾಣಿಶ್ರೀ, ಈರಣ್ಣ ಮತ್ತಿತರರು ಇದ್ದರು.

# ಎಸ್ ಸಿ ಪಿ ಮತ್ತು ಟಿ ಎಸ್ ಪಿ ಅನುದಾನದ ದುರ್ಬಳಿಕೆಗೆ ತಡೆ ಮತ್ತು ಸಮಗ್ರ ಅನುಷ್ಠಾನಕ್ಕೆ ಆಗ್ರಹಿಸಿ ಪ್ರತಿಭಟನೆ

**ಕೋಲಾರ:** ರಾಜ್ಯ ಸರ್ಕಾರದ ದಲಿತವಿರೋಧಿ ನೀತಿ ಮತ್ತು ಎಸ್ ಸಿ ಪಿ ಮತ್ತು ಟಿ ಎಸ್ ಪಿ ಅನುದಾನದ ದುರ್ಭಳಿಕೆ ವಿರುದ್ಧವಾಗಿ ಕೋಲಾರದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು .

ಈ ಸಂದರ್ಭದಲ್ಲಿ ಮಾಜಿ ಸಂಸದರಾದ ಎಸ್ ಮುನಿಸ್ವಾಮಿ ಮಾತನಾಡಿ ಅಹಿಂದ ಹೆಸರೇಳಿಕೊಂಡು ಅಧಿಕಾರಕ್ಕೆ ಬಂದಂತಹ ಮುಖ್ಯಮಂತ್ರಿ ಸಿದ್ದತಾಮಯ್ಯ ನವರು ಇಂದು ಅದೇ ವರ್ಗಕ್ಕೆ ದ್ರೋಹ ಎಸಗಿದ್ದು ಇದು ಕಾಂಗ್ರೆಸ್ ಮತ್ತು ಸಿದ್ದರಾಮಯ್ಯ ನವರ ದ್ವಂದ್ವ ನೀತಿಯನ್ನು ತೋರಿಸುತ್ತದೆ ದಲಿತರಿಗೆ ಮೀಸಲಿಟ್ಟದ್ದ ಹಣದ ಲೂಟಿ ,ದಲಿತರ ವಿದ್ಯಾಭ್ಯಾಸದ ಹಣ, ದಲಿತಕೇರಿಗಳ ಅಭಿವೃದ್ಧಿಯ ಹಣ ,ದಲಿತರಮೂಲಭೂತಸೌಕರ್ಯಗಳಿಗೆ ಮೀಸಲಿಟ್ಟ ಹಣ ,ದಲಿತರ ಏಳಿಗೆಗಾಗಿ ಮೀಸಲಿಟ್ಟ ಹಣ ಎಲ್ಲಿಗೆ ಹೋಯಿತು ಗ್ಯಾರೆಂಟಿಗೋ ಅಥವಾ ಪಕ್ಷಕ್ಕೋ ಎಂದು ರಾಜ್ಯಸರ್ಕಾರವನ್ನು ಪ್ರಶ್ನಿಸಿದರು . ನಮ್ಮವರೇ ಆದ ಮಹದೇವಪ್ಪ , ಪರಮೇಶ್ವರ್ ಇನ್ನೂ ಮುಂತಾದ ಘಟಾನಘಟಿ ದಲಿತ ನಾಯಕರು ಏನುಮಾಡುತ್ತಿದ್ದಾರೆ ಕಾಂಗ್ರೆಸ್ ಪಕ್ಷದ ಎಂಎಲ್ಎ ಗಳು ಯಾವುದೇ ಅನುದಾನಗಳ ಭರವಸೆಯಿಲ್ಲದೆ ರಾಜೀನಾಮೆ ನೀಡಲು ಮುಂದಾಗಿದ್ದು ನಾಚಿಗೇಡಿನ ಸಂಗತಿಯೆಂದರು.

ದಲಿತ ಸಿಂಹಸೇನೆಯ ರಾಜ್ಯಾಧ್ಯಕ್ಷ ಹೂವಳ್ಳಿ ಪ್ರಕಾಶ್ ಮಾತನಾಡಿ ಬಿಜೆಪಿ ಮಾಡುತ್ತಿರುವ ಹೋರಾಟಕ್ಕೆ ನಮ್ಮ ಬೆಂಬಲ ಸದಾ ಇರುತ್ತದೆ ಹಾಗೆಯೇ ಮುಂದಿನ ಎಲ್ಲಾ ಹೋರಾಟಗಳಲ್ಲೂ ಬೆಂಬಲವಾಗಿ ನಿಲ್ಲುತ್ತೇವೆ ದಲಿತರ ಹಣ ನುಂಗಿದ ರಾಜ್ಯಸರ್ಕಾರದಿಂದ ನಾವು ಏನನ್ನು ಅಪೇಕ್ಷಿಸಲು ಸಾದ್ಯ ಕಳೆದಬಾರಿ 15ಸಾವಿರಕೋಟಿ ಈಸಲ ಈಗಾಗಲೇ 36ಕೋಟಿ ಹೊಡೆಯಲು ಪ್ಲಾನ್ ಇದೇ ಇವರ ಸಾಧನೆ ದಲಿತರಿಗೆ ಬಡವರಿಗೆ ಅಲ್ಲದೆ ಸಂವಿಧಾನಕ್ಕೆ ದ್ರೋಹವೆಸಗಿದ್ದಾರೆ ಇದು ನಿಮ್ಮನ್ನು ಕಾಡದೇ ಬಿಡದು ಕಾಂಗ್ರೆಸ್ ಪಕ್ಷದ ದಲಿತ ನಾಯಕರು ಮತ್ತು ಮಂತ್ರಿಗಳು ಮಲಗಿದ್ದಾರೋ ಅಥವಾ ಜಾಣ ಮೌನವೋ ತಿಳಿಯದಂತಾಗಿದೆಯೆಂದರು.



ಮಾಜಿಕೇಂದ್ರ ಮಂತ್ರಿಗಳಾದ ಆನೇಕಲ್ ನಾರಾಯಣಸ್ವಾಮಿ ಮಾತನಾಡಿ ನಿಮಗೆ ಆತ್ಮಸಾಕ್ಷಿಯೆಂಬುದಿದ್ದಾರೆ ಒಮ್ಮೆ ಹೃದಯದಮೇಲೆ ಕೈಯಿಟ್ಟುಕೊಂಡು ಯೋಚಿಸಿ ದಲಿತರಿಗೆ ನೀವು ಮಾಡಿರುವ ದ್ರೋಹ ತಿಳಿಯುತ್ತದೆಂದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕರಾದ ಸಂಪಂಗಿ ,ವೆಂಕಟಮುನಿಯಪ್ಪ ,ನಂದೀಶ್ರೆಡ್ಡಿ ,ಕೋಲಾರ ಜಿಲ್ಲಾಧ್ಯಕ್ಷರಾದ ಓಂಶಕ್ತಿ ಚಲಪತಿ ,ಪ್ರಧಾನ ಕಾರ್ಯದರ್ಶಿ ಮಹೇಶ್ ,ದಲಿತ ಮುಖಂಡರಾದ ಚಲಪತಿ ,ಸುಬ್ಬು ,ನಾರಾಯಣಸ್ವಾಮಿ ,ಹನುಮಂತು ,ಮಾಜಿಸ್ಧ್ಯಕ್ಷರಾದ ಡಾಕ್ಟರ್ ವೇಣುಗೋಪಾಲ್ ,ಸತ್ಯನಾರಾಯಣ, ಬಾಲಾಜಿ ,ರಾಜೇಶ್ ಸಿಂಗ್, ಮುನಿವೆಂಕಟಪ್ಪ ,ಕೆಂಬೋಡಿ ನಾರಾಯಣಸ್ವಾಮಿ ,ಅಪ್ಪಿ ಮತ್ತು ಸಾವಿರಾರು ಮಂದಿ ದಲಿತ ಮತ್ತು ಬಿಜೆಪಿಕಾರ್ಯಕರ್ತರಿದ್ದರು.

# 88 ಪ್ರಕರಣಗಳಲ್ಲಿ ವಶಪಡಿಸಿಕೊಂಡ 1.56 ಕೋಟಿ ರೂ ಮೌಲ್ಯದ ಸ್ವತ್ತು ಹಸ್ತಾಂತರ

**ಚಾಮರಾಜನಗರ:** ಜಿಲ್ಲೆಯಲ್ಲಿ ಮನೆ ಕಳವು, ದರೋಡೆ, ಸುಲಿಗೆ ಪ್ರಕರಣಗಳನ್ನು ಪೊಲೀಸರು ಪತ್ತೆ ಹಚ್ಚಿ ವಶಪಡಿಸಿಕೊಂಡ ಚಿನ್ನಾಭರಣ, ವಾಹನ, ಹಣ, ಬೈಕು ಸೇರಿದಂತೆ ಇತರೆ ಬೆಲೆ ಬಾಳುವ ಸ್ವತ್ತನ್ನು ಡಿಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ, ಎಸ್ಪಿ ಡಾ.ಬಿ.ಟಿ.ಕವಿತಾ ಅವರು ಸಂಬಂಧ ಪಟ್ಟ ವಾರಸುದಾರರಿಗೆ ಹಸ್ತಾಂತರಿಸಿದರು.



ಡಿಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ ಮಾತನಾಡಿ, ಜಿಲ್ಲೆಯಲ್ಲಿ ಒಂದು ವರ್ಷದಲ್ಲಿ 88 ಪ್ರಕರಣಗಳಲ್ಲಿ 1.56 ಕೋಟಿ ಮೊತ್ತದ ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ನಡೆದ ಕಳುವಾಗಿದ್ದ ವಸ್ತುಗಳನ್ನು ಜಿಲ್ಲೆಯ ಪೊಲೀಸರು ಪತ್ತೆ ಪ್ರಾಪರ್ಟಿ ರಿಟರ್ನ್ ಕಾರ್ಯಕ್ರಮದಲ್ಲಿ ಒಟ್ಟು 88 ಪ್ರಕರಣಗಳಿಗೆ ಹಚ್ಚಿರುವುದು ಅಭಿನಂದನೀಯ ವಿಚಾರ. ಸಾರ್ವಜನಿಕರು ತಮ್ಮ ಸಂಬಂಧಿಸಿದಂತೆ 1,56,92,636 ಮೊತ್ತದ ವಸ್ತುಗಳನ್ನು ವಸ್ತುಗಳನ್ನು ಜೋಪಾನವಾಗಿ ಇಟ್ಟುಕೊಳ್ಳಬೇಕು. ಪತ್ತೆಯಾಗದ ಹಸ್ತಾಂತರಿಸುವ ಮೂಲಕ ವಾರಸುದಾರರ ಮೊಗದಲ್ಲಿ ಸಂತಸ ಹಲವು ಪ್ರಕರಣಗಳು ಬಾಕಿ ಇದ್ದು ಅವುಗಳನ್ನು ಪತ್ತೆ ಹಚ್ಚುವ ಮೂಡುವಂತೆ ಮಾಡಿದರು.

2024ರ ಜನವರಿಯಿಂದ 2025ರ ಕಾರ್ಯ ಮಾಡಲಾಗುವುದು. ಈಗಾಗಲೇ ಪತ್ತೆ ಕಾರ್ಯದಲ್ಲಿ ಫೆಬ್ರವರಿ ತನಕ ವರದಿಯಾದ 40 ಪ್ರಕರಣಗಳಿಗೆ ಸಂಬಂಧಿಸಿದ 9656,616 ಮೊತ್ತದ 2 ಕೆಜಿ 25 ಗ್ರಾಂ ಚಿನ್ನಾಭರಣ, 5,77,300 ಮೊತ್ತದ 4 ಕೆಜಿ 390 ಗ್ರಾಂ ಬೆಳ್ಳಿ ವಸ್ತುಗಳು, 28 ಪ್ರಕರಣಗಳಿಗೆ 4 ಪ್ರಕರಣಗಳಿಗೆ ಸಂಬಂಧಿಸಿದ 5,20,000 ಮೊತ್ತದ 4 ಸಂಬಂಧಿಸಿದ 9,61,000 ಮೊತ್ತದ 28 ಮೋಟಾರ್ ಸೈಕಲ್‌ಗಳು, ಮೋಟಾರ್ ವಾಹನಗಳು, 5 ಪ್ರಕರಣಗಳಿಗೆ ಸಂಬಂಧಿಸಿದ 23,35,000 ಮೊತ್ತದ 5 ಮೋಟಾರ್ ವಾಹನಗಳು, 3 ಪ್ರಕರಣಗಳಿಗೆ ಸಂಬಂಧಿಸಿದ 4,47,770 ಮೊತ್ತದ ನಗದು ಹಣ, 8 ಪ್ರಕರಣಗಳಿಗೆ ಸಂಬಂಧಿಸಿದ 11,94,950 ಮೊತ್ತದ ಇತರೆ ವಸ್ತುಗಳನ್ನು ಸಂಬಂಧಪಟ್ಟ ವಾರಸುದಾರರಿಗೆ ಹಸ್ತಾಂತರಿಸಲಾಯಿತು.

88 ಪ್ರಕರಣಗಳ ಪೈಕಿ ಚಾಮರಾಜನಗರ ಉಪವಿಭಾಗದಲ್ಲಿ 50 ಹಾಗೂ ಕೊಳ್ಳೇಗಾಲ ಉಪವಿಭಾಗದಲ್ಲಿ 38 ಪ್ರಕರಣ ದಾಖಲಾಗಿತ್ತು. ಚಾಮರಾಜನಗರ ಉಪವಿಭಾಗದಲ್ಲಿ 81,31,817 ರೂ., ಹಾಗೂ ಕೊಳ್ಳೇಗಾಲ ಉಪವಿಭಾಗದಲ್ಲಿ 75,60,819 ರೂ. ಗಳ ಮೌಲ್ಯದ ವಸ್ತುಗಳನ್ನು ಹಸ್ತಾಂತರ ಮಾಡಲಾಗಿದೆ ಎಂದರು

ಕಾರ್ಯಚರಣೆಯಲ್ಲಿ ಪಾಲ್ಗೊಂಡಿದ್ದ ಸಿಬ್ಬಂದಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಹೆಚ್ಚುವರಿ ಬಹುಮಾನ ನೀಡಿದ್ದಾರೆ. ಅದರಂತೆ ಐಜಿಪಿ ಕಡೆಯಿಂದ ಸೂಕ್ತ ಜಿಲ್ಲಾ ಪೊಲೀಸ್ ವರಿಷ್ಟಾಧಿಕಾರಿ ಶಶಿಧರ್, ಡಿವೈಎಸ್ಪಿಗಳಾದ ಬಹುಮಾನ ನೀಡಲಾಗುವುದು ಎಂದರು.

ಸಂಜೆ ಮುಗಿಲು
ಗುರುವಾರ
6.3.2025



# ಮಹಿಳೆಯರ ರಸ ಪ್ರಶ್ನೆಯಲ್ಲಿ ಮಂಜುಳಾ ಸಿಂಹ, ಲೀಲಾವತಿ ತಂಡ ಪ್ರಥಮ



**ಮೈಸೂರು:** ಮೈಸೂರು ಒಡುರ ಒಕ್ಕೂಟ ಹಾಗೂ ವಾಣಿ ವಿಲಾಸ್ ಲೇಡೀಸ್ ಕ್ಲಬ್‌ನ ವತಿಯಿಂದ ಮಹಿಳೆಯರಿಗಾಗಿ ರಸಪ್ರಶ್ನೆ ಸ್ಪರ್ಧೆ ನಡೆಯಿತು.

ನಾಲ್ಕು ಸುತ್ತುಗಳಲ್ಲಿ ನಡೆದ ರಸಪ್ರಶ್ನೆ ಸ್ಪರ್ಧೆಯಲ್ಲಿ ನಂಜನಗೂಡು, ಪಿರಿಯಾ ಪಟ್ಟಣ, ಬೆಂಗಳೂರು, ಚಿಕ್ಕಮಗಳೂರು ಸೇರಿದಂತೆ ರಾಜ್ಯ ಹಲವೆಡೆಯಿಂದ 38 ಮಹಿಳಾ ತಂಡಗಳು ಭಾಗವಹಿಸಿದ್ದವು.

ಮೊದಲು ಲಿಖಿತ ಸುತ್ತಿನೊಂದಿಗೆ ಆರಂಭವಾದ ರಸಪ್ರಶ್ನೆ ಸ್ಪರ್ಧೆಯು, ಮೂರು ಸುತ್ತುಗಳು ಮೌಖಿಕವಾಗಿ ನಡೆಯಿತು.

ಕಠಿಣ ಪ್ರಶ್ನೆಗಳಿಂದ ಕೂಡಿದ್ದ ರಸಪ್ರಶ್ನೆ ಸ್ಪರ್ಧೆಯ ಅಂತಿಮ ಸುತ್ತಿನಲ್ಲಿ ಪ್ರಬಲ ಪೈಪೋಟಿ ನಡೆಸಿದ 6 ತಂಡಗಳ ಪೈಕಿ ಎ.ಜಿ.ಮಂಜುಳಾ ಸಿಂಹ ಮತ್ತು ಬಿ.ಹೆಚ್.ಲೀಲಾವತಿ ತಂಡ ಪ್ರಥಮ ಬಹುಮಾನ ಪಡೆದರೆ, ಬಿ.ಆರ್.ನಾಗರತ್ನ ಮತ್ತು ಗಿರಿಜಾ ಸಿದ್ದಪ್ಪಾಜಿ ಅವರ ತಂಡ ದ್ವಿತೀಯ ಹಾಗೂ ಇಂದ್ರಾಣಿ ಮತ್ತು ಸುಚಿತ್ರಾ ಹೆಗಡೆ ಅವರ ತಂಡ ತೃತೀಯ ಬಹು ಮಾನ ಪಡೆಯಿತು. ಹಾಗೆಯೇ ಭಾರ್ಗವಿ ಮತ್ತು ಮನಸ್ವಿನಿ, ಗೀತಾ ಶ್ರೀಹರಿ ಮತ್ತು ಸಿ.ಆರ್. ವಿಜಯಲಕ್ಷ್ಮಿ, ನಾಗರತ್ನ ಗೋಪಿನಾಥ್ ಮತ್ತು ನಿವೇದಿತಾ ವೇಣುಗೋಪಾಲ್ ತಂಡ ಸಮಾಧಾನಕರ ಬಹುಮಾನ ಪಡೆಯಿತು.

ಪ್ರಸನ್ನ ಕುಮಾರಿ, ತುಳಸಿ ವಿಜಯ ಕುಮಾರಿ, ಕಲ್ಪನಾ ಚಂದ್ರಶೇಖರ್ ಮತ್ತು ಹೆಚ್ ನಿವೇದಿತಾ, ಡಾ. ಪಾಮೆಲಾ ಸನತ್ ನಿಕ್ಕಂ ಹಾಗೂ ಉದ್ಯಮಿ ಪಲ್ಲವಿ ಅರುಣ್ ತೀರ್ಪುಗಾರರಾಗಿದ್ದರು.

ರಸ ಪ್ರಶ್ನೆ ಸ್ಪರ್ಧೆ ಉದ್ಘಾಟಿಸಿ ಮೈಸೂರು ಬುಕ್ ಕ್ಲಬ್ ಸಂಸ್ಥಾಪಕ ಹಾಗೂ ಉದ್ಯಮಿ ಶುಭಾ ಸಂಜಯ್ ಅರಸ್ ಮಾತನಾಡಿ, ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿಯೂ ಸಾಧಕರಾಗುತ್ತಿದ್ದು, ಸ್ಪರ್ಧಾತ್ಮಕ ಯುಗದಲ್ಲಿ ಜ್ಞಾನದ ವೃದ್ಧಿಗೆ ಹೆಚ್ಚಿನ ಗಮನ ಹರಿಸಬೇಕಿದೆ. ಈ ನಿಟ್ಟಿನಲ್ಲಿ ಪ್ರತಿನಿತ್ಯ ದಿನಪತ್ರಿಕೆಗಳು, ಪುಸ್ತಕಗಳನ್ನು ಓದಬೇಕು. ನಿರಂತರ ಓದಿನಿಂದ ಜ್ಞಾನ ವೃದ್ಧಿಯ ಜೊತೆಗೆ ಮಾನಸಿಕ ಆರೋಗ್ಯವು ಲಭಿಸುತ್ತದೆ ಎಂದು ಸಲಹೆ ನೀಡಿದರು. ವಾಣಿವಿಲಾಸ್ ಲೇಡೀಸ್ ಕ್ಲಬ್ ನ ಕಾರ್ಯಕಾರಿ ಸಮಿತಿಯ ಪ್ರೇಮ್ ಬಿ ಸಿಲ್ವಾ, ಖಜಾಂಚಿ ವಿನಯ ಪ್ರಭಾವತಿ, ಶರ್ಲಿ ಮುದ್ದಪ್ಪ, ವಸಂತಮ್ಮ, ಮಾಲಿನಿ, ಶೈಲ ಶಂಕರ್ ವಿಜೇತರಿಗೆ ಬಹುಮಾನಗಳನ್ನು ನೀಡಿ ಅಭಿನಂದಿಸಿದರು.

## ಮಾದಕ ವಸ್ತುಗಳ ದುಷ್ಪರಿಣಾಮ ಕುರಿತಂತೆ ವಿಚಾರ ಸಂಕಿರಣ

**ಮೈಸೂರು:** ಜಿಲ್ಲಾಡಳಿತ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಯುವರಾಜ ಕಾಲೇಜು ವತಿಯಿಂದ "ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮ ಕುರಿತಂತೆ ವಿಚಾರ ಸಂಕಿರಣ" ಕಾರ್ಯಕ್ರಮವನ್ನು ಮಾರ್ಚ್ 07 ರಂದು ಬೆಳಿಗ್ಗೆ 10:30 ಗಂಟೆಗೆ ಯುವರಾಜ ಕಾಲೇಜಿನ ಅಮೃತ ಮಹೋತ್ಸವ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಮೈಸೂರು ವಿಶ್ವ ವಿದ್ಯಾನಿಲಯದ ಕುಲಸಚಿವರಾದ ಎಂ. ಕೆ. ಸವಿತಾ ಅವರು ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲಿದ್ದು,ಯುವರಾಜ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎಸ್ . ಮಹದೇವ ಮೂರ್ತಿ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಮೈಸೂರು ನಗರ ಸಂಚಾರ ವಿಭಾಗದ ಸಹಾಯಕ ಪೊಲೀಸ್ ಆಯುಕ್ತರಾದ ಶಿವಶಂಕರ್,ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ.ಕುಮಾರಸ್ವಾಮಿ, ಸ್ಟಾರ್ ಆಫ್ ಮೈಸೂರಿನ ಹಿರಿಯ ವರದಿಗಾರರಾದ ಕೆ.ಪಿ.ರವಿಕುಮಾರ್, ಅವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಕೆ.ಆರ್ ಆಸ್ಪತ್ರೆಯ ಮನೋರೋಗ ತಜ್ಞರಾದ ಡಾ. ಬಿ. ಎನ್. ರವೀಶ್ ಅವರು ವಿಶೇಷ ಉಪನ್ಯಾಸವನ್ನು ನೀಡಲಿದ್ದಾರೆ. ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರಾದ ಟಿ.ಕೆ ಹರೀಶ್ ತಿಳಿಸಿದ್ದಾರೆ.

## ಜೀತ ಪದ್ಧತಿಯ ನಿರ್ಮೂಲನಾ ದಿನಾಚರಣೆ ಅಂಗವಾಗಿ ಒಂದು ದಿನದ ಕಾರ್ಯಾಗಾರ



**ಮೈಸೂರು:** ಜೀತ ಪದ್ಧತಿಯ ನಿರ್ಮೂಲನಾ ಕಾಯ್ದೆ ಜಾರಿಯಲ್ಲಿದ್ದರೂ, ಹಲವಾರು ಕ್ಷೇತ್ರಗಳಲ್ಲಿ ಬಲವಂತದ ಜೀತ ಪದ್ಧತಿಯು ಈಗಲೂ ಕಂಡುಬರುತ್ತಿದೆ. ಇದಕ್ಕೆ ಕಾನೂನಿನಲ್ಲಿ ಕಠಿಣ ಶಿಕ್ಷೆಗೆ ಒಳಪಡಿಸಲಾಗುವುದು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ದಿನೇಶ್ ಅವರು ತಿಳಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಜಿಲ್ಲಾ ಪಂಚಾಯತ್ ಸಹಯೋಗದೊಂದಿಗೆ ಜೀತ ಪದ್ಧತಿ ನಿರ್ಮೂಲನೆ ದಿನದ ಅಂಗವಾಗಿ ಜಿಲ್ಲಾ ಪಂಚಾಯಿತಿಯ ಸಭಾಂಗಣದಲ್ಲಿ ಜೀತ ಪದ್ಧತಿ ನಿಷೇಧ ಕುರಿತು ಅಧಿಕಾರಿಗಳಿಗೆ ಬುಧವಾರ ನಡೆದ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರವು ವಿವಿಧ ಇಲಾಖೆ ಅಧಿಕಾರಿಗಳು ಸೇರಿದಂತೆ ಒಟ್ಟು 50 ಅಧಿಕಾರಿಗಳನ್ನು ಜೀತ ಪದ್ಧತಿಯ ನಿರ್ಮೂಲನಾ ಅಧಿಕಾರಿಗಳನ್ನಾಗಿ ನೇಮಿಸಿದೆ. ಪ್ರಮುಖವಾಗಿ ಎಲ್ಲಾ ಇಲಾಖೆಗಳ ಮುಖ್ಯಸ್ಥರು ಮತ್ತು ಅಧಿಕಾರಿಗಳು ಜೀತ ಪದ್ಧತಿಯ ಕಾರ್ಮಿಕರು ಕಂಡು ಬಂದಲ್ಲಿ ಅವರ ರಕ್ಷಣೆ ಮಾಡುವುದು ಮತ್ತು ಪುರ್ನವಸತಿ ಒದಗಿಸಿಕೊಡುವುದು ಅವರ ಕರ್ತವ್ಯವಾಗಿದೆ ಎಂದರು.

ಜೀತಪದ್ಧತಿಯ ತಡೆಗಟ್ಟುವಿಕೆಗೆ ಹೆಚ್ಚಿನ ಒತ್ತು ನೀಡಬೇಕು, ಕಾನೂನು ವ್ಯಾಪ್ತಿಯಲ್ಲಿ ಏನೇನು ಕ್ರಮವಹಿಸಬೇಕೆಂಬುದರ ಬಗ್ಗೆ ವಿಷಯವನ್ನು ತಜ್ಞರು ಕಾರ್ಯಾಗಾರದಲ್ಲಿ ತಿಳಿಸಿಕೊಡಲಿದ್ದು, ಅದರನ್ವಯ ಜೀತ ಪದ್ಧತಿ ನಿರ್ಮೂಲನೆ ಎಲ್ಲರೂ ಕೈಜೋಡಿಸಿ ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್ .ಯುಕೇಶ್ ಕುಮಾರ್ ಅವರು ಮಾತನಾಡಿ, ಪ್ರಸ್ತುತ ದಿನಗಳಲ್ಲೂ ಕೂಡ ಜೀತಪದ್ಧತಿಯು ಚಾಲ್ತಿಯಲ್ಲಿರುವುದು ಅತ್ಯಂತ ವಿಷಾಧನೀಯ. ಇದು ಸೂಕ್ಷ್ಮ ವಿಚಾರವಾಗಿದ್ದು, ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯಿತಿಯ ಎಲ್ಲಾ ಅಧಿಕಾರಿಗಳು ಒಗ್ಗಟ್ಟಾಗಿ ಜೀತಪದ್ಧತಿ ನಿರ್ಮೂಲನೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಸರ್ಕಾರದಿಂದ ಜೀತಪದ್ಧತಿ ನಿರ್ಮೂಲನೆಗೆ ನಿಗದಿಪಡಿಸಿರುವ ಎಸ್.ಓ.ಪಿ.ಯಂತೆ ಮತ್ತು ಸರ್ಕಾರದ ಆದೇಶದಂತೆ ಸಮಯಕ್ಕೆ ಅನುಗುಣವಾಗಿ ಕೆಲಸ ಮಾಡಬೇಕಾಗಿರುತ್ತದೆ. ಈ ಬಗ್ಗೆ ಜಿಲ್ಲಾ ಪಂಚಾಯಿತಿಯು ಮೇಲ್ವಿಚಾರಣೆಯನ್ನು ಮಾಡುತ್ತದೆ. ಜೀವಿಕಾ ಸಂಸ್ಥೆಯು ಕೈಜೊಡಿಸಿ ಜೀತಪದ್ಧತಿ ನಿರ್ಮೂಲನೆ ಕುರಿತು ಸರ್ಕಾರದ ಗಮನಕ್ಕೆ ತರುತ್ತಿದ್ದು, ಎಲ್ಲಾ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು ಎಂದು ತಿಳಿಸಿದರು. ಹೆಚ್.ಡಿ.ಕೋಟೆ ತಾಲ್ಲೂಕಿನ ಜೀವಿಕ ಸಂಸ್ಥೆ, ಸಂಪನ್ಮೂಲ ವ್ಯಕ್ತಿ ಬಸವರಾಜು ಅವರು ಜೀತಪದ್ಧತಿ ನಿರ್ಮೂಲನೆ ಕುರಿತು ಪ್ರಾಸ್ತವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಉಪಕಾರ್ಯದರ್ಶಿಗಳಾದ ಸವಿತಾ ಬಿ.ಎಂ., ಡಾ.ಎಂ.ಕೃಷ್ಣರಾಜು, ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ, ಜೀವಿತ ಸಂಸ್ಥೆಯ ತಂಡದವರು, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

# ವಿದ್ಯುತ್ ಕಳ್ಳತನ: 6.36 ಕೋಟಿ ದಂಡ ವಿಧಿಸಿದ ಸೆಸ್ಕ್



**ಮೈಸೂರು:** ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದಿದ್ದವರ ವಿರುದ್ಧ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್)ದ ಜಾಗೃತ ದಳದ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮಕೈಗೊಂಡು 6 ಕೋಟಿ ರುಪಾಯಿಗೂ ಹೆಚ್ಚು ಮೊತ್ತದ ದಂಡ ವಿಧಿಸಿದ್ದಾರೆ.

ಸೆಸ್ಕ್ ಹಿರಿಯ ಅಧಿಕಾರಿಗಳ ಮಾರ್ಗದರ್ಶನ ಹಾಗೂ ಸೆಸ್ಕ್ ಜಾಗೃತದಳದ ಪೊಲೀಸ್ ಅಧೀಕ್ಷಕರಾದ ಸವಿತಾ ಹೂಗಾರ ಅವರ ನೇತೃತ್ವದಲ್ಲಿ ಜಾಗೃತದಳದ ಅಧಿಕಾರಿಗಳು ಹಾಗೂ ಸಿಬ್ಬಂದಿ, ಸೆಸ್ಕ್ ವಿಭಾಗ ವ್ಯಾಪ್ತಿಗೆ ಒಳಪಡುವ ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು ಹಾಗೂ ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿದ್ದಾರೆ. ಆ ಮೂಲಕ ಅಕ್ರಮವಾಗಿ ವಿದ್ಯುತ್ ಕಳ್ಳತನ, ವಿದ್ಯುತ್ ದುರುಪಯೋಗ ಮಾಡಿದವರ ವಿರುದ್ಧ ಕ್ರಮಕೈಗೊಂಡು, ಪ್ರಕರಣಗಳನ್ನು ದಾಖಲಿಸಲಾಗಿದೆ. ಸೆಸ್ಕ್ ಜಾಗೃತದಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 2024–25ನೇ ಸಾಲಿನಲ್ಲಿ ಗೃಹ, ವಾಣಿಜ್ಯ, ಕೈಗಾರಿಕೆ, ತಾತ್ಕಾಲಿಕ ಸ್ಥಾವರಗಳು ಮತ್ತು ಇತರ ಕಡೆಗಳಲ್ಲಿ 5716 ಸ್ಥಾವರಗಳನ್ನು ಜಾಗೃತದಳದ ಅಧಿಕಾರಿಗಳು ಪರಿಶೀಲಿಸಿದ್ದು, ಈ ಸಂದರ್ಭದಲ್ಲಿ 1312 ವಿದ್ಯುತ್ ಕಳ್ಳತನ ಮತ್ತು ದುರುಪಯೋಗ ಪ್ರಕರಣಗಳನ್ನು ದಾಖಲಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸದರಿ ಪ್ರಕರಣಗಳಿಂದ ಒಟ್ಟು 6,36,72,607 ರೂ. ದಂಡ ವಿಧಿಸಿದ್ದು, ಸದರಿ ಅವಧಿಯಲ್ಲಿ ಹಿಂದಿನ ಪ್ರಕರಣಗಳು ಸೇರಿ 5,94,89,898 ರೂ. ದಂಡ ವಸೂಲಿ ಮಾಡಲಾಗಿದೆ.

ಮೀಟರ್ ಪರಿಶೀಲನೆ ವಿಭಾಗದಿಂದ ವಿವಿಧ ವಿಭಾಗಗಳಲ್ಲಿ ಒಟ್ಟು 23,014 ಸ್ಥಾವರಗಳ ರೇಟಿಂಗ್ ಮಾಡಿ, ಲೋಪಗಳಿರುವ ಕಡೆಗಳಲ್ಲಿ ಗುರುತಿಸಲಾಗದ(ಓಟಿ–ಅಠಂಟಿದಚಿಛಟಜ) ಪ್ರಕರಣಗಳನ್ನು ದಾಖಲಿಸಿ 12,37,56,660 ರೂ. ದಂಡವನ್ನು ವಿಧಿಸಲಾಗಿದೆ.

ವಿದ್ಯುತ್ ಕಳ್ಳತನ ಮಾಡುವುದು ವಿದ್ಯುಚ್ಛಕ್ತಿ ಕಾಯ್ದೆಯ ಅಡಿಯಲ್ಲಿ ಕ್ರಿಮಿನಲ್ ಸ್ವರೂಪದ ಶಿಕ್ಷಾರ್ಹ ಅಪರಾಧವಾಗಿದ್ದು, ವಿದ್ಯುತ್ ಕಳ್ಳತನ ಮಾಡುವವರ ವಿರುದ್ಧ ಪ್ರಕರಣ ದಾಖಲಿಸಲಾಗುವುದು. ಸಾರ್ವಜನಿಕರು ವಿದ್ಯುತ್ ಕಳ್ಳತನದ ಬಗ್ಗೆ ಮಾಹಿತಿ ಇದ್ದಲ್ಲಿ ಈ ಕೆಳಕಂಡ ಸಂಖ್ಯೆಗಳಿಗೆ ಮಾಹಿತಿ ನೀಡಬಹುದು. ಮಾಹಿತಿ ನೀಡುವವರ ಹೆಸರನ್ನು ಗೌಪ್ಯವಾಗಿ ಇಡಲಾಗುವುದು ಎಂದು ಸೆಸ್ಕ್ ಜಾಗೃತ ದಳದ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಸಿ. ಉಮೇಶ್ ಹಾಗೂ ಪೊಲೀಸ್ ಉಪ ಅಧೀಕ್ಷಕರಾದ ಆನಂದಮೂರ್ತಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅಲ್ಲದೆ, ವಿದ್ಯುತ್ ಕಳ್ಳತನ ಕಂಡುಬಂದಲ್ಲಿ ಈ ಕೆಳಗಿನ ಸಂಖ್ಯೆಗಳಿಗೆ ಕರೆ ಮಾಡಿ ಮಾಹಿತಿ ನೀಡುವಂತೆ ಕೋರಿದ್ದಾರೆ.

**ಸೆಸ್ಕ್ ಜಾಗೃತ ದಳ:** ಮೈಸೂರು ಜಿಲ್ಲೆ: ಪೊಲೀಸ್ ಇನ್‌ಸ್ಪೆಕ್ಟರ್ 9448994736, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) – 9448994737, ಮಂಡ್ಯ ಜಿಲ್ಲೆ: ಪೊಲೀಸ್ ಇನ್‌ಸ್ಪೆಕ್ಟರ್ 9448994919, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) 9448994863, ಹಾಸನ ಜಿಲ್ಲೆ: ಪೊಲೀಸ್ ಇನ್‌ಸ್ಪೆಕ್ಟರ್ 9448994935, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) 9448994936, ಚಾಮರಾಜನಗರ ಜಿಲ್ಲೆ:.



**ಇಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟ ರಾಜ್ಯ ಕಬ್ಬು ಬೆಳೆಗಾರ ಸಂಘದ ಮೈಸೂರು ಚಾಮರಾಜನಗರ ಜಿಲ್ಲಾ ಘಟಕದ ವತಿಯಿಂದ ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ರೈತರ ಹೋರಾಟಕ್ಕೆ ಬೆಂಬಲಿಸಿ ರೈತರ ಸಮಸ್ಯೆಗಳನ್ನು ಶೀಘ್ರ ಬಗೆಹರಿಸಬೇಕೆಂದು ಮೈಸೂರಿನ ಜಿಲ್ಲಾಧಿಕಾರಿ ಮೂಲಕ ಕೇಂದ್ರ ಸರ್ಕಾರಕ್ಕೆ ಒತ್ತಾಯ ಪತ್ರ ಸಲ್ಲಿಸಲಾಯಿತು**

## ಕರಡು / ತಾತ್ಕಾಲಿಕ ಪಟ್ಟಿ ಪ್ರಕಟಣೆ

**ಮೈಸೂರು:** ಪ್ರವಾಸೋದ್ಯಮ ಇಲಾಖೆಯ ವತಿಯಿಂದ 2024–25ನೇ ಸಾಲಿನಲ್ಲಿ ಎಸ್.ಸಿ..ಪಿ/ ಟಿ.ಎಸ್.ಪಿ ಯೋಜನೆಯಡಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಸಣ್ಣ ಉದ್ಯಮದಾರರನ್ನು ಉತ್ತೇಜಿಸಲು Enterprenuershipವಿಷಯದ ಬಗ್ಗೆ ಒಂದು ತಿಂಗಳ ಕೌಶಲ್ಯಾಭಿವೃದ್ಧಿ ತರಬೇತಿ ನೀಡಿ, ತರಬೇತಿ ಪಡೆದ ಅಭ್ಯರ್ಥಿಗಳಿಗೆ ಮೊಬೈಲ್ ಕ್ಯಾಂಟಿನ್ ನಡೆಸಲು ಸಹಾಯಧನದ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಆಯ್ಕೆಯಾದ ಫಲಾನುಭವಿಗಳ ಕರಡು/ತಾತ್ಕಾಲಿಕ ಪಟ್ಟಿಯನ್ನು ವೆಬ್ ಸೈಟ್ https://mysurutourism.in/notification/ ನಲ್ಲಿ ಪ್ರಕಟಿಸಲಾಗಿದ್ದು, ಈ ಸಂಬಂಧ ಏನಾದರೂ ಆಕ್ಷೇಪಣೆ ಇದ್ದಲ್ಲಿ ಮಾರ್ಚ್ 5 ರಿಂದ 14 ರ ಒಳಗಾಗಿ ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಲಿಖಿತವಾಗಿ ಆಕ್ಷೇಪಣೆಯನ್ನು ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಹಾಗೂ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹೆಚ್ಚುವರಿ ಪಡಿತರ ಹಂಚಿಕೆ

**ಮೈಸೂರು:** ಆಹಾರ, ನಾಗರಿಕ ಸರಬಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ ವತಿಯಿಂದ ಫೆಬ್ರವರಿ 2025 ರ ಮಾಹೆಯಿಂದ ಜಾರಿಗೆ ಬರುವಂತೆ ನೇರ ನಗದು ವರ್ಗಾವಣೆ (ಡಿಬಿಟಿ) ಬದಲಾಗಿ ಅನ್ನಭಾಗ್ಯ ಯೋಜನೆಯಡಿ ಸರ್ಕಾರದ ಆದೇಶದ ಮಾರ್ಗಸೂಚಿಯಂತೆ ಏಕ– ಸದಸ್ಯ, ದ್ವಿ–ಸದಸ್ಯ ಮತ್ತು ತ್ರಿ–ಸದಸ್ಯ ಎಎವೈ ಪಡಿತರಚೀಟಿಗಳನ್ನು ಹೊರತುಪಡಿಸಿ ನಾಲ್ಕು ಮತ್ತು ನಾಲ್ಕಕ್ಕಿಂತ ಹೆಚ್ಚು ಸದಸ್ಯರುಳ್ಳ ಎಎವೈ ಪಡಿತರ ಚೀಟಿಗೆ ಪ್ರತಿ ಫಲಾನುಭವಿಗೆ ಮತ್ತು ಪಿಹೆಚ್‌ಹೆಚ್ ಪಡಿತರ ಚೀಟಿಯ ಪ್ರತಿ ಫಲಾನುಭವಿಗಳಿಗೆ ಪ್ರತಿ ಮಾಹಿ ಹೆಚ್ಚುವರಿಯಾಗಿ 5 ಕೆಜಿ ಅಕ್ಕಿಯನ್ನು ಹಂಚಿಕೆ ನೀಡಲಾಗಿರುತ್ತದೆ. ಫೆಬ್ರವರಿ 2025ರ ಮಾಹೆ ಪಡಿತರ ವಿತರಣಾ ಕಾರ್ಯ ಮುಕ್ತಾಯವಾಗಿರುವುದರಿಂದ ಫೆಬ್ರವರಿ ಮತ್ತು ಮಾರ್ಚ್ 2025ರ ಮಾಹಿತಿಗಳಿಗೆ ಹೆಚ್ಚುವರಿ ಐದು ಕೆಜಿ ಅಕ್ಕಿಯನ್ನು ಕೆಳಕಂಡ ಪ್ರಮಾಣದಲ್ಲಿ ಹಂಚಿಕೆ ನೀಡಲಾಗಿದೆ. 2025ರ ಮಾರ್ಚ್ ಮಾಹೆಯಲ್ಲಿ ಅನ್ನಭಾಗ್ಯ ಯೋಜನೆಯ ಅಡಿಯಲ್ಲಿ ಉಚಿತವಾಗಿ ವಿತರಿಬೇಕಾದ ಪಡಿತರ ಪ್ರಮಾಣ (ಕೆ.ಜಿ ಗಳಲ್ಲಿ) ಅಂತ್ಯೋದಯ (ಎಎವೈ) ಒಂದು, ಎರಡು, ಮೂರು ಸದಸ್ಯರಿಗೆ 35 ಕೆ.ಜಿ (ಪ್ರತಿ ಕಾರ್ಡಿಗೆ), ನಾಲ್ಕು ಸದಸ್ಯರಿಗೆ 45 ಕೆ.ಜಿ (ಪ್ರತಿ ಕಾರ್ಡಿಗೆ), ಐದು ಸದಸ್ಯರಿಗೆ 65 ಕೆ.ಜಿ (ಪ್ರತಿ ಕಾರ್ಡಿಗೆ), ಆರು ಸದಸ್ಯರಿಗೆ 85 ಕೆ.ಜಿ (ಪ್ರತಿ ಕಾರ್ಡಿಗೆ), ಏಳು ಸದಸ್ಯರಿಗೆ 105 ಕೆ.ಜಿ (ಪ್ರತಿ ಕಾರ್ಡಿಗೆ) ಉಚಿತವಾಗಿ ನೀಡಲಾಗುವುದು. ಪಿ ಹೆಚ್ ಹೆಚ್ (ಬಿಪಿಎಲ್) ಪ್ರತಿ ಸದಸ್ಯರಿಗೆ 15 ಕೆ.ಜಿ (ಪ್ರತಿ ಕಾರ್ಡಿಗೆ) ಉಚಿತವಾಗಿ ನೀಡಲಾಗುವುದು. ಸಾರ್ವಜನಿಕರು ಪಡಿತರ ವಿತರಣೆ ಪ್ರಮಾಣದಲ್ಲಿ ಕಡಿಮೆ ನೀಡಿದ ದೂರುಗಳಿಗೆ ಮೈಸೂರು ನಗರಕ್ಕೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದ ಕಚೇರಿಗಳ ಸಂಕೀರರ್ಣದಲ್ಲಿರುವ ಸಹಾಯಕ ನಿರ್ದೇಶಕರು, ಅನೌಪಚಾರಿಕ ಪಡಿತರ ಪ್ರದೇಶ ಮೈಸೂರು ನಗರ ಮತ್ತು ಗ್ರಾಮೀಣ ಪ್ರದೇಶಕ್ಕೆ ಸಂಬಂಧಿಸಿದಂತೆ ತಹಶೀಲ್ದಾರ್ ಕಚೇರಿಯ ಆಹಾರ ವಿಭಾಗದ ಕಾರ್ಯನಿರ್ವಾಹಕ ಸಿಬ್ಬಂದಿಗಳನ್ನು ಸಂಪರ್ಕಿಸಬಹುದು ಎಂದು ಜಿಲ್ಲಾಧಿಕಾರಿಯಾದ ಜಿ ಲಕ್ಷ್ಮಿಕಾಂತ್ ರೆಡ್ಡಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಾಡು ಪ್ರಾಣಿ ದಾಳಿಗೆ ನೀಲಿಗಿರಿ ಜಿಲ್ಲೆಯ ವ್ಯಕ್ತಿಯ ಸಾವು

**ಚಾಮರಾಜನಗರ:** ಕಾಡು ಪ್ರಾಣಿಯ ದಾಳಿಯಿಂದ ವ್ಯಕ್ತಿಯೊಬ್ಬರು ಸಾವನ್ನಪ್ಪಿದ ಘಟನೆ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಬಂಡೀಪುರ ರಾಷ್ಟ್ರೀಯ ಉದ್ಯಾನವನ ಬಳಿಯ ಮಂಗಲ ಗ್ರಾಮದ ಬಳಿ ನಡೆದಿದೆ. ಜಿಲ್ಲೆಯ ಬಂಡೀಪುರ ರಾಷ್ಟ್ರೀಯ ಉದ್ಯಾನವನದ ಕುಂದಕೆರೆ ವಲಯಕ್ಕೆ ಸೇರಿದ ಮಂಗಲ ಗ್ರಾಮದ ಬಳಿ ತಮಿಳುನಾಡಿನ ನೀಲಿಗಿರಿ ಜಿಲ್ಲೆಯ ಶ್ರೀ ಮಧುರೈ ತಾಲ್ಲೂಕಿನ ಮಾವಿನಹಳ್ಳ ಗ್ರಾಮದ ಕರಿಯನ್ (46) ಎಂದು ಗುರುತಿಸಲಾಗಿದೆ. ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸದಿದ ಬಳಿಕ ಮೃತ ದೇಹವನ್ನು ವಾರಸುದಾರರಿಗೆ ಒಪ್ಪಿಸಲಾಯಿತು. ಘಟನಾ ಸ್ಥಳಕ್ಕೆ ಬಂಡೀಪುರಹುಲಿಯೋಜನೆಯಅರಣ್ಯಸಂರಕ್ಷಣಾಧಿಕಾರಿಗಳುಹಾಗೂನಿರ್ದೇಶಕರಾದಎಸ್‌ಪ್ರಭಾಕರನ್,ಗುಂಡ್ಲುಪೇಟೆಉಪವಿಭಾಗದ ಸಹಾಯಕಅರಣ್ಯಸಂರಕ್ಷಣಾಧಿಕಾರಿ ಎನ್.ಪಿನವೀನ್‌ಕುಮಾರ್ ಅರಣ್ಯಾಧಿಕಾರಿ ವೈರಮುಡಿ ಹಾಜರಿದ್ದರು.

## ಕಿಡಿಗೇಡಿಗಳ ಕೃತ್ಯಕ್ಕೆ ಲಕ್ಷಾಂತರ ಮೌಲ್ಯದ ಅರಣ್ಯ ಸಂಪತ್ತು ನಾಶ

**ಪಿರಿಯಾಪಟ್ಟಣ:** ಕಿಡಿಗೇಡಿಗಳ ಕೃತ್ಯಕ್ಕೆ ತಾಲೂಕಿನ ಬೆಟ್ಟದಪುರದ ಐತಿಹಾಸಿಕ ಶ್ರೀ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಹಾಗೂ ಹೊನ್ನೂರು ರಂಗಸ್ವಾಮಿ ಬೆಟ್ಟದ ಅತ್ತಿ ಉರಿದು ಲಕ್ಷಾಂತರ ಮೌಲ್ಯದ ಅರಣ್ಯ ಸಂಪತ್ತು ನಾಶವಾಗಿರುವ ಘಟನೆ ಮಂಗಳವಾರ ರಾತ್ರಿ ಜರುಗಿದೆ.

ಬೆಟ್ಟದಪುರ ಶ್ರೀ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಬೆಟ್ಟಕ್ಕೆ ರಾತ್ರಿ ವೇಳೆ ಕಿಡಿಗೇಡಿಗಳು ಬೆಂಕಿ ಹಚ್ಚಿರುವ ಪರಿಣಾಣ ಇಲ್ಲಿನ ಗಿಡಮರಗಳು, ಔಷಧಿ ಸಸ್ಯ ಸಂಕುಲ, ರಾಸುಗಳ ಮೇವು ಸೇರಿದಂತೆ ಲಕ್ಷಾಂತರ ಮೌಲ್ಯದ ಮರಮಟ್ಟುಗಳು ಉರಿದು ಹೋಗಿವೆ ಅಲ್ಲದೇ ತಾಲೂಕಿನ ಬೈಲಕುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊನ್ನೂರು ಗೇಟ್ ಸಮೀಪವಿರುವ ಪಾರಂ ಗೇಟ್ ಅರಣ್ಯಕ್ಕೆ ಕಿಡಿಗೇಡಿಗಳು ಇಟ್ಟ ಬೆಂಕಿಯಿಂದಾಗಿ ಹೊತ್ತು ಉರಿಯುತ್ತಿದ್ದು ಸುದ್ದಿ ತಿಳಿದ ಸಾರ್ವಜನಿಕರು ನೀರು ಇನ್ನಿತರ ಸಾಹಸದಿಂದ ಬೆಂಕಿ ಆರಿಸಲು ಮುಂದಾಗಿದ್ದಾರೆ .ಆದರೂ ಗಾಳಿಯಿಂದ ಬೆಂಕಿ ಜ್ವಾಲೆ ಉರಿಯುತ್ತಿದ್ದು ಸ್ಥಳೀಯರ ಕರೆಗೆ ಸ್ಪಂದಿಸಿದ. ಪಿರಿಯಾಪಟ್ಟಣದ ವಲಯ ರಣಧಿಕಾರಿ ಪದ್ಮಶ್ರೀ ಗಮನಕ್ಕೆ ತಂದಾಗ ಕೂಡಲೇ ಸ್ಥಳಕ್ಕೆ ಅರಣ್ಯ ಸಿಬ್ಬಂದಿಯವರನ್ನು ಕಳಿಸಿಕೊಟ್ಟು ವಲಯ ಅರಣ್ಯ ಅಧಿಕಾರಿಗಳು ಸಹ ಸ್ಥಳಕ್ಕೆ ಭೇಟಿ ನೀಡಿ ಬೆಂಕಿ ಆರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆದರೂ ಸ್ವಲ್ಪಮಟ್ಟಿಗೆ ಅರಣ್ಯ ನಾಶವಾಗಿದೆ.

ಸ್ಥಳಕ್ಕೆ ಭೇಟಿ, ನೀಡಿದ ವಲಯ ಅರಣ್ಯಾಧಿಕಾರಿ ಪದ್ಮಶ್ರೀ ಮಾತನಾಡಿ ಅರಣ್ಯ ಸಂಪತ್ತು ಸಾರ್ವಜನಿಕರ ಸ್ವತ್ತು, ಕಾಡಿಗೆ ಬೆಂಕಿ ಇಟ್ಟಂತ ಕಿಟಗೇಡಿಗಳನ್ನು ಪತ್ತೆಹಚ್ಚಲು ನಾವು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ ಸಾರ್ವಜನಿಕರು ಮಾಹಿತಿ ಏನಾದರೂ ಇದ್ದಲ್ಲಿ ನಮ್ಮ ಗಮನಕ್ಕೆ ತರಬೇಕು ನಿಮ್ಮ ಮಾಹಿತಿಯನ್ನು ಗೌಪ್ಯವಾಗಿ ಇಡಲಾಗುತ್ತದೆ ಆದ್ದರಿಂದ ಸಾರ್ವಜನಿಕರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸ್ಪಂದಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಉಪ ವಲಯ ಅಧಿಕಾರಿ ಮಧುಸೂದನ್, ಸಿಬ್ಬಂದಿಗಳಾದ ವಾಸು, ಮುನಿಯ, ಗ್ರಾಮಸ್ಥರಾದ ಕುಮಾರ್ ಉಪಸ್ಥಿತರಿದ್ದರು .

# ಡಿಜಿಟಲ್ ಉಪಕರಣಗಳ ಹಸ್ತಾಂತರ



**ರಾಮನಗರ:** ಮಕ್ಕಳಿಗೆ ಜ್ಞಾನವನ್ನು ಧಾರೆ ಎರೆಯುವ ಕೆಲಸಕ್ಕಿಂತ ಮಿಗಿಲಾದುದು ಯಾವುದು ಇಲ್ಲ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಅನ್ಮೋಲ್ ಜೈನ್ ಅವರು ಅಭಿಪ್ರಾಯಪಟ್ಟರು.

ನಗರದ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಮಾ.5ರ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಿಎಂಸಿಎ ಸಂಸ್ಥೆಯ 'ನನ್ನ ಒಳಿತಿಗಾಗಿ ಗ್ರಂಥಾಲಯ' ಕಾರ್ಯಕ್ರಮಕ್ಕೆ ಪೂರಕವಾಗಿ ಎಚ್.ಡಿ.ಎಫ್.ಸಿ ಬ್ಯಾಂಕ್ ನ ಪರಿವರ್ತನ ಸಹಯೋಗದೊಂದಿಗೆ ಅನು?ನ ಸಹಭಾಗಿ ಸಂಸ್ಥೆ ಭಾರತ್ ಕೇರ್ಸ್ ಹಾಗೂ ಸಿಎಂಸಿಎ ಸಂಸ್ಥೆಗಳಿಂದ ಜಿಲ್ಲೆಯ 75 ಗ್ರಂಥಾಲಯಗಳಿಗೆ ಎಲೆಕ್ಟ್ರಾನಿಕ್ ವಸ್ತುಗಳನ್ನು ಹಸ್ತಾಂತರ ಮಾಡಿ ಅವರು ಮಾತನಾಡಿದರು.

ಪ್ರಪಂಚದಲ್ಲಿ ಜ್ಞಾನಕ್ಕಿಂತ ಮಿಗಿಲಾದುದು ಯಾವುದೂ ಇಲ್ಲ. ಈ ನಿಟ್ಟಿನಲ್ಲಿ ಸಿಎಂಸಿಎ ಸಂಸ್ಥೆಯು 'ನನ್ನ ಒಳಿತಿಗಾಗಿ ಗ್ರಂಥಾಲಯ' ಕಾರ್ಯಕ್ರಮದಡಿ ಮಕ್ಕಳಿಗೆ ಜ್ಞಾನ ಬಿತ್ತುವ ಮೂಲಕ ದೇಶಕ್ಕೆ ಸತ್ಪ್ರಜೆಗಳನ್ನು ನೀಡುವ ನಿಟ್ಟಿನಲ್ಲಿ ಉತ್ತಮ ಕೆಲಸ ಮಾಡುತ್ತಿದೆ ಎಂದು ಶ್ಲಾಘಿಸಿದರು.

ಇತ್ತೀಚಿನ ದಿನಗಳಲ್ಲಿ ಗ್ರಂಥಾಲಯಗಳು ಆಧುನಿಕತೆಗೆ ತಕ್ಕಂತೆ ತಮ್ಮನ್ನು ಪರಿವರ್ತಿಸಿಕೊಂಡು ಎಲ್ಲರಿಗೂ ಅಚ್ಚುಮೆಚ್ಚಿನ ತಾಣಗಳಾಗುತ್ತಿವೆ. ಗ್ರಂಥಾಲಯಗಳಿಗೆ ಭೇಟಿ ನೀಡುವ ಮಕ್ಕಳಿಗೆ ಹಿತವಾಗುವ ರೀತಿಯಲ್ಲಿ ಮನೆಯಂತಹ ಮುಕ್ತ ವಾತಾವರಣ ನಿರ್ಮಾಣ ಮಾಡುವ ಮೂಲಕ ಮಕ್ಕಳು ಗ್ರಂಥಾಲಯಗಳಿಗೆ ಹೆಚ್ಚು ಹೆಚ್ಚು ಭೇಟಿ ನೀಡಲು ಪ್ರೇರೇಪಿಸಬೇಕು ಎಂದು ಸಿಇಓ ಇದೇ ಸಂದರ್ಭದಲ್ಲಿ ಹೇಳಿದರು. ಸಿಎಂಸಿಎ ಸಂಸ್ಥೆಯು ಕಾರ್ಯಕ್ರಮವನ್ನು ಜಿಲ್ಲೆಯ ಉಳಿದ ಎಲ್ಲಾ ಗ್ರಂಥಾಲಯಗಳಿಗೆ ಆದಷ್ಟು ಶೀಘ್ರ ವಿಸ್ತರಿಸಲಿ ಎಂದು ಹೇಳಿದರು.

ಚನ್ನಪಟ್ಟಣ ತಾಲ್ಲೂಕಿನ ಮತ್ತೀಕೆರೆ ಗ್ರಾಮ ಪಂಚಾಯತಿಯ ಗ್ರಂಥಾಲಯವನ್ನು ಒಂದು ಮಾದರಿ ಗ್ರಂಥಾಲಯವಾಗಿ ರೂಪಿಸುವ ದಿಕ್ಕಿನಲ್ಲಿ ಮೂಲ ಸವಲತ್ತುಗಳನ್ನು ಕಲ್ಪಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಗ್ರಂಥಾಲಯಗಳಿಗೆ ಬೇಕಾದ ಸವಲತ್ತುಗಳನ್ನು ನೀಡುವಲ್ಲಿ ಜಿಲ್ಲಾ ಪಂಚಾಯತ್ ಬದ್ಧವಾಗಿದೆ ಎಂದವರು ಹೇಳಿದರು.

ರಾಮನಗರ ಜಿಲ್ಲಾ ಮುಖ್ಯ ಗ್ರಂಥಾಲಯ ಅಧಿಕಾರಿ ಚನ್ನಕೇಶವ ಅವರು ಮಾತನಾಡಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಸಿಎಂಸಿಎ ಸಂಸ್ಥೆ ಸಹಯೋಗದಲ್ಲಿ ನಡೆಯುತ್ತಿರುವ ನನ್ನ ಒಳಿತಿಗಾಗಿ ಗ್ರಂಥಾಲಯ ಕಾರ್ಯಕ್ರಮವು ಮಕ್ಕಳಿಗೆ ಅತ್ಯಂತ ಉಪಯುಕ್ತವಾಗಿದ್ದು, ಕ್ರಿಯಾಶೀಲ ಚಟುವಟಿಕೆಗಳ ಮೂಲಕ ಮಕ್ಕಳ ಜ್ಞಾನವನ್ನು ವೃದ್ಧಿ ಮಾಡುವ ಜೊತೆಗೆ ಜೀವನ ಕೌಶಲ್ಯಗಳನ್ನು ಸಶಕ್ತಗೊಳಿಸುವಲ್ಲಿ ಈ ಕಾರ್ಯಕ್ರಮ ಅತ್ಯಂತ ಪರಿಣಾಮಕಾರಿಯಾಗಿದೆ. ಈ ಯೋಜನೆಯು ಪೂರ್ಣ ಜಿಲ್ಲೆಗೆ ವಿಸ್ತರಣೆಯಾಗಲಿ ಎಂದರು.

ಸಿಎಂಸಿಎ ಸಂಸ್ಥೆಯ ಸಹ ಸಂಸ್ಥಾಪಕರು ಹಾಗೂ ಸಿಇಓ ಪ್ರಿಯಾ ಕೃಷ್ಣಮೂರ್ತಿ, ಭಾರತ್ ಕೇರ್ಸ್‌ನ ಸಹಾಯಕ ವ್ಯವಸ್ಥಾಪಕರಾದ ಶೃತಿ ಹಾಗೂ ಸಿಎಂಸಿಎ ಸಹಾಯಕ ನಿರ್ದೇಶಕ ಮರುಳಪ್ಪ ಪಿ.ಆರ್. ಮಾತನಾಡಿದರು.

ಇದೇ ಸಂದರ್ಭದಲ್ಲಿ ಜಿಲ್ಲೆಯ ಐದು ತಾಲ್ಲೂಕುಗಳ ತಲಾ ನಾಲ್ಕು ಗ್ರಂಥಾಲಯ ಮೇಲ್ವಿಚಾರಕರಿಗೆ ಉಪಕರಣಗಳನ್ನು ಸಾಂಕೇತಿಕವಾಗಿ ಹಸ್ತಾಂತರ ಮಾಡಲಾಯಿತು.

ಸಿಎಂಸಿಎ ಸಿಬ್ಬಂದಿ, ಜಿಲ್ಲೆಯ ಹಲವಾರು ಗ್ರಂಥಪಾಲಕರು, ಸೂಪರ್ ಮೆಂಟರ್ಸ್ ಭಾಗವಹಿಸಿದ್ದರು.

# ಆದಿಚುಂಚನಗಿರಿಯಲ್ಲಿ ವೈಭವದ ಜಾತ್ರಾ ಮಹೋತ್ಸವ



**ನಾಗಮಂಗಲ:** ಪರಶಿವನ ತಪೋಭೂಮಿ, ದೇವಾನು ದೇವತೆಗಳು ನೆಲೆಸಿರುವ ಧಾರ್ಮಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರವಾದ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ ಜಾತ್ರಾ ಮಹೋತ್ಸವ ನಡೆಯಲಿದೆ.

ನಾಗಮಂಗಲ ತಾಲೂಕು ಶ್ರೀಕ್ಷೇತ್ರ ಆದಿಚುಂಚನಗಿರಿಯಲ್ಲಿ 7ರಿಂದ ಮಾರ್ಚ್ 15ರ ವರೆಗೆ ಒಂಬತ್ತು ದಿನಗಳ ಕಾಲ ಜಾತ್ರಾ ಮಹೋತ್ಸವ ನಡೆಯಲಿದೆ. ಈ ಪ್ರಯುಕ್ತ ಶ್ರೀಕ್ಷೇತ್ರದಲ್ಲಿ ವಿವಿಧ ಪೂಜಾ ಕೈಂಕರ್ಯ ಸೇರಿದಂತೆ ಹಲವು ಧಾರ್ಮಿಕ, ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ಮಾರ್ಚ್ 7ರ ಬೆಳಗ್ಗೆ 6.30ಕ್ಕೆ ಶ್ರೀಮಠದ ಪೀಠಾಧ್ಯಕ್ಷ ಶ್ರೀನಿರ್ಮಲಾನಂದನಾಥ ಸ್ವಾಮೀಜಿಯವರು ನಂದಿ ಪೂಜೆ ಹಾಗೂ ಧರ್ಮಧ್ವಜಾರೋಹಣ ಮಾಡಲಿದ್ದಾರೆ. ಈ ಮೂಲಕ 9 ದಿನಗಳ ಜಾತ್ರಾ ಮಹೋತ್ಸವಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡುವರು. ಅದೇ ದಿನ ಬೆಳಗ್ಗೆ 10ಗಕ್ಕೆ ಸಭಾ ಕಾರ್ಯಕ್ರಮವೂ ನಡೆಯಲಿದೆ.

ಮಾರ್ಚ್ 8ರಸಂಜೆ6 ಗಂಟೆಗೆ ಸರ್ವಾಲಂಕೃತ ಶ್ರೀಚಂದ್ರಮೌಳೇಶ್ವರಸ್ವಾಮಿ ಉತ್ಸವ ನಡೆಯಲಿದೆ. ಮಾರ್ಚ್ 9ರ ಸಂಜೆ 6ಕ್ಕೆ ಸರ್ವಾಲಂಕೃತ ಶ್ರೀಮಲ್ಲೇಶ್ವರಸ್ವಾಮಿಯ ಉತ್ಸವ ನಡೆಯಲಿದೆ.

ಮಾರ್ಚ್ 10ರ ಬೆಳಗ್ಗೆ 9:30ಕ್ಕೆ ಸರಳ ಸಾಮೂಹಿಕ ವಿವಾಹ ಮತ್ತು ಹಿರಿಯ ದಂಪತಿಗಳಿಗೆ ಸನ್ಮಾನ ಸಮಾರಂಭ ಸಂಜೆ 6 ಗಂಟೆಗೆ ಸಿದ್ದೇಶ್ವರ ಸ್ವಾಮಿ ಉತ್ಸವ.

ಮಾ 11. ಬೆಳಿಗ್ಗೆ 7:30ಕ್ಕೆ ಶ್ರೀಕಾಲಭೈರವೇಶ್ವರ ಸ್ವಾಮಿಗೆ ಸುವರ್ಣಕವಚಾಲಂಕಾರ ಪೂಜೆ ಮತ್ತು ಶ್ರೀಗಂಗಾಧರೇಶ್ವರಸ್ವಾಮಿಗೆ ರಜತ ನಾಗಾಭರಣ ಅಲಂಕಾರ ಪೂಜೆ ನಡೆಯಲಿದೆ. ಸಂಜೆ 6ಕ್ಕೆ ಶ್ರೀಕಾಲಭೈರವೇಶ್ವರಸ್ವಾಮಿ ಹೂವಿನ ಪಲಕ್ಕಿ ಉತ್ಸವ ಮತ್ತು ಮಠದ ಪೀಠಾಧ್ಯಕ್ಷ ಶ್ರೀನಿರ್ಮಲಾನಂದನಾಥ ಸ್ವಾಮೀಜಿಯವರ ಮುತ್ತಿನ ಪಲ್ಲಕ್ಕಿ ಉತ್ಸವ ನಡೆಯಲಿದೆ.

ಮಾರ್ಚ್. 12ರ ಸಂಜೆ 6ಕ್ಕೆ ಶ್ರೀನಿರ್ಮಲಾನಂದನಾಥ ಸ್ವಾಮೀಜಿಯವರ ಜ್ವಾಲಾಪೀಠಾರೋಹಣ ಮತ್ತು ಸಿದ್ಧ ಸಿಂಹಾಸನ ಪೂಜೆ ನಡೆಯಲಿದೆ. ಹಾಗೂ ರಾತ್ರಿ 8ಕ್ಕೆ ಚಂದ್ರಮಂಡಲೋತ್ಸವ ಪೂಜೆ ನಡೆಯಲಿದೆ.

ಮಾರ್ಚ್ 13ರ ಸಂಜೆ 6:30ಕ್ಕೆ ಶ್ರೀನಿರ್ಮಲಾನಂದನಾಥ ಸ್ವಾಮೀಜಿಯವರ ದಿವ್ಯಸಾನಿಧ್ಯದಲ್ಲಿ ಸರ್ವಧರ್ಮ ಸಮ್ಮೇಳನ ನಡೆಯಲಿದೆ. ರಾತ್ರಿ 8:00ಗೆ ಶ್ರೀಕಾಲಭೈರವೇಶ್ವರ ಸ್ವಾಮಿಯ ತಿರುಗಣಿ ಉತ್ಸವ, ರಾತ್ರಿ 9:00ಗೆ ಶ್ರೀಕಾಲಭೈರವೇಶ್ವರ ಸ್ವಾಮಿಗೆ ಪುಷ್ಕರಣಿಯಲ್ಲಿ ತೆಪ್ಪೋತ್ಸವ ರಾತ್ರಿ 9:30ಕ್ಕೆ ನಾಟಕ ಪ್ರದರ್ಶನಗಳು ನಡೆಯಲಿವೆ.

ಮಾರ್ಚ್ 14ರ ಮುಂಜಾನೆ ನಡೆಯಲಿರುವ ಬ್ರಾಹ್ಮಿ ಮೂಹೂರ್ತದಲ್ಲಿ ಶ್ರೀಗಂಗಾಧರೇಶ್ವರ ಸ್ವಾಮಿಯ ಮಹಾರಥೋತ್ಸವ ಹಾಗೂ ಶ್ರೀನಿರ್ಮಲಾನಂದನಾಥ ಸ್ವಾಮೀಜಿಯವರ ಅಡ್ಡ ಪಲ್ಲಕ್ಕಿ ಉತ್ಸವು ಬಹಳ ವಿಜೃಂಭಣೆಯಿಂದ ಜರುಗಲಿದೆ. ನಾಡಿನಾದ್ಯಂತ ಸಾವಿರಾರು ಭಕ್ತರು ಈ ರಥೋತ್ಸವಕ್ಕೆ ಸಾಕ್ಷಿಯಾಗಲಿದ್ದಾರೆ. ಹಾಗೆಯೇಸಂಜೆ 6ಕ್ಕೆ ವಿವಿಧ ಗ್ರಾಮಗಳ ನೂರಾರು ಗ್ರಾಮದೇವತೆಗಳ ಮೆರವಣಿಗೆ ಮುಖಾಂತರ ಗಿರಿ ಪ್ರದಕ್ಷಿಣೆ ನಡೆಯಲಿದೆ. ಬಳಿಕ ಸಂಜೆ 6ಕ್ಕೆ ಶ್ರೀಸೋಮೇಶ್ವರ ಸ್ವಾಮಿಯ ಉತ್ಸವ ಜರುಗಲಿದೆ.

ಮಾರ್ಚ್ 15ರಂದು ಬೆಳಿಗ್ಗೆ 9:00ಗಂಟೆಗೆಧರ್ಮಧ್ವಜಾವರೋಹಣ ಬೆಳಿಗ್ಗೆ 9:30 ಕ್ಕೆ ಬಿಂದು ಸರೋವರದಲ್ಲಿ ಅವಭೃತ ಸ್ನಾನಮಹಾಭಿಷೇಕ ಬೆಳಿಗ್ಗೆ 9:30ಕ್ಕೆ ಸಭಾ ಕಾರ್ಯಕ್ರಮದ ಮೂಲಕ ಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ.

# ಅತ್ಯುತ್ತಮ ಕೌಶಲ ಬೆಳೆಸಿಕೊಳ್ಳಿ: ಎಡಿಸಿ ಶಿವರಾಜು




**ಮೈಸೂರು:** ನರ್ಸಿಂಗ್ ವೃತ್ತಿ ಆಯ್ಕೆಮಾಡಿಕೊಂಡಿರುವವರು ಹೆಚ್ಚು ಜ್ಞಾನ ಸಂಪಾದಿಸಬೇಕು. ಅತ್ಯುತ್ತಮ ಸಂವಹನ ಕೌಶಲ ಬೆಳೆಸಿಕೊಳ್ಳಬೇಕು ಹಾಗೂ ಕ್ಲಿನಿಕಲ್ ಕೌಶಲವನ್ನೂ ಪಡೆದುಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ತಿಳಿಸಿದರು.

ನಗರದ ಹೊರವರ್ತುಲ ರಸ್ತೆಯಲ್ಲಿರುವ ಕಾವೇರಿ ನರ್ಸಿಂಗ್ ಶಾಲೆ ಮತ್ತು ನರ್ಸಿಂಗ್ ಕಾಲೇಜು ಹಾಗೂ ಸೇಂಟ್ ಅಲ್ಫೋನ್ಸ ಕಾಲೇಜ್ ಆಫ್ ನರ್ಸಿಂಗ್ ಸಂಯುಕ್ತಾಶ್ರಯದಲ್ಲಿ ಕಾವೇರಿ ಸಮೂಹ ಸಂಸ್ಥೆಗಳ ಸಭಾಂಗಣದಲ್ಲಿ ಏರ್ಪಡಿಸಿದ್ದ ಪ್ರಮಾಣ ವಚನ ಸ್ವೀಕಾರ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈ ವೃತಿಯಲ್ಲಿ ವಿದ್ಯಾರ್ಥಿಗಳು ಹಲವು ಅಡೆತಡೆಗಳನ್ನು ಎದುರಿಸಬೇಕಾಗುತ್ತದೆ. ಆದರೂ ವಿದ್ಯಾರ್ಥಿಗಳಿಗೆ ಅಪಾರ ವೈಯಕ್ತಿಕ ಮತ್ತು ವೃತ್ತಿಪರ ಪ್ರತಿಫಲಗಳನ್ನು ನೀಡುತ್ತದೆ. ಹಾಗಾಗಿ ಶುಶೂಷ ವೃತ್ತಿಯ ಪ್ರಮುಖ ಮೌಲ್ಯಗಳನ್ನು ಅಳವಡಿಸಿ ಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆನೀಡಿದರು.

ಮಂಡಳಿ ಕಾರ್ಯದರ್ಶಿ ಮಡಿವಾಳಪ್ಪ ನಾಗರಹಳ್ಳಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮಉದಾತ್ತ ವೃತ್ತಿಗೆ ಅಚಲವಾದ ಬದ್ಧತೆಯನ್ನು ಅಳವಡಿಸಿಕೊಳ್ಳುವಂತೆ ಮತ್ತು ತಮ್ಮ ಅಮೂಲ್ಯ ಸೇವೆಯನ್ನು ಸಲ್ಲಿಸುವ ಮೂಲಕ ಕೃತಜ್ಞತೆಯನ್ನು ತೋರಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸುರಕ್ಷಾ ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಸರಳಾ ಚಂದ್ರಶೇಖರ್, ಹಾಗೂ ಕಾವೇರಿ ಹೃದ್ರೋಗ ಮತ್ತು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಜಿ.ಆರ್ ಚಂದ್ರಶೇಖರ್ ಹಾಗೂ ಕಾವೇರಿ ಸಮೂಹ ಸಂಸ್ಥೆಗಳ ಡೀನ್ ಪ್ರೊ.ಶ್ರೀಕಂಠಸ್ವಾಮಿ, ಸಾರ್ವಜನಿಕ ಸಂಪರ್ಕಾಧಿಕಾರಿ ಪಿ.ಅರ್ಜುನ್ ಕುಮಾರ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸಂಜೆ ಮುಗಿಲು
ಗುರುವಾರ 6.3.2025

# ಸಂಜೆ ಟಿಪ್ಸ್

## ಬಿಸಿಲಲ್ಲೂ ಮಳೆ ಸುರಿಸಿದ ಕನ್ನಡ ಗಜಲ್ ಗಾಯಕ ಅನುರಾಗ ಗದ್ದಿ

ಕನ್ನಡ ಗಜಲ್ ಕಾವ್ಯ ಶೈಲಿಯನ್ನು ಹಾಗೂ ಗಾಯನವನ್ನು ನಾಡಿನಾದ್ಯಂತ ಪ್ರಚಾರಮಾಡಬೇಕೆಂಬ ಅನುರಾಗ್ ಗದ್ದಿ ಯವರ ಸಂಕಲ್ಪದೊಂದಿಗೆ ಪ್ರಾರಂಭಗೊಂಡ ಕನ್ನಡ ಗಜಲ್ ಗಾಯನ ಯಾತ್ರೆಯ ದ್ವಿತೀಯ ಸಂಚಿಕೆಯ ಕಾರ್ಯಕ್ರಮವನ್ನು ಶರಣ್ಸ್ ಮ್ಯೂಜಿಕ್ ಅಕಾಡೆಮಿಯು ಇತ್ತೀಚಿಗೆ ಸಂಜಯ ನಗರದ ಶಾಸ್ತ್ರಿ ಮೆಮೋರಿಯಲ್ ಹಾಲ್ ನಲ್ಲಿ ಆಯೋಜಿಸಿತ್ತು. ಭಾಗವಹಿಸಿದ್ದ ಶೋತೃಗಳು ಕನ್ನಡದ ಗಜಲ್ ಗುಂಗಿನಲ್ಲಿ ತೇಲಿ ಆನಂದಿಸಿದರು.

ಅಲ್ಲದೇ ಗಜಲ್ ಸಾಹಿತ್ಯ ಮತ್ತು ಸಂಗೀತದ ಬಗ್ಗೆ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಿ, ಗಜಲ್ ಸಾಹಿತ್ಯ ಹಾಗೂ ಇತರೆ ಸಾಹಿತ್ಯದ ನಡುವಿನ ವ್ಯತ್ಯಾಸ ಹಾಗೂ ಹೋಲಿಕೆಗಳು, ಅವುಗಳಲ್ಲಿ ಬಳಸಬಹುದಾದ ರಾಗ, ತಾಳಗಳ ಕುರಿತು ಅನೇಕ ಸಂಗೀತಾಸಕ್ತರು ಕೇಳಿದ ಪ್ರಶ್ನೆಗಳಿಗೆ ಅನುರಾಗ್ ಗದ್ದಿ ಮತ್ತು ಪಂ. ಶರಣ್ ಚೌಧರಿ ರವರು ಉತ್ತರಗಳನ್ನು ಹೇಳಿ, ಸಂವಾದವನ್ನು ಸಂಪತ್ಭರಿತಗೊಳಿಸಿದರು.ಕಾರ್ಯಕ್ರಮವನ್ನು ಶ್ರೀಮತಿ ಕೆ. ವಿ. ಸತ್ಯಲಕ್ಷ್ಮಿ ರವರು ಉದ್ಘಾಟಿಸಿದರು. ಶ್ರೀ ಕೆ.ವಿ.ಕೃಷ್ಣಪ್ರಸಾದ್, ಅಕಾಡೆಮಿಯ ಅಧ್ಯಕ್ಷೆ ಶ್ರೀಮತಿ ಅಕ್ಷತಾ ಮುರಗೋಡ, ಕವಿ ರೇಣುಕಾಚಾರ್ಯ ಹಿರೇಮಠ, ಪಿ. ನಿರಂಜನ್, ತೇಜಸ್ , ಮಹೇಶ್ ಮಲ್ಲೂರ , ದೀಪಕ್ ಪವಾರ್ ಉಪಸ್ಥಿತರಿದ್ದರು. ಖ್ಯಾತ ಗಾಯಕ ಅನುರಾಗ್ ಗದ್ದಿ ಯವರ ಗಾಯನಕ್ಕೆ ವಾದ್ಯ ವೃಂದದಲ್ಲಿ ಪಂ. ಶರಣ್ ಚೌಧರಿ ಹಾರ್ಮೋನಿಯಂ, ಶೀನಿವಾಸ್ ಕೀಬೋರ್ಡ್, ಗಿರೀಶ್ ಕೋಳಾಲ್ ವಯೋಲಿನ್ ಹಾಗೂ ಪಂ. ರಾಘವೇಂದ್ರ ಜೋಶಿ ತಬಲಾ ಸಾಥ್ ನೀಡಿ ಸಹಕರಿಸಿದರು.

## ನಿಮಗಿದು ಗೊತ್ತೇ?

ಎಂ. ವೆಂಕಟೇಶ್ ಶೇಷಾದ್ರಿ

**56.ಡಾ ರಾಜ್ ಕುಮಾರ್ ರವರಿಗೆ ಮೊದಲ ಬಾರಿಗೆ ಅತ್ಯುತ್ತಮ ನಟನೆಗೆ ರಾಜ್ಯ ಪ್ರಶಸ್ತಿಯನ್ನು ತಂದುಕೊಟ್ಟ ಚಲನಚಿತ್ರ ಯಾವುದು ?**

ಉತ್ತರ: ಬಂಗಾರದ ಹೂವು (1967)

## ಬೆಂಡೆಕಾಯಿ ಗೊಜ್ಜು

### ಪಾಕ ಶಾಲೆ



### ಬೇಕಿರುವ ಸಾಮಗ್ರಿ

ಬೆಂಡೇಕಾಯಿ – ಕಾಲು ಕೆ.ಜಿ, ಜೀರಿಗೆ – 1 ಟೀ ಸ್ಪೂನ್, ಈರುಳ್ಳಿ – 3, ಟೊಮೆಟೋ – 2, ಶುಂಠಿ–ಬೆಳ್ಳುಳ್ಳಿ ಪೇಸ್ಟ್ – 1 ಟೀ ಸ್ಪೂನ್, ಅರಿಶಿಣಪುಡಿ – ಅರ್ಧ ಟೀ ಸ್ಪೂನ್, ಅಚ್ಚಖಾರದಪುಡಿ – 1 ಟೀ ಸ್ಪೂನ್, ದನಿಯಾಪುಡಿ – ಅರ್ಧ ಟೀ ಸ್ಪೂನ್, ಗರಂಮಸಾಲ – ಅರ್ಧ ಟೀ ಸ್ಪೂನ್, ಮೊಸರು – ಅರ್ಧ ಕಪ್, ಕೊತ್ತಂಬರಿಸೊಪ್ಪು – ಸ್ವಲ್ಪ, ಉಪ್ಪು – ರುಚಿಗೆ ತಕ್ಕಷ್ಟು, ಎಣ್ಣೆ – 5 ಟೀ ಸ್ಪೂನ್

### ಮಾಡುವ ವಿಧಾನ

ಮೊದಲಿಗೆ ಬೆಂಡೆಕಾಯಿಗಳನ್ನು ಕಟ್ ಮಾಡಿಟ್ಟುಕೊಳ್ಳಬೇಕು. ಸ್ಟೌವ್ ಮೇಲೆ ಒಂದು ಬಾಣಲಿ ಇಟ್ಟು 3 ಟೀ ಸ್ಪೂನ್ ಎಣ್ಣೆ ಹಾಕಬೇಕು. ಎಣ್ಣೆ ಕಾದ ಮೇಲೆ ಕಟ್ ಮಾಡಿರುವ ಬೆಂಡೆಕಾಯಿಗಳನ್ನು ಫ್ರೈ ಮಾಡಿಕೊಳ್ಳಬೇಕು. ಬೆಂಡೆಕಾಯಿ ಚೆನ್ನಾಗಿ ಫ್ರೈ ಮಾಡುವುದರಿಂದ ಅದರ ಲೋಳೆಯ ಅಂಟು ಡ್ರೈ ಆಗುತ್ತದೆ. ಚೆನ್ನಾಗಿ ಬೆಂಡೆಕಾಯಿ ಫ್ರೈ ಆದ ಮೇಲೆ ತಟ್ಟೆಯೊಂದರಲ್ಲಿ ತೆಗೆದಿಡಬೇಕು.ಬೆಂಡೆಕಾಯಿ ಫ್ರೈ ಮಾಡಿದ ಎಣ್ಣೆಗೆ ಮತ್ತೆರಡು ಟೀ ಸ್ಪೂನ್ ಎಣ್ಣೆ ಸೇರಿಸಿಕೊಂಡು, ಎಣ್ಣೆ ಕಾದ ಬಳಿಕ 1 ಟೀ ಸ್ಪೂನ್ ಜೀರಿಗೆ, 3 ಸಣ್ಣದಾಗಿ ಕಟ್ ಮಾಡಿರುವ ಈರುಳ್ಳಿಯನ್ನು ಹಾಕಿ ಹಸಿವಾಸನೆ ಹೋಗುವವರೆಗೂ ಫ್ರೈ ಮಾಡಿಕೊಳ್ಳಬೇಕು.ಈರುಳ್ಳಿ ಬೆಂದ ನಂತರ 1 ಟೀ ಸ್ಪೂನ್ ಶುಂಠಿ–ಬೆಳ್ಳುಳ್ಳಿ ಪೇಸ್ಟ್ ಹಾಕಿ ಫ್ರೈ ಮಾಡಬೇಕು. ನಂತರ ಇದಕ್ಕೆ ಸಣ್ಣದಾಗಿ ಹಚ್ಚಿರುವ 2 ಟೊಮೆಟೋವನ್ನು ಸೇರಿಸಿ, ಅರ್ಧ ಟೀ ಸ್ಪೂನ್ ಅರಿಶಿನಪುಡಿ, 1 ಟೀ ಸ್ಪೂನ್ ಅಚ್ಚಖಾರದಪುಡಿ, 1 ಟೀ ಸ್ಪೂನ್ ದನಿಯಾಪುಡಿ, ಗರಂಮಸಾಲ ಅರ್ಧ ಟೀ ಸ್ಪೂನ್ ರುಚಿಗೆ ತಕ್ಕಷ್ಟು ಉಪ್ಪನ್ನು ಹಾಕಿ ಮಿಕ್ಸ್ ಮಾಡಿಕೊಳ್ಳಬೇಕು. 1 ನಿಮಿಷ ಬೇಯಿಸಿದ ನಂತರ ಕಾಲು ಕಪ್ ನೀರು ಹಾಕಿ ಕುದಿಸಿಕೊಳ್ಳಬೇಕು. ಗೊಜ್ಜು ಸ್ವಲ್ಪ ಗಟ್ಟಿಯಾದ ನಂತರ ಅರ್ಧ ಕಪ್ ಮೊಸರನ್ನು ಸೇರಿಸಿ 1 ನಿಮಿಷ ಬೇಯಲು ಬಿಡಬೇಕು.

## ಮಿಲ್ಕಿ ಬ್ಯೂಟಿ ತಮನ್ನಾ ಬ್ರೇಕಪ್ ವಿಚಾರ ವೈರಲ್



ಸೌತ್ ಸಿನಿಮಾ ಇಂಡಸ್ಟ್ರಿ ಪ್ರಸಿದ್ಧ ನಟಿಯರಲ್ಲಿ ಒಬ್ಬರಾದ ತಮನ್ನಾ ಭಾಟಿಯಾ ಅಭಿಮಾನಿಗಳಿಗೆ ಬಿಗ್‌ಶಾಕ್ ಕೊಟ್ಟಿದ್ದಾರೆ. ತಮ್ಮ ವೈಯಕ್ತಿಕ ಜೀವನದಲ್ಲಿ ಮುಖ್ಯ ಹೆಜ್ಜೆ ಇಡುವಲ್ಲಿ ಮುಂದಾಗಿದ್ದ ಮಿಲ್ಕಿ ಬ್ಯೂಟಿ ಸಡನ್ ಆಗಿ ರಿವರ್ಸ್‌ಗೇರ್ ಹಾಕಿದ್ದಾರೆ. ಇತ್ತೀಚಿಗೆ ತಮನ್ನಾ ಮತ್ತು ಬಾಲಿವುಡ್ ನಟ ವಿಜಯ್ ವರ್ಮಾ ಇಬ್ಬರು ತಮ್ಮ ಲವ್‌ಲೈಫ್ ಬಗ್ಗೆ ಒಟ್ಟಿಗೆ ಸಾಮಾಜಿಕ ಜಾಲತಾಣಗಳಲ್ಲಿ ಯಾವುದೇ ಪೋಸ್ಟ್ ಹಾಕದೇ ಇದ್ದಿದ್ದರಿಂದ, ಈ ಜೋಡಿ ಏನಾದರು ದೂರಾಗಲಿದೆಯೇ ಎಂಬ ಪ್ರಶ್ನೆಗಳು ಮೂಡಿದ್ದವು. ಈಗ ಅದು ಅಕ್ಷರಶಃ ನಿಜವಾಗಿದೆ.

2022 ರಿಂದ ಡೇಟಿಂಗ್ ಮಾಡುತ್ತಿದ್ದ ಈ ಜೋಡಿ ಎಲ್ಲ ಕಾರ್ಯಕ್ರಮಗಳಲ್ಲೂ ಒಟ್ಟಿಗೆ ಕೈ ಹಿಡಿದು ಓಡಾಡುತ್ತಿದ್ದರು. ಈ ಕುರಿತಂತೆ ಫೋಟೋ ಮತ್ತು ವೀಡಿಯೋಗಳು ಆಗಾಗ ವೈರಲ್ ಆಗುತ್ತಿದ್ದವು. ಇವರ ಈ ಆತ್ಮೀಯತೆಯನ್ನು ನೋಡಿ ಸದ್ಯದಲ್ಲೇ ಈ ಜೋಡಿ ಮದುವೆಯ ಬಂಧನದಲ್ಲಿ ಬಂಧಿಯಾಗಲಿದ್ದಾರೆ ಎಂದು ಎಲ್ಲರು ಮಾತನಾಡಿಕೊಳ್ಳುತ್ತಿದ್ದರು. ಆದರೀಗ ಈ ಊಹಾಪೋಹಗಳೆಲ್ಲ ಹುಸಿಯಾಗಿದೆ. ಸಿನಿಮಾ ಲೋಕದಲ್ಲಿ ಸೆಲೆಬ್ರಿಟಿಗಳು ಪ್ರೀತಿ ಮಾಡಿ ನಂತರ ಯಾವುದೋ ಕಾರಣಕ್ಕೆ ಸಂಬಂಧ ಮುರಿದುಕೊಳ್ಳುವುದು ಸಹಜ. ಇದೇ ರೀತಿ ತಮನ್ನಾ ಮತ್ತು ವಿಜಯ್ ವರ್ಮಾ ಕೂಡ ಪರಸ್ಪರ ದೂರಾಗಿದ್ದಾರೆ ಎಂದು ಹೇಳಲಾಗುತ್ತಿದೆ, ಆದರೂ ಇವರ ಈ ಸಡನ್ ಬ್ರೇಕಪ್‌ಗೆ ಕಾರಣ ಏನೆಂದು ತಿಳಿದುಬಂದಿಲ್ಲ.



ಕೆಲವು ದಿನಗಳ ಹಿಂದೆಯೇ ತಮನ್ನಾ ಮತ್ತು ವಿಜಯ್ ವರ್ಮಾ ಬೇರಾಗಿದ್ದಾರೆ ಎಂಬ ಸುದ್ದಿ ಹರಡಿತ್ತು. ಇಷ್ಟೆಲ್ಲಾ ಆದರೂ ಈ ಬಗ್ಗೆ ತಮನ್ನಾ ಅಥವಾ ವಿಜಯ್ ಯಾರೊಬ್ಬರೂ ಯಾವುದೇ ಬೇರೆಯಾಗಿದ್ದರ ಬಗ್ಗೆ ಅಧಿಕೃತ ಹೇಳಿಕೆ ಕೊಟ್ಟಿಲ್ಲ. ತಮನ್ನಾ ಭಾಟಿಯಾ ಮತ್ತು ವಿಜಯ್ ವರ್ಮಾ ಇಬ್ಬರು 'ಲಸ್ಟ್ ಸ್ಟೋರೀಸ್ 2' ಚಿತ್ರದಲ್ಲಿ ಒಟ್ಟಿಗೆ ನಟಿಸಿದ್ದರು. ಅಲ್ಲಿಂದ ಅವರಿಬ್ಬರ ನಡುವಿನ ಪರಿಚಯ ಪ್ರೀತಿಯಾಗಿ ಬದಲಾಯಿತು, ನಂತರ ಈಗ ಬ್ರೇಕಪ್ ಆಗುವ ಮಟ್ಟಕ್ಕೆ ತಿರುವುಪಡೆದಿದೆ. ಸದ್ಯಕ್ಕೆ ತಮನ್ನಾ ಒಡೆಲಾ 2 ಚಿತ್ರದಲ್ಲಿ ಬ್ಯುಸಿಯಾಗಿದ್ದು, ಈ ಚಿತ್ರವು ಹಳೆಯ ಸೂಪರ್ ಹಿಟ್ ಚಿತ್ರ 'ಒಡೆಲಾ ರೈಲ್ವೆ ಸ್ಟೇಷನ್' ನ ಮುಂದುವರಿದ ಭಾಗವಾಗಿದೆ. ಸಂಪತ್ ನಂದಿ ಟೀಮ್ ವರ್ಕ್ಸ್ ಮತ್ತು ಮಧು ಕ್ರಿಯೇಷನ್ಸ್ ಜಂಟಿಯಾಗಿ ಈ ಸಿನಿಮಾದ ಮಾಡಲು ಮುಂದಾಗಿದೆ.

## ಸಕ್ಕರೆ ಸೇವನೆ ನಿಲ್ಲಿಸಿದರೆ ಏನಾಗುತ್ತೆ?

### ಹೆಲ್ತ್ ಟಿಪ್ಸ್



ರಕ್ತದಲ್ಲಿರುವ ಸಕ್ಕರೆ ಮಟ್ಟ ನಿಯಂತ್ರಣಕ್ಕೆ ಬರುವುದು 30 ದಿನಗಳವರೆಗೆ ಸಕ್ಕರೆಯನ್ನು ಸೇವಿಸದಿರಲು ಪ್ರಯತ್ನಿಸಿ, ಅದರ ನಂತರ ನೀವು ಅನೇಕ ಪ್ರಯೋಜನಗಳನ್ನು ಕಂಡುಕೊಳ್ಳುತ್ತೀರಿ. ಇದರೊಂದಿಗೆ, ನಿಮ್ಮ ರಕ್ತದಲ್ಲಿನ ಗ್ಲೂಕೋಸ್ ಮಟ್ಟವನ್ನು ಸುಲಭವಾಗಿ ನಿಯಂತ್ರಿಸಬಹುದಾಗಿದೆ. ಸಕ್ಕರೆಯನ್ನು ತಿನ್ನದಿರುವ ಮೂಲಕ, ಟೈಪ್-2 ಮಧುಮೇಹದ ಅಪಾಯವನ್ನು ಸಹ ಹೆಚ್ಚಿನ ಪ್ರಮಾಣದಲ್ಲಿ ನಿಯಂತ್ರಿಸಬಹುದು.

ತೂಕ ಕಡಿಮೆ ಕಡಿಮೆ ಸಕ್ಕರೆ ಇರುವ ಆಹಾರವನ್ನು ಸೇವಿಸುವುದರಿಂದ ದೇಹವು ಸ್ವಯಂಚಾಲಿತವಾಗಿ ಕ್ಯಾಲೊರಿಗಳನ್ನು ಪಡೆಯುತ್ತದೆ. ಸಿಹಿ ಚೀಸ್ನಲ್ಲಿ ಪ್ರೋಟೀನ್, ಫೈಬರ್ ಮತ್ತು ಪೋಷಕಾಂಶಗಳು ಇರುವುದಿಲ್ಲ. ಹೆಚ್ಚು ಸಿಹಿತಿಂಡಿಗಳನ್ನು ತಿನ್ನುವುದರಿಂದ ಹೊಟ್ಟೆ ಮತ್ತು ಸೊಂಟದ ಸುತ್ತಲೂ ಕೊಬ್ಬು ಹೆಚ್ಚಾಗಲು ಪ್ರಾರಂಭಿಸುತ್ತದೆ. ಹಾಗಾಗಿ ಸಕ್ಕರೆಯಿಂದ ಆಗುವ ದುಷ್ಪರಿಣಾಮಗಳನ್ನು ತಪ್ಪಿಸಬೇಕು ಎಂದಾದರೆ ಒಮ್ಮೆ ಬಿಟ್ಟುಬಿಡಿ ತೂಕ ಹೇಗೆ ಕಡಿಮೆಯಾಗುತ್ತದೆ ಎಂದು ನಿಮಗೇ ತಿಳಿಯುತ್ತದೆ. ಅಲ್ಲದೆ, ನಿಮ್ಮ ತೂಕವು ತ್ವರಿತವಾಗಿ ಕಡಿಮೆಯಾಗುತ್ತದೆ.

ಹೃದಯ ಆರೋಗ್ಯಕರವಾಗಿರುತ್ತದೆ ಸಕ್ಕರೆ ತಿನ್ನದಿರುವ ನೇರ ಲಾಭ ಹೃದಯಕ್ಕೆ ತಲುಪುತ್ತದೆ. ಸಕ್ಕರೆ ಕೊಬ್ಬಾಗಿ ಬದಲಾದಾಗ, ಕೆಟ್ಟ ಕೊಲೆಸ್ಟ್ರಾಲ್ ರಕ್ತದಲ್ಲಿ ಸಂಗ್ರಹವಾಗಲು ಪ್ರಾರಂಭಿಸುತ್ತದೆ. ಇದರಿಂದ ರಕ್ತದೊತ್ತಡವೂ ಅಧಿಕವಾಗುತ್ತದೆ. ಇದಕ್ಕಾಗಿ, ರಕ್ತವು ಹೃದಯವನ್ನು ತಲುಪಲು ಹೆಚ್ಚು ಶ್ರಮಿಸಬೇಕಾಗುತ್ತದೆ, ಇದರಿಂದಾಗಿ ಹೃದಯಾಘಾತದ ಅಪಾಯವು ಹೆಚ್ಚಾಗುತ್ತದೆ. ಯಕೃತ್ತಿಗೆ ಪ್ರಯೋಜನ ಯಕೃತ್ತು ನಮ್ಮ ದೇಹದ ಪ್ರಮುಖ ಅಂಗವಾಗಿದೆ. ಯಕೃತ್ತು ಆರೋಗ್ಯಕರವಾಗಿದ್ದರೆ ನಿಮ್ಮ ಇಡೀ ದೇಹವು ಆರೋಗ್ಯಕರವಾಗಿರುತ್ತದೆ. ಆದರೆ ನೀವು ಬಹಳಷ್ಟು ಸಕ್ಕರೆಯನ್ನು ಸೇವಿಸಿದರೆ ಪಿತ್ತಜನಕಾಂಗಕ್ಕೆ ಸಂಬಂಧಿಸಿದ NAFLD ಸಮಸ್ಯೆಯುಂಟಾಗಬಹುದು.

## ಕಡಲೆ ಹಿಟ್ಟು ಮತ್ತು ಸೌಂದರ್ಯ ಲಾಭಗಳು

### ಬ್ಯೂಟಿ ಟಿಪ್ಸ್



ಕಡಲೆ ಹಿಟ್ಟಿನಲ್ಲಿರುವ ಗುಣಗಳು ಚರ್ಮಕ್ಕೆ ಚಮತ್ಕಾರವನ್ನು ಮಾಡುತ್ತದೆ. ನೀವು ಶುಷ್ಕ ಅಥವಾ ಎಣ್ಣೆ ಚರ್ಮ ಹೊಂದಿದ್ದರೂ ಕೂಡ ಕಡಲೆಹಿಟ್ಟನ್ನು ಬಳಸಬಹುದು. ಇದು ಯಾವುದೇ ರೀತಿಯ ಅಡ್ಡ ಪರಿಣಾಮಗಳನ್ನು ನಿಮ್ಮ ಚರ್ಮಕ್ಕೆ ಉಂಟು ಮಾಡುವುದಿಲ್ಲ. ಕಡಲೆಹಿಟ್ಟನ್ನು ನಿಮ್ಮ ಚರ್ಮಕ್ಕೆ ಅನ್ವಯಿಸಿದಾಗ ಅದು ತೇವಾಂಶವನ್ನು ಕಾಪಾಡುವುದಲ್ಲದೆ, ಪಿ.ಹೆಚ್ ಮಟ್ಟವನ್ನು ಸಮತೋಲನಗೊಳಿಸುತ್ತದೆ.

ನಮ್ಮ ಹಿರಿಯರಲ್ಲಿ ಈ ಮೊಡವೆಗಳು, ಶುಷ್ಕತೆ, ಬಿಸಿಲುಗಂದಿಗೆಯಂತಹ ಯಾವುದೇ ರೀತಿಯ ಸೌಂದರ್ಯ ಸಮಸ್ಯೆಗಳನ್ನು ಅವರು ಹೊಂದಿರಲಿಲ್ಲ. ಏಕೆಂದರೆ ಅವರು ಸ್ನಾನ ಮಾಡುವ ಸಮಯದಲ್ಲಿ ರಾಸಾಯನಿಕಗಳಿಂದ ಕೂಡಿರುವ ಸಾಬೂನಿನ ಹೊರತಾಗಿ ಕಡಲೆಹಿಟ್ಟನ್ನು ಚರ್ಮಕ್ಕೆ ಬಳಸುತ್ತಿದ್ದರು. ಹಾಗಾಗಿ ಅವರು ಆರೋಗ್ಯಕರವಾದ ಚರ್ಮವನ್ನು ಹೊಂದಿದ್ದರು.

ಕೇವಲ ಫೇಸ್ ವಾಶ್ ಅಥವಾ ಸಾಬೂನು ಬಳಕೆ ಮಾಡುವುದರಿಂದ ನಿಮ್ಮ ತ್ವಚೆಯಲ್ಲಿರುವ ಕೊಳೆಯನ್ನು ಸಂಪೂರ್ಣವಾಗಿ ತೊಲಗಿಸಲು ಸಾಧ್ಯವಾಗುವುದಿಲ್ಲ. ಬದಲಾಗಿ ಕೆಲವು ವಿಶೇಷವಾದ ಫೇಸ್ ಪ್ಯಾಕ್ಗಳನ್ನು ಅನ್ವಯಿಸುವುದರಿಂದ ಚರ್ಮಕ್ಕೆ ಬೇಕಾದ ಪೋಷಕಾಂಶಗಳನ್ನು ಹೀರಿಕೊಂಡು ಕೊಳೆಯನ್ನು ಸ್ವಚ್ಛವಾಗಿ ತೆಗೆದು ಹಾಕುತ್ತದೆ. ಕೊಳೆಯನ್ನು ಸಂಪೂರ್ಣವಾಗಿ ತೊಡೆದು ಹಾಕಲು ಕಡಲೆ ಹಿಟ್ಟನ್ನು ಆಗಾಗ್ಗೆ ಫೇಸ್ ಪ್ಯಾಕ್ನಂತೆ ಬಳಕೆ ಮಾಡಿ. ಇದರಿಂದ ಆರೋಗ್ಯಕರವಾದ ಮತ್ತು ಹೊಳೆಯುವ ಚರ್ಮವನ್ನು ನೀವು ಪಡೆಯಬಹುದು. ಶತಮಾನಗಳಿಂದಲೂ ಬಳಸಲಾಗುತ್ತಿರುವ ಕಡಲೆಹಿಟ್ಟು ನಿಮ್ಮ ಬೇಡವಾದ ಕೂದಲನ್ನು ಶಾಶ್ವತವಾಗಿ ಶಮನ ಮಾಡುವ ಗುಣವನ್ನು ಹೊಂದಿದೆ. ಸಾಕಷ್ಟು ಮಂದಿ ತಮ್ಮ ತುಟಿ, ಗದ್ದ, ಕೈ, ಕಾಲು ಮತ್ತು ತ್ವಚೆಯ ಮೇಲೆ ಸೂಕ್ಷ್ಮವಾದ ಕೂದಲನ್ನು ಹೊಂದಿರುತ್ತಾರೆ. ಅಂತವರು ಶಾಶ್ವತವಾಗಿ ಬೇಡವಾದ ಕೂದಲನ್ನು ತೊಡೆದು ಹಾಕಬಹುದು. ಕಡಲೆ ಹಿಟ್ಟು ನೈಸರ್ಗಿಕವಾದ ಬ್ಲೀಚಿಂಗ್ ಗುಣವನ್ನು ಹೊಂದಿದೆ. ಅಲ್ಲದೆ, ಇದು ಸತ್ತ ಚರ್ಮದ ಕೋಶಗಳನ್ನು ತೆಗೆದು ಹಾಕುತ್ತದೆ. ಕಡಲೆ ಹಿಟ್ಟು ಅತ್ಯುತ್ತಮವಾದ ಎಕ್ಸ್ಫೋಲಿಯೇಟಿಂಗ್ ಏಜೆಂಟ್ ಆಗಿ ಕಾರ್ಯ ನಿರ್ವಹಿಸುತ್ತದೆ.

ನಮ್ಮಲ್ಲಿ ಬಹುತೇಕ ಮಂದಿ ತುರಿಕೆಯ ಕಿರಿಕಿರಿ ಅನುಭವವನ್ನು ಹೊಂದಿರುತ್ತಾರೆ. ಅಂತವರು ಕಡಲೆ ಹಿಟ್ಟನ್ನು ಬಳಕೆ ಮಾಡಬಹುದು. ಹಾಗೆಯೇ ಇದು ಚರ್ಮವನ್ನು ಪುನರ್ ಯೌವನಗೊಳಿಸಿ, ವಿಶೇಷವಾದ ಕಾಂತಿಯನ್ನು ನೀಡುತ್ತದೆ.

ಚರ್ಮದ ಮೇಲಿರುವ ಕಪ್ಪು ಚುಕ್ಕೆಗಳು, ಸೂರ್ಯನ ಕಿರಣಗಳಿಂದ ಹಾನಿಗೊಳಗಾದ ಚರ್ಮ, ಸುಕ್ಕುಗಳು, ಗೆರೆಗಳನ್ನು ಈ ಕಡಲೆ ಹಿಟ್ಟು ಚಿಕಿತ್ಸೆ ನೀಡುತ್ತದೆ. ಅಲ್ಲದೆ, ತ್ವಚೆಗೆ ವಿಶೇಷವಾದ ಬಣ್ಣವನ್ನು ನೀಡಿ, ಮೃದುವಾಗಿಸುತ್ತದೆ. ಹಾಗಾಗಿ ನೀವು ಪ್ರತಿನಿತ್ಯ ನಿಮ್ಮ ಚರ್ಮಕ್ಕೆ ನಿಸ್ಸಂದೇಹವಾಗಿ ಕಡಲೆಹಿಟ್ಟನ್ನು ಬಳಸಬಹುದು.

## ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್‌ನಿಂದ
# ಚಿಗುರು–ಕನ್ನಡ ನಾಟಕೋತ್ಸವ

ಚಿಗುರು ಎಂದರೆ ಹೊಸ ಬೆಳವಣಿಗೆ ಎಂದರ್ಥ. ಇದು ಕನ್ನಡ ರಂಗಭೂಮಿಯಲ್ಲಿನ ಮೂಲ ಕೃತಿಗಳನ್ನು ಆಚರಿಸುವ ಹೊಚ್ಚ ಹೊಸ ನಾಟಕೋತ್ಸವವಾಗಿದೆ. ಕಲಕಂ ಆಯೋಜಿಸಿರುವ ಈ ಉತ್ಸವವು ಬೆಂಗಳೂರಿನ ಪ್ರಮುಖ ರಂಗ ತಂಡಗಳ ಆರು ಮೂಲ ನಿರ್ಮಾಣಗಳನ್ನು ಒಳಗೊಂಡಿರುತ್ತದೆ, ಇದು ಹೊಸ ನಿರೂಪಣೆಗಳು ಮತ್ತು ಸೃಜನಶೀಲ ಕಥೆ ಹೇಳುವಿಕೆಗೆ ವೇದಿಕೆಯನ್ನು ಒದಗಿಸುತ್ತದೆ.

ಪ್ರದರ್ಶನ ಕಂಪನಿಗಳಾದ ಅಈಆ (ಸೆಂಟರ್ ಫಾರ್ ಫಿಲ್ಮ್ ಅಂಡ್ ಡ್ರಾಮಾ), ಸಂಚಯ, ಜಂಗಮ ಕಲೆಕ್ಟಿವ್, ಸಂಚಾರಿ ಥಿಯೇಟರ್, ಗಿಂಖಕ ಥಿಯೇಟರ್ ಮತ್ತು ೞಖಿಅ (ಬೆಂಗಳೂರು ಥಿಯೇಟರ್ ಕಲೆಕ್ಟಿವ್) ಇವರ ಪ್ರದರ್ಶನಗಳು ಈ ಉತ್ಸವದಲ್ಲಿ ನಡೆಯಲಿವೆ. ಈ ಕೇಂದ್ರದ ನಿಕಟ ಪ್ರದರ್ಶನ ಸ್ಥಳದಲ್ಲಿ ಕೃತಿಗಳು ಪ್ರಥಮ ಪ್ರದರ್ಶನಗೊಳ್ಳಲಿವೆ. ಪ್ರದರ್ಶನಗಳು ಎರಡು ವಾರಾಂತ್ಯಗಳಲ್ಲಿ ನಡೆಯಲಿವೆ: ಮಾರ್ಚ್ 7, 8, 9 ಮತ್ತು ಮಾರ್ಚ್ 14, 15, 16, ಪ್ರತಿ ನಿರ್ಮಾಣದ ಮಧ್ಯಾಹ್ನ 3.00 ಮತ್ತು ಸಂಜೆ 7.00 ಪ್ರದರ್ಶನವನ್ನು ಒಳಗೊಂಡಿರುತ್ತದೆ. ಚಿಗುರು ನಾಟಕೋತ್ಸವದ ಕಲಾತ್ಮಕ ನಿರ್ದೇಶಕರು ಪ್ರಕಾಶ್ ಬೆಳವಾಡಿ.

ನಿರ್ಮಾಣದ ಹೆಸರು: (ಸಾರಾಂಶ ಮತ್ತು ವಿವರಗಳು ಲಗತ್ತಿಸಲಾಗಿದೆ)ಮಾರ್ಚ್ 7 – CFD (ಸೆಂಟರ್ ಫಾರ್ ಫಿಲ್ಮ್ ಅಂಡ್ ಡ್ರಾಮಾ),ಮಾರ್ಚ್ 8 – ಸಂಚಯ, ಮಾರ್ಚ್ 9 – ಜಂಗಮ ಕಲೆಕ್ಟಿವ್, ಮಾರ್ಚ್ 14 – ಸಂಚಾರಿ ಥಿಯೇಟರ್, ಮಾರ್ಚ್ 15 – VASP ಥಿಯೇಟರ್, ಮಾರ್ಚ್ 16 – ಬೆಂಗಳೂರು ಥಿಯೇಟರ್ ಕಂಪನಿ (ಖಚಿತಪಡಿಸಬೇಕಿದೆ) ಪ್ರಕಾಶ್ ಬೆಳವಾಡಿ – ಪ್ರಖ್ಯಾತ ಕಲಾವಿದ ಮತ್ತು ನಾಟಕ ನಿರ್ದೇಶಕರು

ಪ್ರಕಾಶ್ ಬೆಳವಾಡಿ ಅವರು ಪ್ರಖ್ಯಾತ ಭಾರತೀಯ ರಂಗಭೂಮಿ ಕಲಾವಿದರು, ನಿರ್ದೇಶಕರು, ನಟರು ಮತ್ತು ಬರಹಗಾರರಾಗಿದ್ದು, ಕನ್ನಡ ರಂಗಭೂಮಿ ಮತ್ತು ಸಿನೆಮಾಗೆ ಅವರ ಅಪಾರ ಕೊಡುಗೆಗಳಿಗೆ ಹೆಸರುವಾಸಿಯಾಗಿದ್ದಾರೆ. ಕಥೆ ಹೇಳುವಿಕೆಯ ಬಗ್ಗೆ ಆಳವಾದ ಒಲವನ್ನು ಹೊಂದಿರುವ ಅವರು, ಸಾಂಪ್ರದಾಯಿಕ ನಿರೂಪಣೆಗಳನ್ನು ಆಧುನಿಕ ವಿಷಯಗಳೊಂದಿಗೆ ಬೆರೆಸಿ ಸಮಕಾಲೀನ ರಂಗಭೂಮಿಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಕಲಾವಿದ ಮತ್ತು ನಿರ್ದೇಶಕರಾಗಿ, ಬೆಳವಾಡಿ ಅವರು ಹಲವಾರು ವಿಮರ್ಶಾತ್ಮಕವಾಗಿ ಮೆಚ್ಚುಗೆ ಪಡೆದ ರಂಗ ಪ್ರದರ್ಶನಗಳನ್ನು ಮುನ್ನಡೆಸಿದ್ದಾರೆ, ಅವರ ಚಿಂತನೆಗೆ ಹಚ್ಚುವ ಮತ್ತು ಸಾಮಾಜಿಕವಾಗಿ ಪ್ರಸ್ತುತವಾದ ಕೃತಿಗಳಿಗೆ ಮನ್ನಣೆ ಗಳಿಸಿದ್ದಾರೆ.

ರಂಗಭೂಮಿಯ ಹೊರತಾಗಿ, ಅವರು ಸಂಸ್ಕೃತಿ, ರಾಜಕೀಯ ಮತ್ತು ನಗರ ಸಮಸ್ಯೆಗಳ ಕುರಿತು ಅವರ ಒಳನೋಟವುಳ್ಳ ದೃಷ್ಟಿಕೋನಗಳಿಗೆ ಹೆಸರುವಾಸಿಯಾದ ಗೌರವಾನ್ವಿತ ಚಲನಚಿತ್ರ ನಿರ್ಮಾಪಕರು, ಪತ್ರಕರ್ತರು ಮತ್ತು ಕಾರ್ಯಕರ್ತರಾಗಿದ್ದಾರೆ. ಅವರ ಬಹುಮುಖತೆಯು ಚಲನಚಿತ್ರ ಮತ್ತು ದೂರದರ್ಶನಕ್ಕೆ ವಿಸ್ತರಿಸುತ್ತದೆ, ಅಲ್ಲಿ ಅವರು ಬಹು ಭಾಷೆಗಳಲ್ಲಿ ಆಕರ್ಷಕ ಪ್ರದರ್ಶನಗಳನ್ನು ನೀಡಿದ್ದಾರೆ. ಕಲೆಗಳಿಗೆ ಅಚಲ ಬದ್ಧತೆಯೊಂದಿಗೆ, ಪ್ರಕಾಶ್ ಬೆಳವಾಡಿ ಅವರು ಕನ್ನಡ ರಂಗಭೂಮಿ ದೃಶ್ಯವನ್ನು ಪ್ರೇರೇಪಿಸುವುದನ್ನು ಮತ್ತು ಉನ್ನತೀಕರಿಸುವುದನ್ನು ಮುಂದುವರೆಸಿದ್ದಾರೆ, ಅವರನ್ನು ಭಾರತದ ಸಾಂಸ್ಕೃತಿಕ ಭೂದೃಶ್ಯದಲ್ಲಿ ಪ್ರಮುಖ ಶಕ್ತಿಯನ್ನಾಗಿ ಮಾಡಿದ್ದಾರೆ.

ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ ದಕ್ಷಿಣ ಬೆಂಗಳೂರಿನ ಕಲೆಗಳ ಹೊಸ ಕೇಂದ್ರವಾಗಿದೆ. ಸಾಂಸ್ಕೃತಿಕ ಅಭಿವ್ಯಕ್ತಿಯನ್ನು ಪ್ರದರ್ಶಿಸುವುದು, ಕಲಾತ್ಮಕ ಶ್ರೇಷ್ಠತೆಯ ಅನ್ವೇಷಣೆಯನ್ನು ಬೆಂಬಲಿಸುವುದು ಮತ್ತು ಕಲೆಗಳಿಗೆ ವೇದಿಕೆಯಾಗಿ ಸೇವೆ ಸಲ್ಲಿಸುವುದು ಈ ಕೇಂದ್ರದ ದೃಷ್ಟಿಯಾಗಿದೆ. ಕಲಕಂ ನಾಲ್ಕು ಮುಖ್ಯ ಪ್ರದರ್ಶನ ಸ್ಥಳಗಳನ್ನು ನೀಡುತ್ತದೆ: 1000 ಆಸನಗಳ ಸಭಾಂಗಣ, 300 ಆಸನಗಳ ಆಂಫಿಥಿಯೇಟರ್, 200 ಆಸನಗಳ ಬ್ಲ್ಯಾಕ್ ಬಾಕ್ಸ್ ಮತ್ತು ನೃತ್ಯ ಸ್ಟುಡಿಯೋ. ಕಾರ್ಯಾಚರಣೆಯ ಮೂರನೇ ವರ್ಷಕ್ಕೆ ಕಾಲಿಡುತ್ತಿರುವ ಕಲಕಂ ಕಾರ್ಯಕ್ರಮವು ಬೆಂಗಳೂರು ನಗರದಷ್ಟು ವೈವಿಧ್ಯಮಯ ಮತ್ತು ರೋಮಾಂಚಕ ಪ್ರೇಕ್ಷಕರಿಗೆ ಸಂಗೀತ, ರಂಗಭೂಮಿ, ನೃತ್ಯ ಮತ್ತು ಹೆಚ್ಚಿನವುಗಳ ವೈವಿಧ್ಯಮಯ ಮಿಶ್ರಣವನ್ನು ಭರವಸೆ ನೀಡುತ್ತದೆ. ಈ ಉತ್ಸವವನ್ನು ಶ್ರೀ ಎಂ. ಎಸ್. ಸತ್ಯು ಅವರು ಉದ್ಘಾಟಿಸಲಿದ್ದಾರೆ.



Venue: Prestige Centre for Performing Arts (PCPA), Silver Oak Plantation, 25, Mudalappa St, Anjanadri Layout, Konanakunte, Bengaluru, Karnataka 560062

Ticket pricing:General pass (for each show)- 299

Weekend 1/2 pass- 799

Season pass-1499

For further Contact number: 9901151383

Ticket Booking site: Chiguru Theatre Festival Kannada theatre-plays in Bengaluru Tickets www.BookMyShow.com

## ರಾಶಿ ಭವಿಷ್ಯ



ಜಯಶ್ರೀ.ಬಿ.ಆರ್
ಖ್ಯಾತ ಜ್ಯೋತಿಷಿ
ದೂರವಾಣಿ–9964739507
www.jyotishyavaastu.com

**ಮೇಷ:** ಸ್ತ್ರೀಯರಿಂದ ಅದೃಷ್ಟ, ಯತ್ನ ಕಾರ್ಯಗಳಲ್ಲಿ ಜಯ, ಪಾಲುದಾರಿಕೆಯಲ್ಲಿ ಮನಸ್ತಾಪ.

**ವೃಷಭ:** ಉದ್ಯೋಗ ದೊರಕಿ ನೆಮ್ಮದಿ ಪ್ರಾಪ್ತಿ, ಪ್ರಯಾಣ ಮಾಡುವ ಸಂದರ್ಭ, ಸಹೋದ್ಯೋಗಿಗಳಿಂದ ನಷ್ಟ.

**ಮಿಥುನ:** ಸಹೋದರಿಯಿಂದ ಧನಾಗಮನ, ಸಾಲಗಾರರ ಚಿಂತೆ, ಬಂಧು ಬಾಂಧವರಿಂದ ತೊಂದರೆ.

**ಕಟಕ:** ಸ್ವ ಸಾಮರ್ಥ್ಯದಿಂದ ಹೆಸರು, ಮನೆಯ ವಾತಾವರಣದಲ್ಲಿ ಕಲುಷಿತ, ಅಹಂಭಾವತನ.

**ಸಿಂಹ:** ಆರೋಗ್ಯ ಸಮಸ್ಯೆ, ಶತ್ರುಗಳು ಅಧಿಕ, ದಾಂಪತ್ಯದಲ್ಲಿ ಮನಸ್ತಾಪ, ಉದ್ಯೋಗದ ಶುಭವಾರ್ತೆ.

**ಕನ್ಯಾ:** ಸಾಲ ಮಾಡುವ ಸಂದರ್ಭ, ಕುಟುಂಬ ವಿಚಾರವಾಗಿ ಸಮಸ್ಯೆ, ಅಧಿಕ ನಷ್ಟ.

**ತುಲಾ:** ಆಕಸ್ಮಿಕವಾಗಿ ಉದ್ಯೋಗ ಬಡ್ತಿ, ದಾಂಪತ್ಯ ಕಲಹ, ಬಂಧುಗಳ ವಿರುದ್ಧ ಜಯ.

**ವೃಶ್ಚಿಕ:** ಮನೆಯಲ್ಲಿ ಕಲಹ, ಉದ್ಯೋಗನಿಮಿತ್ತ ಪ್ರಯಾಣ, ಮಾನಸಿಕವಾಗಿ ನೆಮ್ಮದಿ ಭಂಗ.

**ಧನಸ್ಸು:** ಬಂಧುಗಳಿಂದ ಕಿರಿಕಿರಿ, ಸ್ತ್ರೀಯರೊಡನೆ ಜಗಳ, ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಜಯ.

**ಮಕರ:** ಪ್ರೀತಿ ಪ್ರೇಮದ ಬಲೆಯಲ್ಲಿ ಸಿಲುಕುವಿರಿ, ಆತ್ಮವಿಶ್ವಾಸ ಅಧಿಕ, ಹೆಣ್ಣು ಮಕ್ಕಳಿಂದ ಸಹಾಯ.

**ಕುಂಭ:** ಸ್ನೇಹಿತರು ಶತ್ರುಗಳಾಗುವರು, ಪಾಲುದಾರಿಕೆ ವ್ಯವಹಾರದಲ್ಲಿ ನಷ್ಟ, ಸಾಲದ ಸಹಾಯ ಲಭಿಸುವುದು.

**ಮೀನ:** ಸಾಲ ಮರುಪಾವತಿ, ಶತ್ರುಗಳು ಅಧಿಕ ಮತ್ತು ನಷ್ಟ, ಮಕ್ಕಳಿಂದ ನಿದ್ರಾಭಂಗ.

## ದಂತವೈದ್ಯರ ದಿನ




ಪ್ರತಿ ವರ್ಷ ಮಾರ್ಚ್ 6 ರಂದು ದಂತವೈದ್ಯರ ದಿನವನ್ನು ಆಚರಿಸಲಾಗುತ್ತದೆ. ಬಾಲ್ಯದಲ್ಲಿ ಬಹುತೇಕ ಎಲ್ಲರೂ ದಂತವೈದ್ಯರನ್ನು ಭೇಟಿ ಮಾಡಲು ಇಷ್ಟಪಡದಂತೆಯೇ, ದಂತವೈದ್ಯರು ನಮ್ಮ ತೊಂದರೆದಾಯಕ ನೋವುಗಳನ್ನು ನಿವಾರಿಸುತ್ತಾರೆ ಮತ್ತು ನಮ್ಮ ದಂತ ಆರೋಗ್ಯ ಮತ್ತು ನೈರ್ಮಲ್ಯಕ್ಕೆ ಕೊಡುಗೆ ನೀಡುತ್ತಾರೆ ಎಂಬುದನ್ನು ನಾವು ಅಲ್ಲಗಳೆಯುವಂತಿಲ್ಲ. ದಂತವೈದ್ಯರ ದಿನವನ್ನು ಮೌಖಿಕ ನೈರ್ಮಲ್ಯದ ಬಗ್ಗೆ ಜಾಗೃತಿ ಮೂಡಿಸುವಾಗ ನಮ್ಮ ಸಮಾಜದ ಸುಧಾರಣೆಗೆ ನೀಡಿದ ಕೊಡುಗೆಗಳಿಗಾಗಿ ದಂತವೈದ್ಯರಿಗೆ ಸಮರ್ಪಿಸಲಾಗಿದೆ.

ದಂತವೈದ್ಯರ ದಿನವು ಹೇಗೆ ಬಂದಿತು ಎಂಬುದರ ಕುರಿತು ಯಾವುದೇ ದಾಖಲೆಗಳಿಲ್ಲದಿದ್ದರೂ, ದಂತವೈದ್ಯಶಾಸ್ತ್ರದ ವಿಭಾಗವು ಬಹಳ ಪ್ರಾಚೀನ ಕಾಲದಿಂದಲೂ ಇದೆ, ಕ್ರಿ.ಪೂ 7000 ರಿಂದ ಸಿಂಧೂ ಕಣಿವೆ ನಾಗರಿಕತೆಯೊಂದಿಗೆ. ದಂತವೈದ್ಯರೆಂದು ಗುರುತಿಸಲ್ಪಟ್ಟ ವ್ಯಕ್ತಿಯ ಆರಂಭಿಕ ಉಲ್ಲೇಖವೆಂದರೆ ಕ್ರಿ.ಪೂ 2600 ರ ಸುಮಾರಿಗೆ ವಾಸಿಸುತ್ತಿದ್ದ ಹೆಸಿ-ರಾ ಎಂಬ ಈಜಿಪ್ಟಿನ ಬರಹಗಾರ.

ಮಧ್ಯಯುಗದಲ್ಲಿ ಮತ್ತು 19 ನೇ ಶತಮಾನದುದ್ದಕ್ಕೂ, ದಂತವೈದ್ಯಶಾಸ್ತ್ರವು ಒಂದೇ ವೃತ್ತಿಯಾಗಿರಲಿಲ್ಲ, ಮತ್ತು ಹೆಚ್ಚಾಗಿ ಕ್ಷೌರಿಕರು ಅಥವಾ ಸಾಮಾನ್ಯ ವೈದ್ಯರು ದಂತ ಶಸ್ತ್ರಚಿಕಿತ್ಸೆಗಳನ್ನು ನಡೆಸುತ್ತಿದ್ದರು. ನೋವು ಮತ್ತು ಅನಾರೋಗ್ಯವನ್ನು ನಿವಾರಿಸಲು ಕೆಟ್ಟ ಹಲ್ಲುಗಳನ್ನು ಹೊರತೆಗೆಯುವುದಕ್ಕೆ ಅವರ ಅಭ್ಯಾಸ ಸೀಮಿತವಾಗಿತ್ತು. ಅರಿವಳಿಕೆ ಇಲ್ಲದ ಕಾರಣ, ಕೆಟ್ಟ ಹಲ್ಲುಗಳನ್ನು ಕಿತ್ತುಹಾಕಿದ ಜನರು ಅನುಭವಿಸಬೇಕಾದ ನೋವನ್ನು ನಾವು ಊಹಿಸಬಹುದು.

ವಿಜ್ಞಾನ ಮತ್ತು ತಂತ್ರಜ್ಞಾನ ಮುಂದುವರೆದಂತೆ, ಔಷಧ ಮತ್ತು ಹಲ್ಲಿನ ಸಮಸ್ಯೆಗಳನ್ನು ನಿಭಾಯಿಸುವ ವಿಧಾನಗಳೂ ಮುಂದುವರೆದವು. 1530 ರ ಹೊತ್ತಿಗೆ, ದಂತವೈದ್ಯಶಾಸ್ತ್ರದ ಕುರಿತು ಎಲ್ಲಾ ರೀತಿಯ ರೋಗಗಳು ಮತ್ತು ಹಲ್ಲುಗಳ ದುರ್ಬಲತೆಗಳಿಗಾಗಿ ಸಣ್ಣ ಔಷಧೀಯ ಪುಸ್ತಕ ಎಂಬ ಶೀರ್ಷಿಕೆಯ ಪುಸ್ತಕವು ಮಾರುಕಟ್ಟೆಗೆ ಬಂದಿತು. 1724 ರಲ್ಲಿ, ಪಿಯರೆ ಫೌಚರ್ಡ್ ಎಂಬ ಫ್ರೆಂಚ್ ಶಸ್ತ್ರಚಿಕಿತ್ಸಕನನ್ನು ಆಧುನಿಕ ದಂತವೈದ್ಯಶಾಸ್ತ್ರದ ಪಿತಾಮಹ ಎಂದು ಘೋಷಿಸಲಾಯಿತು. ಫೆಬ್ರವರಿ 21, 1828 ರಂದು, ಜಾನ್ ಎಂ. ಹ್ಯಾರಿಸ್ ಸ್ಥಾಪಿಸಿದ ಮೊದಲ ದಂತ ಶಾಲೆಯನ್ನು ಪ್ರಾರಂಭಿಸಲಾಯಿತು, ಇದು ದಂತವೈದ್ಯಶಾಸ್ತ್ರವನ್ನು ಆರೋಗ್ಯ ವೃತ್ತಿಯಾಗಿ ಸ್ಥಾಪಿಸಲು ಸಹಾಯ ಮಾಡಿತು. ಮತ್ತು 1840 ರಲ್ಲಿ, ಬಾಲ್ಟಿಮೋರ್ ಕಾಲೇಜ್ ಆಫ್ ಡೆಂಟಲ್ ಸರ್ಜರಿ ಎಂಬ ಮೊದಲ ದಂತವೈದ್ಯಕೀಯ ಕಾಲೇಜು ಸ್ಥಾಪನೆಯಾಯಿತು.

# ಪ್ರತಿಭಾವಂತ 50 ಕಲಾವಿದರಿಗೆ ಒಟ್ಟು ರೂ.60 ಲಕ್ಷ ಅನುದಾನ

**ದೆಹಲಿ:** ಹ್ಯುಂಡೈ ಮೋಟಾರ್ ಇಂಡಿಯಾ ಫೌಂಡೇಶನ್ (ಎಚ್‌ಎಂಐಎಫ್) ನ ಪ್ರಮುಖ ಕಲಾ ಕಾರ್ಯಕ್ರಮವಾದ 'ಆರ್ಟ್ ಫಾರ್ ಹೋಪ್'ನ ನಾಲ್ಕನೇ ಆವೃತ್ತಿ ಅದ್ದೂರಿಯಾಗಿ ಉದ್ಘಾಟನೆಗೊಂಡಿದೆ. ನವದೆಹಲಿಯ ತ್ರಾವಣಕೋರ್ ಪ್ಯಾಲೇಸ್‌ನಲ್ಲಿ ನಡೆದ ಈ ಕಾರ್ಯಕ್ರಮದ ಉದ್ಘಾಟನೆಯನ್ನು ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವರಾದ ಗಜೇಂದ್ರ ಸಿಂಗ್ ಶೇಖಾವತ್ ಅವರು ನೆರವೇರಿಸಿದರು.

ಕಲೆ ಮತ್ತು ಸಂಸ್ಕೃತಿ ಉತ್ಸವದಲ್ಲಿ ಭಾರತದ 15 ರಾಜ್ಯಗಳ 50 ಅನುದಾನ ವಿಜೇತ ಕಲಾವಿದರು ಮತ್ತು ಕಲಾ ಸಮೂಹಗಳಿಗೆ ಒಟ್ಟು ರೂ.60 ಲಕ್ಷ ಅನುದಾನ ಒದಗಿಸಿ ಗೌರವಿಸಲಾಯಿತು.




'ಆರ್ಟ್ ಫಾರ್ ಹೋಪ್'ನ ಮಹತ್ವದ ಬಗ್ಗೆ ಮಾತನಾಡಿದ ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರು, ಕಲೆಗೆ ಸ್ಫೂರ್ತಿ ನೀಡುವ, ಅರಿವು ಮೂಡಿಸುವ ಮತ್ತು ಸಂಸ್ಕೃತಿ-ಸಮುದಾಯಗಳನ್ನು ಒಗ್ಗೂಡಿಸುವ ಶಕ್ತಿ ಇದೆ. ಹ್ಯುಂಡೈ ಮೋಟಾರ್ ಇಂಡಿಯಾ ಫೌಂಡೇಶನ್ನ 'ಆರ್ಟ್ ಫಾರ್ ಹೋಪ್' ಒಂದು ಶ್ಲಾಘನೀಯ ಯೋಜನೆಯಾಗಿದ್ದು, ಈ ಯೋಜನೆಯು ಕಲಾವಿದರಿಗೆ ನೆರವು ಒದಗಿಸುವುದರ ಜೊತೆಗೆ ಭಾರತದ ವಿವಿಧ ಸಾಂಸ್ಕೃತಿಕ ಅಭಿವ್ಯಕ್ತಿಗಳ ಸಂರಕ್ಷಣೆ ಮಾಡುತ್ತದೆ ಎಂದರು.

'ಆರ್ಟ್ ಫಾರ್ ಹೋಪ್ - ಸೀಸನ್ 4' ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದ ಎಚ್‌ಎಂಐಎಲ್ನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಉನ್ಸೂ ಕಿಮ್ ಅವರು, ನಾವು ಕೇವಲ ಕಾರುಗಳನ್ನು ಮಾತ್ರ ತಯಾರಿಸುವುದಿಲ್ಲ, ಭಾರತಕ್ಕೆ ಉತ್ತಮ ಭವಿಷ್ಯವನ್ನು ನಿರ್ಮಾಣ ಮಾಡುವ ಬದ್ಧತೆ ಹೊಂದಿದ್ದೇವೆ. ಈ ಯೋಜನೆಯು ಭಾರತದ ವೈವಿಧ್ಯಮಯ ಸಂಪ್ರದಾಯಗಳ ಬಗ್ಗೆ ನಾವು ಹೊಂದಿರುವ ಗೌರವ ಮತ್ತು ದೇಶದ ಜನರ ಅಪಾರ ಸಾಮರ್ಥ್ಯವನ್ನು ಪ್ರದರ್ಶಿಸುತ್ತದೆ ಎಂದರು.

ಈ ಸಂದರ್ಭದಲ್ಲಿ ಎಚ್‌ಎಂಐಎಲ್ನ ವ್ಯವಸ್ಥಾಪಕ ನಿರ್ದೇಶಕ ಉನ್ಸೂ ಕಿಮ್, ಎಚ್‌ಎಂಐಎಫ್ನ ಟ್ರಸ್ಟಿ ಗೋಪಾಲಕೃಷ್ಣನ್ ಸಿಎಸ್, ಎಚ್‌ಎಂಐಎಲ್ನ ಕಾರ್ಪೊರೇಟ್ ವ್ಯವಹಾರಗಳ ಕಾರ್ಯನಿರ್ವಾಹಕ ಶ್ರೀ ಜೆಯೊಂಗಿಕ್ ಲೀ, ಮತ್ತು ಎಚ್‌ಎಂಐಎಲ್ನ ಕಾರ್ಪೊರೇಟ್ ಕಮ್ಯುನಿಕೇಷನ್ ಮತ್ತು ಸೋಷಿಯಲ್ ವಿಭಾಗದ ಮುಖ್ಯಸ್ಥ ಪುನೀತ್ ಆನಂದ್ ಅವರು ಉಪಸ್ಥಿತರಿದ್ದರು.

## ಹಸೀನಾ ಹಸ್ತಾಂತರದ ಬಗ್ಗೆ ಭಾರತ ಪ್ರತಿಕ್ರಿಯೆ ನೀಡಿಲ್ಲ: ಯೂನುಸ್

**ಢಾಕಾ:** ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರನ್ನು ಬಾಂಗ್ಲಾದೇಶಕ್ಕೆ ಹಸ್ತಾಂತರಿಸುವಂತೆ ಕೋರಿ ಢಾಕಾ ಭಾರತಕ್ಕೆ ಔಪಚಾರಿಕ ಪತ್ರಗಳನ್ನು ಕಳುಹಿಸಿದೆ, ಆದರೆ, ನವದೆಹಲಿಯಿಂದ ಯಾವುದೇ ಅಧಿಕೃತ ಪ್ರತಿಕ್ರಿಯೆ ಬಂದಿಲ್ಲ ಎಂದು ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರ ಮುಹಮ್ಮದ್ ಯೂನುಸ್ ಹೇಳಿದ್ದಾರೆ. ಯುಕೆ ಮೂಲದ ಸ್ಕೈ ನ್ಯೂಸ್ಗೆ ನೀಡಿದ ಸಂದರ್ಶನದಲ್ಲಿ, ಮಾನವೀಯತೆಯ ವಿರುದ್ಧದ ಅಪರಾಧಗಳಿಗಾಗಿ ಹಸೀನಾ ವಿಚಾರಣೆ ಎದುರಿಸಲಿದ್ದಾರೆ ಎಂದು ಯೂನುಸ್ ಹೇಳಿದರು ಎಂದು ಸರ್ಕಾರಿ ಸ್ವಾಮ್ಯದ ಬಿಎಸ್‌ಎಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ. ಬಾಂಗ್ಲಾದೇಶದಲ್ಲಿ ವಿದ್ಯಾರ್ಥಿಗಳ ನೇತೃತ್ವದಲ್ಲಿ ನಡೆದ ಬೃಹತ್ ಪ್ರತಿಭಟನೆಯ ನಂತರ 16 ವರ್ಷಗಳಿಂದ ಆಡಳಿತದಲ್ಲಿದ್ದ ಅವಾಮಿ ಲೀಗ್ ಸರ್ಕಾರ ಪತನಗೊಂಡಿತ್ತು. ಆಗ ಭಾರತಕ್ಕೆ ಪಲಾಯನ ಮಾಡಿದ 77 ವರ್ಷದ ಹಸೀನಾ ಕಳೆದ ವರ್ಷ ಆಗಸ್ಟ್ 5 ರಿಂದ ಭಾರತದಲ್ಲಿಯೇ ವಾಸಿಸುತ್ತಿದ್ದಾರೆ. ಬಾಂಗ್ಲಾದೇಶದ ಅಂತಾರಾಷ್ಟ್ರೀಯ ಅಪರಾಧಗಳ ನ್ಯಾಯಮಂಡಳಿ (ಐಸಿಟಿ) ಹಸೀನಾ ಮತ್ತು ಹಲವಾರು ಮಾಜಿ ಕ್ಯಾಬಿನೆಟ್ ಮಂತ್ರಿಗಳು, ಸಲಹೆಗಾರರು ಮತ್ತು ಮಿಲಿಟರಿ ಹಾಗೂ ಸಿವಿಲ್ ಅಧಿಕಾರಿಗಳ ವಿರುದ್ಧ ಮಾನವೀಯತೆಯ ವಿರುದ್ಧದ ಅಪರಾಧಗಳು ಮತ್ತು ನರಮೇಧದ ಆರೋಪಗಳ ಮೇಲೆ ಬಂಧನ ವಾರಂಟ್ ಹೊರಡಿಸಿದೆ. ಹಸೀನಾ ಮಾತ್ರವಲ್ಲದೇ ಅವರ ಕುಟುಂಬಸ್ಥರು, ಸಹವರ್ತಿಗಳು ಸೇರಿದಂತೆ ಅವರೊಂದಿಗೆ ಸಂಬಂಧ ಹೊಂದಿದ್ದ ಎಲ್ಲ ಜನರ ವಿಚಾರಣೆ ನಡೆಯಲಿದೆ ಎಂದು ಹೇಳಿದರು.



# ಜನೌಷಧಿ ಮಾದರಿಯಲ್ಲೇ ಜಾನುವಾರುಗಳಿಗೆ 'ಪಶು ಔಷಧಿ' ಯೋಜನೆ?

**ನವದೆಹಲಿ:** ಜನಸಾಮಾನ್ಯರಿಗೆ ಕೈಗೆಟುಕುವ ದರದಲ್ಲಿ ಸಿಗುವ 'ಜನೌಷಧಿ' ಮಾದರಿಯಲ್ಲೇ ಜಾನುವಾರುಗಳಿಗೆ 'ಪಶು ಔಷಧಿ' ಹೆಸರಿನಲ್ಲಿ ಜೆನೆರಿಕ್ ಔಷಧಿ ಬಿಡುಗಡೆ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಈ ಯೋಜನೆಗಾಗಿ 2026ರ ಮಾರ್ಚ್ 31ರ ಹೊತ್ತಿಗೆ 75 ಕೋಟಿ ರೂ. ವೆಚ್ಚ ಮಾಡಲು ನಿರ್ಧರಿಸಲಾಗಿದೆ. ಪಶು ಆರೋಗ್ಯ ಮತ್ತು ರೋಗ ನಿಯಂತ್ರಣದ ಕಾರ್ಯಕ್ರಮ ಪರಿಷ್ಕರಣೆಗೆ ಸಚಿವ ಸಂಪುಟ ಅನುಮೋದನೆ ನೀಡಿದೆ.

**ಕೇಂದ್ರ ಸಂಪುಟ ಅನುಮೋದನೆ**

ಕಳೆದ ಜನಗಣತಿಯ ಪ್ರಕಾರ 19.25 ಕೋಟಿ ಜಾನುವಾರುಗಳ ಸಂಖ್ಯೆ ಇದೆ. ಪಶುವೈದ್ಯಕೀಯ ಔಷಧಿಗಳು ಮತ್ತು ಮೇವು ಪೂರಕಕ್ಕೆ ಸುಮಾರು 6,000 ಕೋಟಿಗಳಷ್ಟು ಬಳಕೆ ಮಾಡಲಾಗುತ್ತಿದೆ. ಆದರೆ, ಪ್ರಸ್ತಾಪಿತ ನಿಧಿಯ ಹಂಚಿಕೆಯು ಪರಿಣಾಮ ಬೀರುವುದಿಲ್ಲ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

2019 ರ 20 ನೇ ಜಾನುವಾರು ಜನಗಣತಿಯ ಪ್ರಕಾರ, ಭಾರತವು ದನ, ಎಮ್ಮೆ, ಮಿಥುನ್ ಮತ್ತು ಯಾಕ್ ಸೇರಿದಂತೆ ಸುಮಾರು 30.38 ಕೋಟಿ ಗೋವುಗಳಿಗೆ ನೆಲೆಯಾಗಿದೆ. ನಂತರ ಜಾನುವಾರು ಜನಗಣತಿಯನ್ನು 2024ರ ಅಕ್ಟೋಬರ್ ಮತ್ತು 2025 ರ ಫೆಬ್ರವರಿ ನಡುವೆ ನಡೆಸಲಾಯಿತು. ಅದರ ಡೇಟಾವನ್ನು ಈ ವರ್ಷದ ಕೊನೆಯಲ್ಲಿ ಬಿಡುಗಡೆ ಮಾಡುವ ಸಾಧ್ಯತೆ ಇದೆ.

ಸಂಪುಟ ಸಭೆಯ ನಂತರ ಸುದ್ದಿಗಾರರನ್ನುದ್ದೇಶಿಸಿ ಮಾತನಾಡಿದ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್, ಜಾನುವಾರುಗಳ ಆರೋಗ್ಯಕ್ಕೆ ಸಂಬಂಧಿಸಿದ ನಿರ್ಧಾರವನ್ನು ಸಂಪುಟದಲ್ಲಿ ತೆಗೆದುಕೊಳ್ಳಲಾಗಿದೆ. ಯೋಜನೆಯ 'ಪಶು ಔಷಧಿ' ಘಟಕದ ಅಡಿಯಲ್ಲಿ ಉತ್ತಮ ಗುಣಮಟ್ಟದ ಔಷಧಿಗಳನ್ನು ಒದಗಿಸಲಾಗುವುದು ಎಂದು ತಿಳಿಸಿದ್ದಾರೆ. 2024-25 ಮತ್ತು 2025-26ನೇ ಸಾಲಿಗೆ ಯೋಜನೆಗೆ ಒಟ್ಟು ಬಜೆಟ್ 3,880 ಕೋಟಿ ರೂ. ಮೀಸಲಿಡಲು ಸಂಪುಟ ನಿರ್ಧರಿಸಿದೆ. ಪಶು ಔಷಧಿಯು ಜನೌಷಧಿ ಯೋಜನೆಯಂತೆಯೇ ಇರುತ್ತದೆ ಎಂದು ಸಚಿವರು ಒತ್ತಿ ಹೇಳಿದ್ದಾರೆ.



# ಮೋದಿ ವಿರುದ್ಧ ಖರ್ಗೆ ವಾಗ್ದಾಳಿ



**ದೆಹಲಿ:** ಗೃಹಿಣಿಯರು ಚಿನ್ನದ ಆಭರಣಗಳನ್ನು ಒತ್ತೆ ಇಡುತ್ತಿರುವ ಪ್ರಕರಣಗಳು ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ, ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಬುಧವಾರ ವಾಗ್ದಾಳಿ ನಡೆಸಿದ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ''ಲೋಕಸಭಾ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ನೀವು ಮಹಿಳೆಯರ ಮಂಗಳಸೂತ್ರಗಳನ್ನು ಕಸಿಯಲಾಗುತ್ತಿದೆ ಎಂದು ನೀಡಿದ್ದ ಹೇಳಿಕೆ ನಿಜವಾಗುತ್ತಿದೆ'' ಎಂದು ಆರೋಪಿಸಿದ್ದಾರೆ.

ಈ ಕುರಿತು ಎಕ್ಸ್ ನಲ್ಲಿ ಪತ್ರಿಕಾ ವರದಿಗಳನ್ನು ಉಲ್ಲೇಖಿಸಿ ಪೋಸ್ಟ್ ಮಾಡಿರುವ ಅವರು, ''2019ರಿಂದ 2024ರ ನಡುವೆ ನಾಲ್ಕು ಕೋಟಿ ಮಹಿಳೆಯರು ತಮ್ಮ ಚಿನ್ನದ ಆಭರಣಗಳನ್ನು ಅಡವಿಟ್ಟು 4.7 ಲಕ್ಷ ಕೋಟಿ ರೂಪಾಯಿ ಸಾಲ ಪಡೆದಿದ್ದಾರೆ. 2024ರಲ್ಲಿ ಮಹಿಳೆಯರು ಪಡೆದಿರುವ ಸಾಲಗಳ ಪೈಕಿ ಶೇ. 38ರಷ್ಟು ಚಿನ್ನದ ಸಾಲಗಳಾಗಿವೆ. ಫೆಬ್ರವರಿ 2025ರಲ್ಲಿ ಬಿಡುಗಡೆ ಮಾಡಿರುವ ಆರ್‌ಬಿಐ ದತ್ತಾಂಶಗಳ ಪ್ರಕಾರ, ಒಂದು ವರ್ಷದಲ್ಲಿ ಪಡೆದಿರುವ ಚಿನ್ನದ ಸಾಲಗಳ ಪ್ರಮಾಣ ಶೇ. 71.3ರಷ್ಟು ಏರಿಕೆಯಾಗಿದೆ'' ಎಂದು ಅವರು ಕಿಡಿ ಕಾರಿದ್ದಾರೆ. ''ನರೇಂದ್ರ ಮೋದಿಯವರೆ, ನೀವು ಮಂಗಳಸೂತ್ರಗಳನ್ನು ಕಸಿಯುವ ಕುರಿತು ಮಾತನಾಡಿದ್ದಿರಿ. ಅದೀಗ ನಿಜವಾಗಿದೆ. ನಿಮ್ಮ ಆಡಳಿತದಲ್ಲಿ ಮಹಿಳೆಯರು ತಮ್ಮ ಚಿನ್ನದ ಆಭರಣಗಳನ್ನು ಒತ್ತೆ ಇಡಬೇಕಾದ ಅನಿವಾರ್ಯತೆಗೆ ಒಳಗಾಗಿದ್ದಾರೆ. ಮೊದಲು ನೀವು ನೋಟು ಅಮಾನ್ಯ ಮಾಡುವ ಮೂಲಕ ಮಹಿಳೆಯರ ಹಣವನ್ನು ನಾಪತ್ತೆ ಮಾಡಿದಿರಿ. ಈಗ, ಹಣದುಬ್ಬರ ಹಾಗೂ ಕುಸಿಯುತ್ತಿರುವ ಮನೆ ಉಳಿತಾಯದಿಂದ ಅವರು ತಮ್ಮ ಅತ್ಯಂತ ಅಮೂಲ್ಯವಾದ ಆಭರಣಗಳನ್ನು ಒತ್ತೆ ಇಡಬೇಕಾದ ಅನಿವಾರ್ಯತೆಗೆ ಒಳಗಾಗಿದ್ದಾರೆ'' ಎಂದು ಅವರು ವಾಕ್ ಪ್ರಹಾರ ನಡೆಸಿದ್ದಾರೆ.



# ಭಾರತದ ಅಧಿಕ ಸುಂಕ ನೀತಿ: ಟ್ರಂಪ್ ಅಸಮಾಧಾನ

**ವಾಷಿಂಗ್ಟನ್:** ಅಮೆರಿಕ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ನಂತರ ಇದೇ ಮೊದಲ ಬಾರಿಗೆ ಡೊನಾಲ್ಡ್ ಟ್ರಂಪ್ಕಾಂಗ್ರೆಸ್ ಜಂಟಿ ಅಧಿವೇಶನವನ್ನುದ್ದೇಶಿಸಿ ಮಾತನಾಡಿದರು. ಈ ವೇಳೆ ಅವರು ಭಾರತ ಅಮೆರಿಕ ಉತ್ಪನ್ನಗಳ ಮೇಲೆ ವಿಧಿಸುತ್ತಿರುವ ಸುಂಕ ಪ್ರಮಾಣದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅಲ್ಲದೇ ಮುಂದಿನ ತಿಂಗಳಿಂದ ಭಾರತದ ಉತ್ಪನ್ನಗಳ ಮೇಲೆ ಅಷ್ಟೇ ಪ್ರಮಾಣದಲ್ಲಿ ಸುಂಕ ವಿಧಿಸುವುದಾಗಿ ಘೋಷಿಸಿದ್ದಾರೆ. ಭಾರತ ಮತ್ತು ಚೀನಾ ಸೇರಿದಂತೆ ಇತರ ದೇಶಗಳು ವಿಧಿಸುವ ಹೆಚ್ಚಿನ ಸುಂಕವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಟೀಕಿಸಿದ್ದಾರೆ ಮಾತ್ರವಲ್ಲ, ಇದು ತುಂಬಾ ಅನ್ಯಾಯ ಎಂದು ಕರೆದಿದ್ದಾರೆ ಮತ್ತು ಮುಂದಿನ ತಿಂಗಳಿನಿಂದ ಪರಸ್ಪರ ಸುಂಕವನ್ನು ಪ್ರಾರಂಭಿಸುವುದಾಗಿ ಹೇಳಿದ್ದಾರೆ.



ಪರಸ್ಪರ ಸುಂಕಗಳು ಏಪ್ರಿಲ್ 2 ರಿಂದ ಪ್ರಾರಂಭವಾಗುತ್ತವೆ ಎಂದು ಹೇಳಿದರು. ಇತರ ದೇಶಗಳು ದಶಕಗಳಿಂದ ನಮ್ಮ ವಿರುದ್ಧ ಸುಂಕವನ್ನು ಬಳಸುತ್ತಿವೆ ಮತ್ತು ಈಗ ಅವುಗಳನ್ನು ಇತರ ದೇಶಗಳ ವಿರುದ್ಧ ಬಳಸಲು ಪ್ರಾರಂಭಿಸುವ ಸರದಿ ನಮ್ಮದಾಗಿದೆ ಎಂದಿದ್ದಾರೆ. ಸರಾಸರಿಯಾಗಿ, ಯುರೋಪಿಯನ್ ಯೂನಿಯನ್, ಚೀನಾ, ಬ್ರೆಜಿಲ್, ಭಾರತ, ಮೆಕ್ಸಿಕೊ ಮತ್ತು ಕೆನಡಾ ದೇಶಗಳ ಬಗ್ಗೆ ಕೇಳಿದ್ದೀರಾ ? ಮತ್ತು ಅಸಂಖ್ಯಾತ ಇತರ ದೇಶಗಳು ನಾವು ವಿಧಿಸುವುದಕ್ಕಿಂತ ಹೆಚ್ಚಿನ ಸುಂಕವನ್ನು ವಿಧಿಸುತ್ತವೆ. ಇದು ತುಂಬಾ ಅನ್ಯಾಯ ಎಂದು ಟ್ರಂಪ್ ಹೇಳಿದರು.

ಕಾಂಗ್ರೆಸ್ನ ಜಂಟಿ ಅಧಿವೇಶನದಲ್ಲಿ ತಮ್ಮ ಎರಡನೇ ಅವಧಿಯ ಮೊದಲ ಭಾಷಣದಲ್ಲಿ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಕಠಿಣ ಸುಂಕ ನೀತಿಯನ್ನು ಸಮರ್ಥಿಸಿಕೊಂಡರು, ಭಾರತ ಸೇರಿದಂತೆ ವಿಶ್ವದಾದ್ಯಂತ ಹಲವಾರು ದೇಶಗಳಿಂದ ಅಮೆರಿಕವು ಹೆಚ್ಚಿನ ಸುಂಕಗಳನ್ನು ಎದುರಿಸುತ್ತಿದೆ ಎಂದು ಪುನರುಚ್ಚರಿಸಿದರು. ಟ್ರಂಪ್ ಆಡಳಿತದ ಅಡಿಯಲ್ಲಿ ನೀವು ನಿಮ್ಮ ಉತ್ಪನ್ನವನ್ನು ಅಮೆರಿಕದಲ್ಲಿ ತಯಾರಿಸದಿದ್ದರೆ, ನೀವು ಸುಂಕವನ್ನು ಪಾವತಿಸಬೇಕಾಗುತ್ತದೆ, ಮತ್ತು ಕೆಲವು ಸಂದರ್ಭಗಳಲ್ಲಿ, ಸಾಕಷ್ಟು ದೊಡ್ಡದಾಗಿದೆ. ಇತರ ದೇಶಗಳು ದಶಕಗಳಿಂದ ನಮ್ಮ ವಿರುದ್ಧ ಸುಂಕಗಳನ್ನು ಬಳಸುತ್ತಿವೆ ಮತ್ತು ಈಗ ಆ ಇತರ ದೇಶಗಳ ವಿರುದ್ಧ ಅವುಗಳನ್ನು ಬಳಸಲು ಪ್ರಾರಂಭಿಸುವ ಸರದಿ ನಮ್ಮದು ಎಂದು ಟ್ರಂಪ್ ತಮ್ಮ ಭಾಷಣದಲ್ಲಿ ಹೇಳಿದರು.

## ಆಮಂತ್ರಣ ಪತ್ರಿಕೆಯಲ್ಲಿ ವಧು-ವರರ ವಯಸ್ಸು ಇರಲೇಬೇಕು!!

**ದೆಹಲಿ:** ಬಾಲ್ಯ ವಿವಾಹ ಪದ್ಧತಿಯನ್ನು ತಡೆಯಲು ಸರ್ಕಾರಗಳು ಕೈಗೊಂಡ ಕ್ರಮಗಳು ಅಷ್ಟಿಷ್ಟಲ್ಲ... ಆದರೂ ಗ್ರಾಮೀಣ ಪ್ರದೇಶಗಳಲ್ಲಿ ಈಗಲೂ ಮೂಢನಂಬಿಕೆಗಳಿಂದ ಹೊರಬರದ ಜನ ಆಚರಣೆ ಮತ್ತು ಸಂಪ್ರದಾಯವೆಂಬ ಹೆಸರಿನಲ್ಲಿ ಇದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಇನ್ನು ಹೊರಜಗತ್ತಿನ ಅರಿವೇ ಇಲ್ಲದ ಸಣ್ಣ ಸಣ್ಣ ಮಕ್ಕಳನ್ನು ಮದುವೆಯೆಂಬ ಪ್ರಪಾತಕ್ಕೆ ನೂಕುತ್ತಿದ್ದಾರೆ. ಅನಕ್ಷರತೆಯಿಂದ ಈ ತೊಂದರೆ ದಿನೇ ದಿನೇ ಮತ್ತಷ್ಟು ಉಲ್ಬಣವಾಗುತ್ತಿದೆ. ಆದ ಕಾರಣ ಈ ಸಮಸ್ಯೆಗೆ ಕಡಿವಾಣ ಹಾಕಲು ರಾಜಸ್ಥಾನ ಸರ್ಕಾರವು ಹೊಸ ಯೋಜನೆಯೊಂದನ್ನು ರೂಪಿಸಿದೆ. ಈ ಯೋಜನೆಯನುಸಾರ ಇನ್ಮುಂದೆ ಮದುವೆಯಾಗುವ ಎಲ್ಲಾ ಜೋಡಿ ತಮ್ಮ ಮದುವೆಯ ಆಮಂತ್ರಣ ಪತ್ರಗಳಲ್ಲಿ ಹೆಸರಿನ ಮುಂದೆ ಪದವಿ, ಉದ್ಯೋಗದ ಬದಲು ತಮ್ಮ ವಯಸ್ಸನ್ನು ಮುದ್ರಿಸಬೇಕು. ಆಮಂತ್ರಣ ಪತ್ರಗಳನ್ನು ತಯಾರು ಮಾಡುವ ಮುದ್ರಣಾಲಯಗಳು ಮದುವೆಯಾಗುವ ಹುಡುಗ-ಹುಡುಗಿಯ ಕುಟುಂಬದವರಿಂದ ಅವರ ನಿಜವಾದ ವಯಸ್ಸನ್ನು ಕೇಳಿ ನಂತರ ಅದನ್ನು ಅವರ ಹೆಸರಿನ ಮುಂದೆ ಬರೆಯಬೇಕು ಎಂದು ಆದೇಶಿಸಿದೆ. ಇದರೊಂದಿಗ ಮದುವೆಯ ಸಂದರ್ಭದಲ್ಲಿ ಬಳಕೆಯಾಗುವ ಶಾಮಿಯಾನ, ಪುರೋಹಿತರು, ಅಡುಗೆಯವರು ಮತ್ತು ವಸ್ತ್ರವಿನ್ಯಾಸಕರು ಸೇರಿಂದಂತೆ ಹೀಗೆ ಭಾಗಿಯಾಗುವ ಎಲ್ಲರೂ ಈ ರೀತಿಯ ಬಾಲ್ಯ ವಿವಾಹ ಕುರಿತು ಜಾಗೃತಿ ಹೊಂದಿರರಬೇಕು. ಇಂತಹ ಕಾನೂನು ಬಾಹಿರ ಕೃತ್ಯಗಳನ್ನು ತಡೆಯಲು ಸರ್ಕಾರದೊಂದಿಗೆ ಕೈಜೋಡಿಸಬೇಕೆಂದು ಖಡಕ್ ಎಚ್ಚರಿಕೆ ನೀಡಿದೆ.

## ಯಮುನಾ ನದಿಯಿಂದ 1,300 ಟನ್ ತ್ಯಾಜ್ಯ ಹೊರಕ್ಕೆ

**ನವದೆಹಲಿ:** ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಕೇಂದ್ರ ಬಿಂದುವಾಗಿದ್ದ 'ಯಮುನಾ ನದಿ' ಸ್ವಚ್ಛತಾ ಕಾರ್ಯ ಭರದಿಂದ ಸಾಗಿದೆ. ಕಳೆದ 10 ದಿನಗಳಲ್ಲಿ 1300 ಟನ್ ತ್ಯಾಜ್ಯವನ್ನು ಹೊರತೆಗೆಯಲಾಗಿದೆ ಎಂದು ನೀರಾವರಿ ಮತ್ತು ಪ್ರವಾಹ ನಿಯಂತ್ರಣ ಸಚಿವ ಪರ್ವೇಶ್ ವರ್ಮಾ ಅವರು ಬುಧವಾರ ತಿಳಿಸಿದರು.ದೋಣಿಯಲ್ಲಿ ಸಾಗಿ ಯಮುನಾ ನದಿಯನ್ನು ಪರಿಶೀಲಿಸಿದ ಅವರು ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿ, ಚುನಾವಣೆಯಲ್ಲಿ ನೀಡಲಾಗಿದ್ದ ಯಮುನಾ ನದಿ ಸ್ವಚ್ಛತೆ ಭರವಸೆಯನ್ನು ನಮ್ಮ ಸರ್ಕಾರ ತ್ವರಿತಗತಿಯಲ್ಲಿ ಅನುಷ್ಠಾನಕ್ಕೆ ತಂದಿದೆ. ಸರ್ಕಾರ ಅಧಿಕಾರಕ್ಕೆ ಬಳಿಕದ ಆದ್ಯತೆಯ ಮೇರೆಗೆ ನದಿ ಶುಚಿ ಕಾರ್ಯ ಆರಂಭಿಸಲಾಗಿದೆ. ಈವರೆಗೂ 1,300 ಟನ್ ತ್ಯಾಜ್ಯವನ್ನು ನದಿಯಿಂದ ತೆಗೆದುಹಾಕಲಾಗಿದೆ ಎಂದು ಹೇಳಿದರು.ದೆಹಲಿಯು 2023 ರಲ್ಲಿ ಭೀಕರ ಪ್ರವಾಹವನ್ನು ಎದುರಿಸಿತು. ನದಿ ನೀರು ಹರಿದು ಹೋಗುವ ಎಲ್ಲ ಪ್ರವಾಹ ದ್ವಾರಗಳು ಕಸದಿಂದ ಮುಚ್ಚಿಹೋಗಿದ್ದು, ಇದಕ್ಕೆ ಪ್ರಮುಖ ಕಾರಣ. ಆದರೆ, ಈಗ ಅವುಗಳನ್ನು ದುರಸ್ತಿ ಮಾಡಲಾಗಿದೆ. ಭವಿಷ್ಯದಲ್ಲಿ ಪ್ರವಾಹ ತಡೆಗೆ ತಡೆಗೋಡೆಗಳನ್ನು ಎತ್ತರಿಸಲಾಗುವುದು ಎಂದು ಭರವಸೆ ನೀಡಿದರು. ಯಮುನಾ ನದಿ ಸಂಪೂರ್ಣವಾಗಿ ಸ್ವಚ್ಛಗೊಳಿಸಿ, ಪುನರುಜ್ಜೀವನ ನೀಡುವುದು ನಮ್ಮ ಬದ್ಧತೆಯಾಗಿದೆ. ದೆಹಲಿ ಅಭಿವೃದ್ಧಿ ಪ್ರಾಧಿಕಾರವು ನದಿಪಾತ್ರವನ್ನು ಮರು ರೂಪಿಸುತ್ತಿದೆ. ಅತಿಕ್ರಮಣವಾದ ಜಾಗವನ್ನು ತೆರವು ಮಾಡಲಾಗುತ್ತಿದೆ ಎಂದು ಸಚಿವರು ಹೇಳಿದರು.

# ಗಾಯಕಿ ಕಲ್ಪನಾ ರಾಘವೇಂದ್ರ ಆತ್ಮಹತ್ಯೆಗೆ ಯತ್ನ ಪ್ರಕರಣಕ್ಕೆ ಟ್ವಿಸ್ಟ್

**ಹೈದರಾಬಾದ್:** ಮಂಗಳವಾರ ಸಂಜೆ ಹೈದರಾಬಾದ್ನ ನಿಜಾಂಪೇಟೆಯ ತಮ್ಮ ನಿವಾಸದಲ್ಲಿ ಪ್ರಜ್ಞೆ ತಪ್ಪಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದ, ಕನ್ನಡ ಸೇರಿದಂತೆ ದಕ್ಷಿಣ ಭಾರತದ ವಿವಿಧ ಚಿತ್ರರಂಗದಲ್ಲಿ ಗುರುತಿಸಿಕೊಂಡಿದ್ದ ಜನಪ್ರಿಯ ತೆಲುಗು ಗಾಯಕಿ ಕಲ್ಪನಾ ರಾಘವೇಂದ್ರ ಅವರನ್ನು ಕೂಡಲೇ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಇದೀಗ ಚೇತರಿಸಿಕೊಳ್ಳುತ್ತಿದ್ದಾರೆ.



ಆರಂಭದಲ್ಲಿ ಅವರು ನಿದ್ದೆ ಮಾತ್ರೆಗಳನ್ನು ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು ಎನ್ನುವ ಸುದ್ದಿ ಹಬ್ಬಿತ್ತು. ಇದೀಗ ಈ ಬಗ್ಗೆ ಪ್ರತಿಕ್ರಿಯಿಸಿರುವ ಅವರ ಪುತ್ರಿ ದಯಾ ಪ್ರಸಾದ್ ಪ್ರಭಾಕರ್ ಈ ವದಂತಿಯನ್ನು ತಳ್ಳಿ ಹಾಕಿದ್ದಾರೆ. ತಮ್ಮ ತಾಯಿ ಆತ್ಮಹತ್ಯೆಗೆ ಯತ್ನಿಸಿದ್ದಲ್ಲ, ಆರೋಗ್ಯದಲ್ಲಿ ಸ್ವಲ್ಪ ಏರುಪೇರಾಗಿ ಪ್ರಜ್ಞೆ ತಪ್ಪಿ ಬಿದ್ದಿದ್ದರು ಎಂದು ತಿಳಿಸಿದ್ದಾರೆ.

ಮಾಧ್ಯಮದೊಂದಿಗೆ ಮಾತನಾಡಿದ ಅವರು, ನನ್ನ ತಾಯಿಗೆ ಆತ್ಮಹತ್ಯೆಗೆ ಯತ್ನಿಸುವಂತಹ ಯಾವುದೇ ಸಮಸ್ಯೆ ಇರಲಿಲ್ಲ. ಅವರು ಆರೋಗ್ಯವಂತರಾಗಿ, ಖುಷಿಯಾಗಿಯೇ ಇದ್ದರು. ಅವರೀಗ ಪಿಎಚ್ಡಿ ಮತ್ತು ಎಲ್ ಎಲ್ಬಿ ಮಾಡುತ್ತಿದ್ದಾರೆ. ಇದರಿಂದ ಅವರನ್ನು ನಿದ್ರಾಹೀನತೆ ಕಾಡುತ್ತಿದೆ. ಅದಕ್ಕಾಗಿ ವೈದ್ಯರು ಕೆಲವು ಔಷಧವನ್ನು ಸೂಚಿಸಿದ್ದರು. ಒತ್ತಡದಿಂದಾಗಿ ಈ ಔಷಧಗಳು ಓವರ್ ಡೋಸ್ ಆಗಿವೆ. ಹೀಗಾಗಿ ಅವರು ಪ್ರಜ್ಞೆ ತಪ್ಪಿ ಬಿದ್ದಿದ್ದರು. ಅದು ಬಿಟ್ಟು ಅವರು ಆತ್ಮಹತ್ಯೆಗೆ ಯತ್ನಿಸಿಲ್ಲ. ದಯವಿಟ್ಟು ಯಾರೂ ಸುಳ್ಳು ಸುದ್ದಿ ಹಬ್ಬಿಸಬೇಡಿ ಎಂದು ಮನವಿ ಮಾಡಿದ್ದಾರೆ.

# ಕ್ಷೇತ್ರ ಪುನರ್ ವಿಂಗಡಣೆಗೆ ಕಮಲ್ ಹಾಸನ್ ವಿರೋಧ

**ತಮಿಳುನಾಡು:** ಸರ್ವಪಕ್ಷ ಸಭೆಯಲ್ಲಿ ಮಾತನಾಡಿದ ಕಮಲ್ ಹಾಸನ್, ಈ ಕ್ರಮವು ಏಕರೂಪದ ಹಿಂಡಿಯಾ ಮಾದರಿಯ ದೇಶದ ರಚನೆಗೆ ಕಾರಣವಾಗುವ ಮೂಲಕ ಭಾರತದ ಅಂತರ್ಗತ ದೃಷ್ಟಿಕೋನಕ್ಕೆ ಅಪಾಯ ಎದುರಾಗಲಿದೆ ಎಂದು ಹೇಳಿದರು. ಜನಸಂಖ್ಯೆಯ ಆಧಾರದ ಮೇಲೆ ಸಂಸದೀಯ ಕ್ಷೇತ್ರ ಮರುವಿಂಗಡಣೆಯ ವಿಷಯವು ಕೇವಲ ತಮಿಳುನಾಡಿಗೆ ಮಾತ್ರ ಆತಂಕದ ವಿಷಯವಾಗಿಲ್ಲ. ಇದು ಆಂಧ್ರಪ್ರದೇಶ, ಕರ್ನಾಟಕ, ಕೇರಳ, ಪಂಜಾಬ್, ಒಡಿಶಾ, ಪಶ್ಚಿಮ ಬಂಗಾಳ, ಹಿಮಾಚಲ ಪ್ರದೇಶ, ಉತ್ತರಾಖಂಡ ಮತ್ತು ಈಶಾನ್ಯ ರಾಜ್ಯಗಳ ಮೇಲೂ ಪರಿಣಾಮ ಬೀರಲಿದೆ ಎಂದು ಕಮಲ್ ಹಾಸನ್ ಹೇಳಿದರು.



ಕ್ಷೇತ್ರ ಪುನರ್ ವಿಂಗಡಣೆಯಿಂದ ವ್ಯಾಪಕ ಪರಿಣಾಮಗಳು ಉಂಟಾಗಲಿವೆ ಎಂದು ಹೇಳಿದ ಅವರು, ಸರ್ವಪಕ್ಷ ಸಭೆ ಆಯೋಜಿಸಿದ್ದಕ್ಕಾಗಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರಿಗೆ ಕೃತಜ್ಞತೆ ಸಲ್ಲಿಸಿದರು. ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ತಮಿಳುನಾಡಿನ ಎಲ್ಲಾ ಪಕ್ಷಗಳು ಸಭೆಯಲ್ಲಿ ಭಾಗವಹಿಸಿದ್ದನ್ನು ಕಮಲ್ ಹಾಸನ್ ಶ್ಲಾಘಿಸಿದರು.

ಜಾಗೃತಿ ಮೂಡಿಸುವ ಈ ಸರ್ವಪಕ್ಷ ಸಭೆಯನ್ನು ಆಯೋಜಿಸಿದ್ದಕ್ಕಾಗಿ ನಾನು ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರನ್ನು ಪ್ರಾಮಾಣಿಕವಾಗಿ ಅಭಿನಂದಿಸುತ್ತೇನೆ ಎಂದು ಅವರು ಹೇಳಿದರು.

# ಸೆಬಿಯಲ್ಲಿ 700 ಕೋಟಿ ರೂಪಾಯಿಗಳ ಐಪಿಓಗಾಗಿ ಡಿಆರ್‌ಎಚ್‌ಪಿ ಸಲ್ಲಿಸಿದೆ ಎಕ್ಸೆಲ್ ಸಾಫ್ಟ್ ಟೆಕ್ನಾಲಜೀಸ್

**ದೆಹಲಿ:** ಒಂದು ಜಾಗತಿಕ ವರ್ಟಿಕಲ್ ಎಸ್‌ಎಎಸ್ ಕಂಪನಿಯಾಗಿರುವ ಎಕ್ಸೆಲ್ ಸಾಫ್ಟ್ ಟೆಕ್ನಾಲಜೀಸ್ ಲಿಮಿಟೆಡ್ ಸಂಸ್ಥೆಯು ಕಲಿಕೆ ಮತ್ತು ಮೌಲ್ಯಮಾಪನ ಮಾರುಕಟ್ಟೆಯ ಮೇಲೆ ಕೇಂದ್ರೀಕರಿಸಿದ್ದು, ಈ ಕಂಪನಿಯು ಬಂಡವಾಳ ಮಾರುಕಟ್ಟೆ ನಿಯಂತ್ರಕರಾದ ಸೆಬಿಯಲ್ಲಿ ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ 700 ಕೋಟಿ ರೂಪಾಯಿ ಸಂಗ್ರಹಿಸಲು ಡ್ರಾಫ್ಟ್ ರೆಡ್ ಹೆರಿಂಗ್ ಪ್ರಾಸ್ಪೆಕ್ಟಸ್ (ಡಿಆರ್‌ಎಚ್ಪಿ) ಅನ್ನು ಸಲ್ಲಿಸಿದೆ.



ಡಿಆರ್‌ಎಚ್ಪಿ ಪ್ರಕಾರ ಮೈಸೂರು ಮೂಲದ ಈ ಕಂಪನಿಯ ಪ್ರಸ್ತಾಪಿತ ಐಪಿಒ ಒಟ್ಟು 210 ಕೋಟಿ ರೂಪಾಯಿಗಳವರೆಗಿನ ಒಂದು ತಾಜಾ ಈಕ್ವಿಟಿ ಷೇರುಗಳ ಸಂಯೋಜನೆಯಾಗಿದೆ ಮತ್ತು ಪ್ರಮೋಟರ್ ಷೇರ್ ಹೋಲ್ಡರ್ ಗಳಾದ (ಪ್ರವರ್ತಕ ಮಾರಾಟಗಾರ ಷೇರುದಾರ) ವೆದಾಂತ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಮತ್ತು ಧನಂಜಯ ಸುಧನ್ವ ಅವರ ಒಟ್ಟು 490 ಕೋಟಿ ರೂಪಾಯಿಗಳವರೆಗಿನ ಷೇರುಗಳ ಮಾರಾಟದ ಕೊಡುಗೆ (ಓಎಫ್‌ಎಸ್- ಆಫರ್ ಫಾರ್ ಸೇಲ್) ಅನ್ನು ಒಳಗೊಂಡಿದೆ.

ಎಕ್ಸೆಲ್ ಸಾಫ್ಟ್ ಟೆಕ್ನಾಲಜೀಸ್ ತಾಜಾ ಷೇರುಗಳಿಂದ ಬರುವ ನಿವ್ವಳ ಆದಾಯವನ್ನು ಭೂಮಿ ಖರೀದಿ ಮತ್ತು ಹೊಸ ಕಟ್ಟಡ ನಿರ್ಮಾಣಕ್ಕೆ ಬೇಕಾಗುವ ಬಂಡವಾಳ ವೆಚ್ಚಕ್ಕೆ ಫಂಡಿಂಗ್ ಮಾಡಲು, ಮೈಸೂರಿನಲ್ಲಿರುವ ಅದರ ಪ್ರಸ್ತುತ ಸೌಲಭ್ಯದ ಉನ್ನತೀಕರಣ ಮತ್ತು ಬಾಹ್ಯ ವಿದ್ಯುತ್ ವ್ಯವಸ್ಥೆಗಳಿಗೆ ಫಂಡಿಂಗ್ ಮಾಡಲು, ಕಂಪನಿಯ ಐಟಿ ಮೂಲಸೌಕರ್ಯದ ಉನ್ನತೀಕರಣಕ್ಕೆ (ಸಾಫ್ಟ್ ವೇರ್, ಹಾರ್ಡ್ವೇರ್ ಮತ್ತು ಸಂವಹನ ಮತ್ತು ನೆಟ್ ವರ್ಕ್ ಸೇವೆಗಳು); ಮತ್ತು ಸಾಮಾನ್ಯ ಕಾರ್ಪೊರೇಟ್ ಉದ್ದೇಶಗಳಿಗೆ ಬಳಸಿಕೊಳ್ಳಲು ಪ್ರಸ್ತಾಪಿಸಿದೆ.

ಎರಡು ದಶಕಗಳಿಗಿಂತ ಹೆಚ್ಚು ಅನುಭವ ಹೊಂದಿರುವ ಎಕ್ಸೆಲ್ ಸಾಫ್ಟ್ ಕಂಪನಿಯು ವಿಶ್ವಾದ್ಯಂತ ಇರುವ ಉದ್ಯಮ ಗ್ರಾಹಕರೊಂದಿಗೆ ದೀರ್ಘಾವಧಿಯ ಒಪ್ಪಂದಗಳ ಮೂಲಕ ವೈವಿಧ್ಯಮಯ ಕಲಿಕೆ ಮತ್ತು ಮೌಲ್ಯಮಾಪನ ವಿಭಾಗಗಳಲ್ಲಿ ತಂತ್ರಜ್ಞಾನ ಆಧಾರಿತ ಉತ್ಪನ್ನಗಳನ್ನು ಒದಗಿಸುತ್ತದೆ. ಡಿಸೆಂಬರ್ 31, 2024 ರ ಪ್ರಕಾರ ಇದು ಯುಎಸ್‌ಎ, ಯುಕೆ, ಭಾರತ, ಸಿಂಗಾಪುರ, ಆಸ್ಟ್ರೇಲಿಯಾ, ಜಪಾನ್, ಮಲೇಷಿಯಾ, ಸೌದಿ ಅರೇಬಿಯಾ, ಯುಎಇ ಮತ್ತು ಕೆನಡಾ ಸೇರಿದಂತೆ 17 ದೇಶಗಳಲ್ಲಿ ಇರುವ 71 ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿದೆ.

# ರಾಹುಲ್ ಗಾಂಧಿಗೆ ರೂ.200 ದಂಡ ವಿಧಿಸಿದ ಕೋರ್ಟ್

**ಲಕ್ನೋ:** ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಗೆ ಲಕ್ನೋ ನ್ಯಾಯಾಲಯ 200 ರೂಪಾಯಿ ದಂಡ ವಿಧಿಸಿದೆ. ವಿನಾಯಕ್ ದಾಮೋದರ್ ಸಾವರ್ಕರ್ ಕುರಿತ ಹೇಳಿಕೆಯಿಂದಾಗಿ ಉದ್ಭವಿಸಿದ ಪ್ರಕರಣದ ವಿಚಾರಣೆಯ ಸಮಯದಲ್ಲಿ ರಾಹುಲ್ ಗಾಂಧಿ ನ್ಯಾಯಾಲಯಕ್ಕೆ ಹಾಜರಾಗದ ಕಾರಣ ಹೆಚ್ಚುವರಿ ಮುಖ್ಯ ನ್ಯಾಯಾಂಗ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಈ ಕ್ರಮ ಕೈಗೊಂಡಿದೆ. ಏಪ್ರಿಲ್ 14 ರಂದು ರಾಹುಲ್ ಗಾಂಧಿ ನ್ಯಾಯಾಲಯಕ್ಕೆ ಹಾಜರಾಗಬೇಕು ಎಂದು ಹೆಚ್ಚುವರಿ ಮುಖ್ಯ ನ್ಯಾಯಾಂಗ ಮ್ಯಾಜಿಸ್ಟ್ರೇಟ್ ಎಚ್ಚರಿಕೆ ನೀಡಿದ್ದಾರೆ.



ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಏಪ್ರಿಲ್ 14 ರಂದು ನ್ಯಾಯಾಲಯಕ್ಕೆ ಹಾಜರಾಗದಿದ್ದರೆ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ. ಅಕೋಲಾದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ರಾಹುಲ್ ಗಾಂಧಿ ವೀರ್ ಸಾವರ್ಕರ್ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿದ್ದರು. ಅವರು ಸಾವರ್ಕರ್ ಅವರನ್ನು ಬ್ರಿಟಿಷ್ ಸೇವಕ ಮತ್ತು ಪಿಂಚಣಿದಾರ ಎಂದು ಕರೆದಿದ್ದರು. ರಾಹುಲ್ ಗಾಂಧಿ ಅವರ ಈ ಹೇಳಿಕೆಯ ವಿರುದ್ಧ ಅರ್ಜಿದಾರರಾದ ನೃಪೇಂದ್ರ ಪಾಂಡೆ ಅಲಹಾಬಾದ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪರವಾಗಿ ವಕೀಲ ಪ್ರಾಂಶು ಅಗರ್ವಾಲ್ ನ್ಯಾಯಾಲಯಕ್ಕೆ ಹಾಜರಾಗಿದ್ದರು. ಅವರು ನ್ಯಾಯಾಲಯಕ್ಕೆ ಹಾಜರಾಗುವುದರಿಂದ ವಿನಾಯಿತಿ ಕೋರಿ ಅರ್ಜಿ ಸಲ್ಲಿಸಿದರು. ಲಕ್ನೋದ ಎಸಿಜೆಎಂ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ.

ಪದೇ ಪದೇ ಸಮನ್ಸ್ ನೀಡಿದ್ದರೂ ರಾಹುಲ್ ಗಾಂಧಿ ಹಾಜರಾಗಿಲ್ಲ ಎಂದು ವಕೀಲ ನೃಪೇಂದ್ರ ಪಾಂಡೆ ನ್ಯಾಯಾಲಯಕ್ಕೆ ತಿಳಿಸಿದರು. ನ್ಯಾಯಾಲಯವು ಅವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳೋ ಸಾಧ್ಯತೆ ಇದೆ.

ಸಂಜೆ ಮುಗಿಲು

Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

# ಅರಣ್ಯ ಭೂಮಿಯಲ್ಲಿ ಶೂಟಿಂಗ್ ನಡೆಸಿತ್ತಾ ತರುಣ್ ಸುಧೀರ್ ಚಿತ್ರತಂಡ?

## ಅರಣ್ಯಾಧಿಕಾರಿ ಹೇಳೋದೇನು?

ಅರಣ್ಯ ಭೂಮಿಯಲ್ಲಿ ಅನುಮತಿ ಇಲ್ಲದೇ ತರುಣ್ ಸುಧೀರ್ ತಂಡ ಚಿತ್ರೀಕರಣ ನಡೆಸಿದ್ದಾರೆ ಎನ್ನಲಾದ ವಿಚಾರಕ್ಕೆ ತುಮಕೂರಿನ ಅರಣ್ಯಾಧಿಕಾರಿ ಅನುಪಮಾ ಸ್ಪಷ್ಟನೆ ನೀಡಿದ್ದಾರೆ. ಚಿತ್ರತಂಡದ ಮೇಲೆ ಎಫ್ ಐಆರ್ ದಾಖಲಿಸಲು ಸೂಚನೆ ನೀಡಿರೋದಾಗಿ ಅವರು ಹೇಳಿದ್ದಾರೆ. ತುಮಕೂರಿನ ನಾಮದ ಚಿಲುಮೆಯಲ್ಲಿ ಅನುಮತಿ ಸಿಗದೇ ಇದ್ದರೂ ತರುಣ್ ಸುಧೀರ್ ತಂಡ ಚಿತ್ರೀಕರಣ ನಡೆಸಿದೆ ಎಂಬ ವಿಚಾರಕ್ಕೆ ಡಿಎಫ್ಓ ಅನುಪಮಾ ಮಾತನಾಡಿ, ನಿನ್ನೆ ರಾತ್ರಿ 10 ಗಂಟೆ ಸುಮಾರಿಗೆ ನಮಗೆ ಮಾಹಿತಿ ಬಂತು. ನಾಮದ ಚಿಲುಮೆ ಮುಖ್ಯದ್ವಾರ ಬಳಿ ಲೈಟ್ ಗಳನ್ನು ಹಾಕಿಕೊಂಡು ಸುಮಾರು ಜನರು ಇದ್ದಾರೆ ಕಂಪ್ಲೇಟ್ ಬಂದಿತ್ತು. ಕೂಡಲೇ ಸ್ಥಳಕ್ಕೆ ನಮ್ಮ ಸಿಬ್ಬಂದಿ ಕೂಡ ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ. ಆಗ ಸಿನಿಮಾ ಶೂಟಿಂಗ್ ತಂಡ 8 ಗಂಟೆ ಸುಮಾರಿಗೆ ಸ್ಥಳಕ್ಕೆ ಬಂದಿದ್ದಾರೆ. ಊಟಕ್ಕೆ ಅಲ್ಲಿ ನಿಲ್ಲಿಸಿದ್ದಾರೆಂದು ತಿಳಿದು ಬಂದಿದೆ. ಅಲ್ಲಿ ಶೂಟಿಂಗ್ ನಡೆಯುತ್ತಿರಲಿಲ್ಲ. ಆದರೆ ತಂಡ ಊಟ ಮಾಡುತ್ತಿದ್ದರು ಎಂದು ನಮ್ಮ ಗಮನಕ್ಕೆ ಬಂದಿದೆ. ಈ ಬಗ್ಗೆ ಎಫ್ಐಆರ್ ದಾಖಲಿಸಲು ಸೂಚನೆ ನೀಡಿದ್ದೇನೆ. ಚಿತ್ರತಂಡಕ್ಕೂ ನಾವು ತಿಳುವಳಿಕೆಯನ್ನು ಹೇಳಿದ್ದೇವೆ. ತರುಣ್ ಸುದೀರ್ ಪ್ರೊಡಕ್ಷನ್ ಅಂತಾ ತಿಳಿದು ಬಂದಿದೆ. ಅನಧಿಕೃತ ಪ್ರವೇಶ ಅಡಿ ದೂರು ದಾಖಲಿಸಲು ಸೂಚನೆ ನೀಡಲಾಗಿದೆ ಎಂದಿದ್ದಾರೆ. ಇನ್ನೂ ಚಿತ್ರತಂಡ ಮೊದಲೇ ಅನುಮತಿಗೆ ಅರ್ಜಿ ಕಳಿಸಿದ್ದರು. ಅದಕ್ಕೆ ಹಣ ಕೂಡ ಪಾವತಿಸಿದ್ದರು. ಆದರೆ ಕೇಂದ್ರ ಅರಣ್ಯ ಕಚೇರಿ ವತಿಯಿಂದ ಇನ್ನೂ ಅನುಮತಿ ಸಿಕ್ಕಿರಲಿಲ್ಲ. ಹೀಗಾಗಿ ಶೂಟಿಂಗ್‌ಗೆ ಅನುಮತಿ ಇರಲಿಲ್ಲ. ಆದರೆ ಹೊರಗೆ ಶೂಟಿಂಗ್ ಮಾಡಿ, ಊಟಕ್ಕೆ ನಿಲ್ಲಿಸಿರುವುದಾಗಿ ಹೇಳಿದ್ದಾರೆ. ಎಫ್ಐಆರ್ ಮಾಡುತ್ತೇವೆ. ಟಿಟಿ ವಾಹನ ಅಡುಗೆ ಸಾಮಗ್ರಿಗಳು, ಚೇರ್‌ಗಳು ವಶಕ್ಕೆ ಪಡೆಯಲಾಗಿದೆ ಎಂದಿದ್ದಾರೆ.





# ಚೈತ್ರಾ ವಾಸುದೇವನ್ ವಿವಾಹವಾದ ಜಾಗದಲ್ಲೇ ಮಾಜಿ ಪತಿಯ ಮದುವೆ



'ಬಿಗ್ ಬಾಸ್' ಖ್ಯಾತಿಯ ಚೈತ್ರಾ ವಾಸುದೇವನ್ ಮಾಜಿ ಪತಿ ಸತ್ಯ ನಾಯ್ಡು ಅವರು ಅದ್ದೂರಿಯಾಗಿ 2ನೇ ಮದುವೆಯಾಗಿದ್ದಾರೆ. ಸತ್ಯ ನಾಯ್ಡು ಅವರ ಮದುವೆಯ ಫೋಟೋಗಳು ಸೋಶಿಯಲ್ ಮೀಡಿಯಾದಲ್ಲಿ ಸದ್ದು ಮಾಡುತ್ತಿದೆ. ಬೆಂಗಳೂರಿನ ಅರಮನೆ ಮೈದಾನದ ಚಾಮರ ವಜ್ರದಲ್ಲಿ ಮಾರ್ಚ್ 3ರಂದು ವಸುಂಧರಾ ರೆಡ್ಡಿ ಅವರನ್ನು ಸತ್ಯ ನಾಯ್ಡು ಮದುವೆಯಾಗಿದ್ದಾರೆ. ಅಚ್ಚರಿ ಅಂದ್ರೆ, ಉದ್ಯಮಿ ಜಗದೀಪ್ ಜೊತೆ ಚೈತ್ರಾ ವಾಸುದೇವನ್ ಮದುವೆಯಾದ ಮರುದಿನವೇ ಅದೇ ಜಾಗ 'ಚಾಮರ ವಜ್ರ'ದಲ್ಲಿ ಸತ್ಯ ಕೂಡ ಮದುವೆಯಾಗಿದ್ದಾರೆ. ಇನ್ನೂ ಸತ್ಯ ನಾಯ್ಡು ಮದುವೆಗೆ ಮೊಹಮ್ಮದ್ ಹ್ಯಾರಿಸ್ ನಲಪಾಡ್ ಭಾಗಿಯಾಗಿ ಶುಭಕೋರಿದ್ದಾರೆ. ಅನೇಕ ರಾಜಕೀಯ ಮುಖಂಡರು ಭಾಗಿಯಾಗಿ ನವಜೋಡಿಗೆ ಶುಭಹಾರೈಸಿದ್ದಾರೆ. ಅಂದಹಾಗೆ, 2017ರಲ್ಲಿ ಚೈತ್ರಾ ವಾಸುದೇವನ್ ಸತ್ಯ ನಾಯ್ಡು ಮದುವೆಯಾಗಿದ್ದರು. ಕಾರಣಾಂತರಗಳಿಂದ 2023ರಲ್ಲಿ ಪರಸ್ಪರ ಒಪ್ಪಿಗೆಯ ಮೇರೆಗೆ ಇಬ್ಬರೂ ವಿಚ್ಛೇದನ ಪಡೆದರು. ಉದ್ಯಮಿ ಜಗದೀಪ್ ಅವರನ್ನ ಪ್ರೀತಿಸಿದ ಚೈತ್ರಾ ವಾಸುದೇವನ್ ಮಾರ್ಚ್ 2 ರಂದು ಎರಡನೇ ವಿವಾಹವಾದರು. ಮಾಜಿ ಪತಿ ಸತ್ಯ ನಾಯ್ಡು ಸಹ ಹೊಸ ಜೀವನ ಆರಂಭಿಸಿದ್ದಾರೆ.

# ಮಾಣಿಕ್ಯ ನಟಿಯ ಬರ್ತ್‌ಡೇ ಸಂಭ್ರಮದಲ್ಲಿ ಸುದೀಪ್ ಪತ್ನಿ, ಮಗಳು ಭಾಗಿ

'ಮಾಣಿಕ್ಯ' ನಟಿ ವರಲಕ್ಷ್ಮಿ ಶರತ್‌ಕುಮಾರ್‌ಗೆ ಇಂದು ಹುಟ್ಟುಹಬ್ಬದ ಸಂಭ್ರಮ. ಅವರ ಬರ್ತ್‌ಡೇ ಪಾರ್ಟಿಯಲ್ಲಿ ಸುದೀಪ್ ಪತ್ನಿ ಪ್ರಿಯಾ ಹಾಗೂ ಮಗಳು ಸಾನ್ವಿ ಭಾಗಿಯಾಗಿದ್ದಾರೆ. ವರಲಕ್ಷ್ಮಿ ಅವರು 40ನೇ ವಸಂತಕ್ಕೆ ಕಾಲಿಟ್ಟಿದ್ದಾರೆ. ಈ ಹಿನ್ನೆಲೆ ಹೋಟೆಲ್‌ವೊಂದರಲ್ಲಿ ಅದ್ಧೂರಿಯಾಗಿ ಬರ್ತ್‌ಡೇ ನಡೆದಿದ್ದು, ಕೇಕ್ ಕತ್ತರಿಸಿ ನಟಿ ಸಂಭ್ರಮಿಸಿದ್ದಾರೆ. ಈ ಬರ್ತ್‌ಡೇ ಸಂಭ್ರಮದಲ್ಲಿ ಸುದೀಪ್ ಪತ್ನಿ ಪ್ರಿಯಾ ಹಾಗೂ ಮಗಳು ಭಾಗಿಯಾಗಿ ನಟಿಗೆ ಶುಭಕೋರಿದ್ದಾರೆ. ಅಂದಹಾಗೆ, ಮಾಣಿಕ್ಯ, ಮ್ಯಾಕ್ಸ್ ಸಿನಿಮಾದಲ್ಲಿ ಸುದೀಪ್ ಜೊತೆ ನಟಿಸಿರೋ ವರಲಕ್ಷ್ಮಿಗೆ ನಟನ ಕುಟುಂಬದ ಜೊತೆ ಉತ್ತಮ ಒಡನಾಟವಿದೆ. ಕಳೆದ ವರ್ಷ ಹಸೆಮಣೆ ಏರಿದ ವರಲಕ್ಷ್ಮಿ ಮದುವೆಗೆ ಸುದೀಪ್ ಹಾಗೂ ಪತ್ನಿ ಹಾಜರಿ ಹಾಕಿದ್ದರು.





# 'ಲೇಡಿ ಸೂಪರ್‌ಸ್ಟಾರ್' ಎಂದು ಕರೆಯಬೇಡಿ

# ಅಭಿಮಾನಿಗಳಿಗೆ ನಯನತಾರಾ ಮನವಿ

ಬಿರುದುಗಳು ಮತ್ತು ಪುರಸ್ಕಾರಗಳು ಬೆಲೆಕಟ್ಟಲು ಸಾಧ್ಯವಾಗದಂತವುಗಳು. ಆದರೆ, ಅವು ಕೆಲವೊಮ್ಮೆ ನಟರನ್ನು ತಮ್ಮ ಕಲೆಯಿಂದ ದೂರವಿಡುವಂತೆಯೂ ಮಾಡುತ್ತವೆ ಎಂದಿರುವ ನಟಿ ನಯನತಾರಾ, ತನಗೆ ನೀಡಲಾಗಿರುವ 'ಲೇಡಿ ಸೂಪರ್‌ಸ್ಟಾರ್' ಎಂಬ ಬಿರುದನ್ನು ತ್ಯಜಿಸುವ ನಿರ್ಧಾರವನ್ನು ಪ್ರಕಟಿಸಿದ್ದಾರೆ. 'ಶ್ರೀರಾಮ ರಾಜ್ಯ', 'ಅನಾಮಿಕ', 'ಚಂದ್ರಮುಖಿ', 'ಗಜಿನಿ' ಮತ್ತು 'ಜವಾನ್' ಚಿತ್ರಗಳಿಗೆ ಹೆಸರುವಾಸಿಯಾಗಿರುವ ನಯನತಾರಾ ಮಂಗಳವಾರ ಅಭಿಮಾನಿಗಳು, ಮಾಧ್ಯಮಗಳು ಮತ್ತು ಸಿನಿಮಾ ಸಹೋದ್ಯೋಗಿಗಳನ್ನು ಉದ್ದೇಶಿಸಿ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ.

'ನಿಮ್ಮಲ್ಲಿ ಅನೇಕರು ನನ್ನನ್ನು 'ಲೇಡಿ ಸೂಪರ್‌ಸ್ಟಾರ್' ಎಂದು ಪ್ರೀತಿಯಿಂದ ಕರೆಯುತ್ತಿದ್ದೀರಿ. ಇದು ನಿಮ್ಮ ಅಪಾರ ಪ್ರೀತಿಯಿಂದ ಹುಟ್ಟಿದ ಬಿರುದಾಗಿದೆ. ಅಂತಹ ಅಮೂಲ್ಯವಾದ ಬಿರುದನ್ನು ನನಗೆ ಕೊಟ್ಟಿದ್ದಕ್ಕಾಗಿ ನಾನು ನಿಮಗೆ ತುಂಬಾ ಋಣಿಯಾಗಿದ್ದೇನೆ. ಆದರೂ, ಲೇಡಿ ಸೂಪರ್‌ಸ್ಟಾರ್ ಎಂದು ಕರೆಯುವ ಬದಲು ನನ್ನನ್ನು 'ನಯನತಾರಾ' ಎಂದು ಕರೆಯಲು ನಾನು ವಿನಮ್ರವಾಗಿ ವಿನಂತಿಸುತ್ತೇನೆ' ಎಂದಿದ್ದಾರೆ. 'ಈ ಹೆಸರು ನನ್ನ ಹೃದಯಕ್ಕೆ ಹತ್ತಿರವಾಗಿದೆ ಎಂದು ನಾನು ಭಾವಿಸುತ್ತೇನೆ. ಇದು ಓರ್ವ ನಟಿಯಾಗಿ ಮಾತ್ರವಲ್ಲದೆ ಓರ್ವ ವ್ಯಕ್ತಿಯಾಗಿಯೂ ನಾನು ಯಾರೆಂಬುದನ್ನು ಪ್ರತಿನಿಧಿಸುತ್ತದೆ. ಬಿರುದುಗಳು ಮತ್ತು ಪುರಸ್ಕಾರಗಳು ಅಮೂಲ್ಯವಾದವುಗಳು. ಆದರೆ, ಅವು ಕೆಲವೊಮ್ಮೆ ನಮ್ಮ ಕೆಲಸ, ನಮ್ಮ ಕಲೆ ಮತ್ತು ನಾವು ನಿಮ್ಮೊಂದಿಗೆ ಹಂಚಿಕೊಳ್ಳುವ ಬೇಷರತ್ತಾದ ಬಂಧದಿಂದ ನಮ್ಮನ್ನು ಪ್ರತ್ಯೇಕಿಸುವ ಇಮೇಜ್ ಅನ್ನು ಸೃಷ್ಟಿಸಬಹುದು' ಎಂದು ಅವರು ಬರೆದಿದ್ದಾರೆ. ಇತ್ತೀಚೆಗಷ್ಟೇ ಕಮಲ್ ಹಾಸನ್, ಅಜಿತ್ ಮತ್ತು ಜಯಂ ರವಿ ಅವರು ಅಭಿಮಾನಿಗಳು ತಮಗೆ ನೀಡಿದ್ದ ಬಿರುದುಗಳನ್ನು ಬಿಟ್ಟಿದ್ದರು. ಇದೀಗ ನಟಿ ನಯನತಾರಾ ಕೂಡ ಆ ಸಾಲಿಗೆ ಸೇರಿದ್ದಾರೆ. ನಟಿಯ ನಿಜವಾದ ಹೆಸರು ಡಯಾನಾ ಮರಿಯಮ್ ಕುರಿಯನ್ ಮತ್ತು ಅವರ ಮೊದಲ ಚಿತ್ರ 'ಮನಸ್ಸಿನಕ್ಕರೆ' (2003). ನಿರ್ದೇಶಕ ಸತ್ಯನ್ ಅಂತಿಕಾಡ್ ಅವರು ನಟಿಗೆ 'ನಯನತಾರಾ' ಎಂಬ ತೆರೆಮೇಲಿನ ಹೆಸರನ್ನು ನೀಡಿದರು. 40 ವರ್ಷದ ನಯನತಾರಾ, ''ಪ್ರೀತಿಯ ಭಾಷೆ' ಎಲ್ಲ ಮಿತಿಗಳನ್ನು ಮೀರಿ ಜನರನ್ನು ಸಂಪರ್ಕಿಸುತ್ತದೆ. ನಮ್ಮೆಲ್ಲರಿಗೂ ಭವಿಷ್ಯವು ಅನಿರೀಕ್ಷಿತವಾಗಿದ್ದರೂ, ನಿಮ್ಮ ಬೆಂಬಲ ನಿರಂತರವಾಗಿರುತ್ತದೆ ಎಂದು ನನಗೆ ತುಂಬಾ ಸಂತೋಷವಾಗಿದೆ. ಹಾಗೆಯೇ ನಿಮ್ಮನ್ನು ರಂಜಿಸಲು ನನ್ನ ಶ್ರಮವೂ ಇರುತ್ತದೆ. ಸಿನಿಮಾ ನಮ್ಮನ್ನು ಒಗ್ಗೂಡಿಸುತ್ತದೆ ಮತ್ತು ಅದನ್ನು ಒಟ್ಟಿಗೆ ಆಚರಿಸೋಣ. ಪ್ರೀತಿ, ಗೌರವ ಮತ್ತು ಕೃತಜ್ಞತೆಯಿಂದ, ನಯನತಾರಾ,' ಎಂದು ಬರೆದಿದ್ದಾರೆ. 'ನಯನತಾರಾ ಯಾವಾಗಲೂ ಮತ್ತು ನಯನತಾರಾ' ಎಂದು ಶೀರ್ಷಿಕೆ ನೀಡಿದ್ದಾರೆ.



## ನಟಿಯ ನಿಜವಾದ ಹೆಸರು ಡಯಾನಾ ಮರಿಯಮ್ ಕುರಿಯನ್

# ಸೆಮಿಫೈನಲ್‌ನಲ್ಲಿ ಭಾರತದ ವಿರುದ್ಧ ಸೋತ ಬೆನ್ನಲ್ಲೇ ಏಕದಿನ ಕ್ರಿಕೆಟ್‌ಗೆ ಸ್ಟೀವ್ ಸ್ಮಿತ್ ನಿವೃತ್ತಿ

**ಮುಂಬೈ:** ಚಾಂಪಿಯನ್ಸ್ ಟ್ರೋಫಿ ಸೆಮಿಫೈನಲ್ ಪಂದ್ಯದಲ್ಲಿ ಭಾರತದ ವಿರುದ್ಧ ಆಸ್ಟ್ರೇಲಿಯಾ ಸೋತ ಬೆನ್ನಲ್ಲೇ ಅಂತಾರಾಷ್ಟ್ರೀಯ ಏಕದಿನ ಕ್ರಿಕೆಟ್‌ಗೆ ಆಸೀಸ್ ಸ್ಟಾರ್ ಬ್ಯಾಟರ್ ಸ್ಟೀವ್ ಸ್ಮಿತ್ ನಿವೃತ್ತಿ ಘೋಷಿಸಿದ್ದಾರೆ.

ಆಸ್ಟ್ರೇಲಿಯಾದ ಸ್ಟಾರ್ ಬ್ಯಾಟ್ಸ್‌ಮನ್ ಸ್ಟೀವ್ ಸ್ಮಿತ್ ಏಕದಿನ ಅಂತಾರಾಷ್ಟ್ರೀಯ ಪಂದ್ಯಗಳಿಗೆ ವಿದಾಯ ಹೇಳಿದ್ದಾರೆ. ದುಬೈನಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿ ಸೆಮಿಫೈನಲ್‌ನಲ್ಲಿ ಭಾರತ ವಿರುದ್ಧದ ಪಂದ್ಯದಲ್ಲಿ ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್ ತಮ್ಮ ಕೊನೆಯ ಏಕದಿನ ಪಂದ್ಯವನ್ನು ಆಡಿದರು. ಆಸ್ಟ್ರೇಲಿಯಾ ಪರ 73 ರನ್ ಗಳಿಸಿ ಸೋಲಿನ ಹಾದಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದರು.

35 ವಯಸ್ಸಿನ ಸ್ಮಿತ್ 170 ಏಕದಿನ ಪಂದ್ಯಗಳಲ್ಲಿ ಆಡಿದ್ದು, 43.28 ಸರಾಸರಿಯಲ್ಲಿ 5800 ರನ್ ಗಳಿಸಿದ್ದಾರೆ. 12 ಶತಕಗಳು ಮತ್ತು 35 ಅರ್ಧಶತಕಗಳನ್ನು ಬಾರಿಸಿದ್ದಾರೆ. ಆಸ್ಟ್ರೇಲಿಯಾ ಪರ ಏಕದಿನ ಪಂದ್ಯಗಳಲ್ಲಿ 12 ನೇ ಅತಿ ಹೆಚ್ಚು ರನ್ ಗಳಿಸಿದ ಆಟಗಾರರಾಗಿ ಹೊರಹೊಮ್ಮಿದ್ದಾರೆ. 2016 ರಲ್ಲಿ ನ್ಯೂಜಿಲೆಂಡ್ ವಿರುದ್ಧ 164 ರನ್ ಗಳಿಸಿದ್ದು ಅವರ ಅತ್ಯಧಿಕ ಸ್ಕೋರ್. ಲೆಗ್ ಸ್ಪಿನ್ನಿಂಗ್ ಆಲ್ ರೌಂಡರ್ ಆಗಿ ಪಾದಾರ್ಪಣೆ ಮಾಡಿದ ಅವರು 28 ವಿಕೆಟ್‌ಗಳನ್ನು ಪಡೆದಿದ್ದಾರೆ. 90 ಕ್ಯಾಚ್‌ಗಳನ್ನು ಹಿಡಿದಿದ್ದಾರೆ.





ಕ್ರಿಕೆಟ್ ಆಸ್ಟ್ರೇಲಿಯಾ ಮಾಧ್ಯಮ ಪ್ರಕಟಣೆಯ ಪ್ರಕಾರ, ಸೆಮಿಫೈನಲ್ ಸೋಲಿನ ನಂತರ ಸ್ಮಿತ್ ತಮ್ಮ ತಂಡದ ಆಟಗಾರರಿಗೆ 'ಏಕದಿನ ಪಂದ್ಯಗಳಿಂದ ನಿವೃತ್ತರಾಗುವುದಾಗಿ' ಹೇಳಿದ್ದರು. ಸ್ಮಿತ್ ಟೆಸ್ಟ್ ಕ್ರಿಕೆಟ್ ಮತ್ತು ಟಿ20 ಅಂತಾರಾಷ್ಟ್ರೀಯ ಪಂದ್ಯಗಳಿಗೆ ಲಭ್ಯವಿರಲಿದ್ದಾರೆ.

ಸ್ಮಿತ್ 2015 ಮತ್ತು 2023 ರಲ್ಲಿ ಆಸ್ಟ್ರೇಲಿಯಾದ ಏಕದಿನ ವಿಶ್ವಕಪ್ ವಿಜೇತ ತಂಡದ ಭಾಗವಾಗಿದ್ದರು. ಮೈಕೆಲ್ ಕ್ಲಾರ್ಕ್ ನಿವೃತ್ತರಾದ ನಂತರ ಸ್ಮಿತ್ 50 ಓವರ್‌ಗಳ ತಂಡದ ನಾಯಕತ್ವ ವಹಿಸಿಕೊಂಡರು. ಅವರು 64 ಪಂದ್ಯಗಳಲ್ಲಿ ಆಸ್ಟ್ರೇಲಿಯಾವನ್ನು ಮುನ್ನಡೆಸಿ, ಆ ಪೈಕಿ 32 ಪಂದ್ಯಗಳಲ್ಲಿ ಗೆದ್ದರು ಮತ್ತು 28 ಪಂದ್ಯಗಳಲ್ಲಿ ಸೋತರು. ನಾಲ್ಕು ಪಂದ್ಯಗಳಲ್ಲಿ ಯಾವುದೇ ಫಲಿತಾಂಶವಿಲ್ಲ. ಗಾಯಗೊಂಡಿದ್ದ ಪ್ಯಾಟ್ ಕಮ್ಮಿನ್ಸ್ ಬದಲಿಗೆ ಚಾಂಪಿಯನ್ಸ್ ಟ್ರೋಫಿಗೆ ಅವರು ಮಧ್ಯಂತರ ಆಧಾರದ ಮೇಲೆ ನಾಯಕತ್ವ ವಹಿಸಿಕೊಂಡಿದ್ದರು.

## ಆಫ್ರಿಕಾ ವಿರುದ್ಧ 50 ರನ್‌ಗಳ ಭರ್ಜರಿ ಜಯ

# ಭಾನುವಾರ ನ್ಯೂಜಿಲೆಂಡ್-ಭಾರತ ಫೈನಲ್

**ಲಾಹೋರ್** : ರಚಿನ್ ರವೀಂದ್ರ ಮತ್ತು ಕೇನ್ ವಿಲಿಯಮ್ಸನ್ ಅವರ ಶತಕದಿಂದ ನೆರವಿನಿಂದ ದಕ್ಷಿಣ ಆಫ್ರಿಕಾ ವಿರುದ್ಧ ನ್ಯೂಜಿಲೆಂಡ್ 50 ರನ್‌ಗಳಿಂದ ಜಯಗಳಿಸಿ ಚಾಂಪಿಯನ್ಸ್ ಟ್ರೋಫಿ ಫೈನಲ್ ಪ್ರವೇಶಿಸಿದೆ.

ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ನ್ಯೂಜಿಲೆಂಡ್ 50 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 362 ರನ್ ಹೊಡೆಯಿತು. ಕಠಿಣ ಗುರಿಯನ್ನು ಪಡೆದ ದಕ್ಷಿಣ ಆಫ್ರಿಕಾ 50 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 312 ರನ್‌ಗಳಿಸಿ ಸೋಲನ್ನು ಒಪ್ಪಿಕೊಂಡಿತು.

ಆಫ್ರಿಕಾ ಪರ ಡೇವಿಡ್ ಮಿಲ್ಲರ್ ಕೊನೆಯವರೆಗೂ ಇದ್ದು ಹೋರಾಡಿದ್ದರಿಂದ ತಂಡ 300 ರನ್‌ಗಳ ಗಡಿಯನ್ನು ದಾಟಿತ್ತು. ಮಿಲ್ಲರ್ ಅಜೇಯ 100 ರನ್ (67 ಎಸೆತ, 10 ಬೌಂಡರಿ, 4 ಸಿಕ್ಸ್) ಸಿಡಿಸಿದರು. ಇಂದಿನ ಪಂದ್ಯ ಗೆದ್ದಿರುವ ನ್ಯೂಜಿಲೆಂಡ್ ಭಾನುವಾರ ದುಬೈನಲ್ಲಿ ನಡೆಯಲಿರುವ ಫೈನಲ್‌ನಲ್ಲಿ ಭಾರತ ತಂಡವನ್ನು ಎದುರಿಸಲಿದೆ.

ದಕ್ಷಿಣ ಆಫ್ರಿಕಾ 1 ವಿಕೆಟ್ ನಷ್ಟಕ್ಕೆ 125 ರನ್ ಗಳಿಸಿ ಉತ್ತಮ ಸ್ಥಿತಿಯಲ್ಲಿತ್ತು. ನಂತರ ವಿಕೆಟ್ ಕಳೆದುಕೊಳ್ಳುತ್ತಾ ಸಾಗಿತ್ತು. ನಾಯಕ ಟೆಂಬಾ ಬವುಮಾ 56 ರನ್(71 ಎಸೆತ, 4 ಬೌಂಡರಿ, 1 ಸಿಕ್ಸರ್), ರಾಸ್ಸೀ ವ್ಯಾನ್ ಡೆರ್ ಡಸ್ಸೆನ್ 69 ರನ್ (66 ಎಸೆತ, 4 ಬೌಂಡರಿ, 2 ಸಿಕ್ಸರ್) ಸಿಡಿಸಿ ಸ್ವಲ್ಪ ಪ್ರತಿರೋಧ ತೋರಿದರು. ಮಿಚೆಲ್ ಸ್ಯಾಂಟ್ನರ್ 3 ವಿಕೆಟ್ ಪಡೆದರೆ, ಗ್ಲೇನ್ಸ್ ಫಿಲಿಪ್ಸ್ ಮತ್ತು ಮ್ಯಾಟ್ ಹೆನ್ರಿ ತಲಾ ಎರಡು ವಿಕೆಟ್ ಪಡೆದರು.



ಮೊದಲು ಬ್ಯಾಟ್ ಮಾಡಿದ ರಚಿನ್ ರವೀಂದ್ರ 108 ರನ್(101 ಎಸೆತ, 13 ಬೌಂಡರಿ, 1 ಸಿಕ್ಸ್) ಕೇನ್ ವಿಲಿಯಮ್ಸನ್ 102 ರನ್(94 ಎಸೆತ, 10 ಬೌಂಡರಿ, 2 ಸಿಕ್ಸ್), ಗ್ಲೇನ್ ಫಿಲಿಪ್ಸ್ 49 ರನ್(27 ಎಸೆತ, 6 ಬೌಂಡರಿ, 1 ಬೌಂಡರಿ) ಹೊಡೆದು ಔಟಾದರು. ಎರಡನೇ ವಿಕೆಟಿಗೆ ರಚಿನ್ ಮತ್ತು ವಿಲಿಯಮ್ಸನ್ 154 ಎಸೆತಗಳಲ್ಲಿ 164 ರನ್ ಜೊತೆಯಾಟವಾಡಿದರು.

## ನಮ್ಮ ಮೆಟ್ರೋ ದರ ಏರಿಕೆ ನಂತರ

# ಬೆಂಗಳೂರಿನಲ್ಲಿ ವಾಯು ಮಾಲಿನ್ಯ ಹೆಚ್ಚಳ

**ಬೆಂಗಳೂರು:** ನಮ್ಮ ಮೆಟ್ರೋ ದರ ಏರಿಕೆಯಾದ ನಂತರ ಬೆಂಗಳೂರಿನಲ್ಲಿ ವಾಯು ಮಾಲಿನ್ಯ ಹೆಚ್ಚಾಗಿದೆ ಎಂದು ರಾಷ್ಟ್ರೀಯ ವಾಯು ಗುಣಮಟ್ಟ ಮೇಲ್ವಿಚಾರಣಾ ಕೇಂದ್ರದ ದತ್ತಾಂಶದಿಂದ ತಿಳಿದುಬಂದಿದೆ. ಭಾರತೀಯ ವಿಜ್ಞಾನ ಸಂಸ್ಥೆ ನಡೆಸಿದ ಸಂಶೋಧನೆಯ ಪ್ರಕಾರ, ಪ್ರಯಾಣದ ದರ ಏರಿಕೆ ಬಳಿಕ ಸಾಕಷ್ಟು ಜನರು ನಮ್ಮ ಮೆಟ್ರೋ ಬಿಟ್ಟು ಸ್ವಂತ ವಾಹನಗಳಲ್ಲಿ ಓಡಾಡಲು ಆರಂಭಿಸಿದ್ದಾರೆ ಎಂದು ತಿಳಿದುಬಂದಿದೆ.

ಬೆಂಗಳೂರು ಮೆಟ್ರೋ ರೈಲು ನಿಗಮ ಲಿಮಿಟೆಡ್ ಫೆಬ್ರವರಿ 9 ರಂದು ನಮ್ಮ ಮೆಟ್ರೋ ಪ್ರಯಾಣದ ದರವನ್ನು ಏರಿಕೆ ಮಾಡಿತ್ತು. ದರ ಏರಿಕೆ ಬಳಿಕ ಮೆಟ್ರೋದಲ್ಲಿ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆಯಲ್ಲಿನ ಇಳಿಕೆಯಾಗಿದೆ. ''ನಮ್ಮ ಸರಾಸರಿ ದೈನಂದಿನ ಪ್ರಯಾಣಿಕರ ಸಂಖ್ಯೆಯಲ್ಲಿ ಸುಮಾರು ಶೇ. 10.5 ರಷ್ಟು ಇಳಿಕೆಯಾಗಿದೆ ಎಂದು ಎಂದು ಬಿಎಂಆರ್‌ಸಿಎಲ್ ಹೇಳಿದೆ.

ಮೆಟ್ರೋ ಟಿಕೆಟ್ ದರಕ್ಕಿಂತ ಪೆಟ್ರೋಲ್ ಅಗ್ಗ: ಮೆಟ್ರೋ ಪ್ರಯಾಣದ ದರ ವಿಚಾರವಾಗಿ ಓರ್ವ ಪ್ರಯಾಣಿಕ ಮಾತನಾಡಿ, ''ಯೆಲಚೇನಹಳ್ಳಿಯಿಂದ ಎಂಜಿ ರಸ್ತೆಗೆ ನನ್ನ ಪ್ರಯಾಣದ ವೆಚ್ಚ ದ್ವಿಗುಣವಾಗಿದ್ದು, 66 ರೂ.ಗೆ ತಲುಪಿದೆ. ವಾಪಸ್ ಬರುವಾಗಲೂ 66 ರೂ. ತಗಲುತ್ತದೆ. ಜೊತೆಗೆ, ಪಾರ್ಕಿಂಗ್ ಶುಲ್ಕ 30 ರೂ. ಪಾವತಿಸಬೇಕು. ಇದು ತುಂಬಾ ದುಬಾರಿಯಾಗಿದೆ. ಹೀಗಾಗಿ, ನಾನು ನನ್ನ ಬುಲೆಟ್ ಮೊಬೈಕ್ ಮೇಲೆ ಸಂಚರಿಸುತ್ತಿದ್ದೇನೆ. ಒಂದು ಲೀಟರ್ ಪೆಟ್ರೋಲ್ ಬೆಲೆ ಇದಕ್ಕಿಂತ ಅಗ್ಗವಾಗುತ್ತದೆ'' ಎಂದು ಹೇಳಿದರು.



ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಕಾರ, ಸಾರಿಗೆ ವಲಯದಿಂದ ಶೇಕಡಾ 40 ರಿಂದ 51 ರಷ್ಟು ವಾಯು ಮಾಲಿನ್ಯವಾಗುತ್ತಿದ್ದು, ಧೂಳಿನಿಂದ ಶೇ.17 ರಿಂದ 51 ರಷ್ಟು ವಾಯು ಮಾಲಿನ್ಯವಾಗುತ್ತಿದೆ. ದರ ಏರಿಕೆ ನಂತರ ಫೆಬ್ರವರಿ 10ರಿಂದ ಮಾಲೀನ್ಯ ಹೆಚ್ಚಾಗಿದೆ. ಈ ಮೂಲಕ ಜನರು ಮೆಟ್ರೋ ಬಿಟ್ಟು ಸ್ವಂತ ವಾಹನದಲ್ಲಿ ಓಡಾಡುವವರ ಸಂಖ್ಯೆ ಅಧಿಕವಾಗಿದೆ. ಸರಾಸರಿ ವಾಯು ಗುಣಮಟ್ಟ ಸೂಚ್ಯಂಕದಲ್ಲೂ ಮಾಲೀನ್ಯ ಏರಿಕೆ ಕಂಡಿದೆ.

ಉದಾಹರಣೆಗೆ, ಜಯನಗರ 5 ನೇ ಬ್ಲಾಕ್‌ನಲ್ಲಿರುವ ಮೇಲ್ವಿಚಾರಣಾ ಕೇಂದ್ರವು ದರ ಏರಿಕೆಗೆ ಮುನ್ನ, ಬೆಳಿಗ್ಗೆ ಮತ್ತು ಸಂಜೆ ಪೀಕ್ ಅವರ್‌ನಲ್ಲಿ ಸರಾಸರಿ ಪರ್ಟಿಕ್ಯುಲೇಟ್ ಮ್ಯಾಟರ್ 2.5 ಪ್ರತಿ ಘನ ಮೀಟರ್‌ಗೆ 43 ರಿಂದ 54 ಮೈಕ್ರೋಗ್ರಾಂಗಳ ನಡುವೆ ಇತ್ತು ಎಂದು ತೋರಿಸಿದೆ. ಫೆಬ್ರವರಿ 10 ರಂದು 112-114 ಮೈಕ್ರೋಗ್ರಾಂ/ಘನ ಮೀಟರ್‌ಗೆ ತಲುಪಿತು ಎಂದು ತೋರಿಸಿದೆ.

# ಸಾಲದ ಶ್ಯೂರಿಟಿಗೆ ಸಹಿ ಹಾಕುವಂತೆ ಬೆದರಿಕೆ: ಮನನೊಂದ ಮಹಿಳೆ ಆತ್ಮಹತ್ಯೆ

**ಹಾಸನ:** ಸಾಲದ ಶ್ಯೂರಿಟಿಗೆ ಸಹಿ ಹಾಕುವಂತೆ ದಂಪತಿ ಬೆದರಿಕೆ ಹಾಕಿದ್ದರಿಂದ ಮನನೊಂದು ಮಹಿಳೆಯೊಬ್ಬರು ಡೆತ್ ನೋಟ್ ಬರೆದಿಟ್ಟು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೇಲೂರಿನ ಬಿಕ್ಕೋಡು ಗ್ರಾಮದಲ್ಲಿ ನಡೆದಿದೆ.

ಮೃತ ಮಹಿಳೆಯನ್ನು ಜಮುನಾ (44) ಎಂದು ಗುರುತಿಸಲಾಗಿದೆ. 10 ಲಕ್ಷ ರೂ. ಸಾಲಕ್ಕೆ ಶ್ಯೂರಿಟಿಗೆ ಸಹಿ ಹಾಕುವಂತೆ ಜಮುನಾ ಅವರನ್ನು ಸಂದೀಪ್, ಧನುಶ್ರೀ ದಂಪತಿ ಪದೇ ಪದೇ ಒತ್ತಾಯಿಸುತ್ತಿದ್ದರು ಎನ್ನಲಾಗಿದೆ. ಇದಕ್ಕೆ ಜಮುನಾ ಒಪ್ಪದೆ ಇದ್ದಾಗ ಮಗನನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದರು ಎಂದು ಆರೋಪಿಸಲಾಗಿದೆ.

ಇದೇ ವಿಚಾರಕ್ಕೆ ಡೆತ್‌ನೋಟ್‌ನಲ್ಲಿ ದಂಪತಿ ವಿರುದ್ಧ, ನನ್ನ ಮನೆ ಹಾಳು ಮಾಡುವ ಆಸೆ ಇಟ್ಟುಕೊಂಡಿದ್ದಾರೆ. ನಾನು ಸಾಯುತ್ತಿದ್ದೇನೆ. ನನ್ನ ಸಾವಿಗೆ ಸಂದೀಪ್-ಧನುಶ್ರೀ ಕಾರಣ ಎಂದು ಬರೆದಿಟ್ಟು ವಿಷ ಸೇವಿಸಿ ಮಹಿಳೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.



ಈ ಸಂಬಂಧ ಮೃತ ಜಮುನಾ ಪುತ್ರ ಸಾತ್ವಿಕ್ ಪೊಲೀಸರಿಗೆ ದೂರು ನೀಡಿದ್ದಾನೆ. ಆರು ತಿಂಗಳ ಹಿಂದೆ ಸಾತ್ವಿಕ್ ತಂದೆ ಅನಾರೋಗ್ಯದಿಂದ ಸಾವನ್ನಪ್ಪಿದ್ದು, ಇದೀಗ ತಾಯಿ ಕಳೆದುಕೊಂಡು ಅನಾಥನಾಗಿದ್ದಾನೆ. ಸ್ಥಳಕ್ಕೆ ಅರೇಹಳ್ಳಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

# ಕೌಟುಂಬಿಕ ಕಲಹಕ್ಕೆ ಮನನೊಂದು 3 ಮಕ್ಕಳೊಂದಿಗೆ ಕೃಷ್ಣಾ ನದಿಗೆ ಹಾರಿದ ತಾಯಿ

**ಚಿಕ್ಕೋಡಿ:** ಕೌಟುಂಬಿಕ ಕಲಹಕ್ಕೆ ಮನನೊಂದು ಮಹಿಳೆಯೊಬ್ಬರು 3 ಮಕ್ಕಳೊಂದಿಗೆ ಕೃಷ್ಣಾ ನದಿಗೆ ಹಾರಿದ್ದಾರೆ. ಇಬ್ಬರು ಮಕ್ಕಳು ಮತ್ತು ತಾಯಿ ಸಾವನ್ನಪ್ಪಿದ್ದು, 1 ಮಗು ಪಾರಾಗಿರುವ ಘಟನೆ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲೂಕಿನ ಚಿಂಚಲಿ ಪಟ್ಟಣದಲ್ಲಿ ನಡೆದಿದೆ.

ತಾಯಿ ಶಾರದಾ ಡಾಲೆ(32) ಮಕ್ಕಳಾದ ಅಮೃತಾ(14), ಆದರ್ಶ(8) ಮೃತರು. ಅನುಕ್ಷಾ ಡಾಲೆ ಬದುಕುಳಿದಿದ್ದು, ರಾಯಭಾಗ ಆಸ್ಪತ್ರೆಗೆ ದಾಖಲಿಸಲಾಗಿದೆ.

ಪತಿ ಅಶೋಕ ಡಾಲೆ(45) ಪ್ರತಿ ನಿತ್ಯ ಕುಡಿದು ಬಂದು ಪತ್ನಿ ಹಾಗೂ ಮಕ್ಕಳಿಗೆ ಕಿರುಕುಳ ನೀಡುತ್ತಿದ್ದ. ಇದರಿಂದ ಮನನೊಂದ ಶಾರದಾ ಮೂವರು ಮಕ್ಕಳೊಂದಿಗೆ ನದಿಗೆ ಹಾರಿದ್ದಾರೆ. 1 ಮಗುವನ್ನು ಕೂಡಲೇ ರಕ್ಷಣೆ ಮಾಡಿದ ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದಾರೆ ಎಂದು ಪೊಲೀಸ್ ತಿಳಿಸಿದ್ದಾರೆ. ಅಶೋಕ ಡಾಲೆಯನ್ನು ಕುಡಚಿ ಪೊಲೀಸರ ವಶಕ್ಕೆ ಪಡೆದಿದ್ದು, ವಿಚಾರಣೆ ನಡೆಸುತ್ತಿದ್ದಾರೆ. ಕುಡಚಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com